: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರೌಢ ಶಿಕ್ಷಣ ಮಂತ್ರಿ ಅವರ ಪರವಾಗಿ ;

1976 ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 45(2)ನೇ ಕಲಮಿನ ಮೇರೆಗೆ; 1993-94ನೇ ಸಾಲಿನ ಮಂಗಳೂರು ವಿಶ್ವವಿದ್ಯಾಲಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಅವರ ಪರವಾಗಿ

1993 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಕಲಮಿನ ಮೇರೆಗೆ; 1993-94ನೇ ಸಾಲಿನ ಬಳ್ಳಾರಿ ಜಿಲ್ಲಾ ಪಂಚಾಯತ್ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

IV. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)ಮಾನ್ಯ ಅಧ್ಯಕ್ಷರೆ, ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕ ಮಂತ್ರಿ) ಅವರ ಪರವಾಗಿ

1956ರ ಕಂಪೆನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ; 1994-95ನೇ ಸಾಲಿನ ಮೈಸೂರು ಶುಗರ್ ಕಂಪನಿ ಲಿಮಿಟೆಡ್ 61ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಡಿ. ನಾರಾಯಣದಾಸ್ : ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಮುಜರಾಯಿ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ದತ್ತಿ ಸಂಸ್ಥೆಗಳ ಕುರಿತು ಎರಡನೇ ವರದಿ, ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವೈಖರಿಯ ಎರಡನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿ (ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)ಯವರು ಸದನಕ್ಕೆ ಇನ್ನೂ ಬಾರದೆ ಇರುವುದರಿಂದ ಅವರ ಪರವಾಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ನಾಲ್ಕನೇ ವರದಿಯನ್ನು ನಾನೇ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1996-97ನೇ ಸಾಲಿನ ಆಯುವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಮಾನ್ಯ ಹಣಕಾಸು ಮಂತ್ರಿಗಳಿಂದ ಉತ್ತರ

+ ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, 1996-97ನೇ ಆಯುವ್ಯಯದ ಮೇಲೆ ಸುಮಾರು 22 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ವಿರೋಧಪಕ್ಷದ ನಾಯಕರು, ಇತರೆ ಪಕ್ಷಗಳ ನಾಯಕರು ಹಾಗೂ ಬೇರೆ ಮಾನ್ಯ ಸದಸ್ಯರು

ಸೇರಿ ಈ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸಲಹೆಗಳನ್ನು ಅವರ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅದರ ಜೊತೆಗೆ ಕೆಲವು ಟೀಕೆಗಳನ್ನು ಕೂಡ ಮಾಡಿದ್ದಾರೆ. ಅವೆಲ್ಲವನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ ಎನ್ನುವ ಮಾತನ್ನು ತಿಳಿಸಲಿಕ್ಕೆ ಬಯಸುತ್ತೇನೆ. ಅನೇಕ ಜನ ಮಾನ್ಯ ಸದಸ್ಯರು ಬಹಳ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ಈ ವರ್ಷದ ಆಯವ್ಯಯದಲ್ಲಿ ನಾವೇನು ತೆರಿಗೆ ಸುಧಾರಣಾ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದರ ಬಗ್ಗೆ ಬಹುತೇಕ ಮಾನ್ಯ ಸದಸ್ಯರು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಖರ್ಗೆಯವರೂ ಕೂಡ ಅದರ ಬಗ್ಗೆ ಒಳ್ಳೆಯ ಮಾತನಾಡಿದ್ದಾರೆ, ಮಾನ್ಯ ಯಡಿಯೂರಪ್ಪನವರೂ ಮಾತನಾಡಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರೂ ಸಹ ಮಾತನಾಡಿದ್ದಾರೆ.

ಈ ತೆರಿಗೆ ಸುಧಾರಣೆ ಬಗ್ಗೆ ಹೇಳುವುದಾದರೆ, ಭಾರತ ದೇಶದಲ್ಲಿ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಇಷ್ಟೊಂದು ಗಣನೀಯ ಸುಧಾರಣೆ ಮಾಡಿರತಕ್ಕಂಥದ್ದು ಎನ್ನುವಂಥ ಮಾತನ್ನು ಮಾನ್ಯ ಸದಸ್ಯರಿಗೆ ನಾನು ತಿಳಿಸಲಿಕ್ಕೆ ಬಯಸುತ್ತೇನೆ. ಬಹಳಷ್ಟು ಪದಾರ್ಥಗಳ ಮೇಲೆ ತೆರಿಗೆಯನ್ನು ಇಳಿಸತಕ್ಕಂಥ ಮತ್ತು ಅಲ್ಲಿ ಇಲ್ಲಿ ಕೆಲವು ಕಡೆ ಸಾಮಾನ್ಯ ಜನರಿಗೆ ದೊರೆಯಾಗದಂತೆ ಇರತಕ್ಕಂಥ ಪದಾರ್ಥಗಳ ಮೇಲೆ ಸ್ವಲ್ಪ ಏರಿಸಿರತಕ್ಕಂಥದ್ದು ಕೂಡ ಇಲ್ಲಿ ಆಗಿದೆ. ಒಟ್ಟಾರೆ ಈ ಒಂದು ಪ್ರಾಮಾಣಿಕ ಪ್ರಯತ್ನವನ್ನು ಬಹಳಷ್ಟು ಮಾನ್ಯ ಸದಸ್ಯರು ಸ್ವಾಗತ ಮಾಡಿದ್ದಾರೆ. ರಾಜ್ಯದ ಎಲ್ಲಾ ಕಡೆಯೂ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಕೂಡ ಬಂದಿದೆ ಎನ್ನತಕ್ಕಂಥ ಮಾತನ್ನು ತಿಳಿಸಲಿಕ್ಕೆ ಬಯಸುತ್ತೇನೆ. ಅದಕ್ಕಾಗಿ ಮಾನ್ಯ ಸದಸ್ಯರಿಗೆ ನಾನು ನನ್ನ ಅಭಿನಂದನೆಗಳನ್ನು ಕೂಡ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ. ಇದು ನನ್ನ ಎರಡನೆಯ ಆಯವ್ಯಯ ನನ್ನ ಮೊದಲನೆಯ ಆಯವ್ಯಯದಲ್ಲಿ ಯಾವ ಕ್ಷೇತ್ರಗಳಿಗೆ ಆದ್ಯತೆಯನ್ನು ಕೊಟ್ಟಿದ್ದೆ. ನಮ್ಮ ಸರ್ಕಾರದ ಬದ್ಧತೆಗಳು ಕೂಡ ಯಾವ ಕ್ಷೇತ್ರಗಳಿಗೆ ಇವೆ, ಅದನ್ನು ಈ ವರ್ಷದ ಆಯವ್ಯಯದಲ್ಲೂ ಕೂಡ ಇನ್ನು ಹೆಚ್ಚು ಒತ್ತನ್ನು ಕೊಟ್ಟು ಮುಂದುವರೆಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ ಎಂಬ ಮಾತನ್ನು ಹೇಳ ಬಯಸುತ್ತೇನೆ. ನಾವು ಅಧಿಕಾರಕ್ಕೆ ಬಂದು ಒಂದು ವರ್ಷ ಮೂರು ತಿಂಗಳುಗಳಾಗುತ್ತದೆ. ಮಾರ್ಚ್ 11ನೇ ತಾರೀಖು ಆದರೆ ಒಂದು ವರ್ಷ ಮೂರು ತಿಂಗಳು ಅಂದರೆ 15 ತಿಂಗಳುಗಳಾಗುತ್ತದೆ. ಈ ಒಂದು ವರ್ಷ ಮೂರು ತಿಂಗಳಲ್ಲಿ ಅನೇಕ ಸಮಸ್ಯೆಗಳನ್ನು ಸರ್ಕಾರ ಎದುರಿಸಿದೆ. ಈ ಸಮಸ್ಯೆಗಳನ್ನು ಮಾನ್ಯ ವಿರೋಧ ಪಕ್ಷದ ಸಹಕಾರದೊಂದಿಗೆ ನಾಡಿನ ಜನತೆಯ ಸಹಕಾರದೊಂದಿಗೆ ಅವುಗಳನ್ನು ಸಮರ್ಥವಾಗಿ ಎದುರಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಕೂಡ ಮಾಡಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಗೊತ್ತಿರುವ ರೀತಿಯಲ್ಲಿ, ಮಾನ್ಯ ಸದಸ್ಯರುಗಳಿಗೂ ಗೊತ್ತಿರತಕ್ಕಂಥ ರೀತಿಯಲ್ಲಿ , ರಾಜ್ಯದ ಸಂಪನ್ಮೂಲದ ಕ್ರೋಢೀಕರಣಕ್ಕೆ ಇತಿಮಿತಿ ಇದೆ. ನಾವು ಮಾರಾಟ ತೆರಿಗೆ, ಸಾಲ ಎತ್ತತಕ್ಕಂಥದ್ದು ಕೇಂದ್ರ ಸರ್ಕಾರದ ಸಹಾಯ-ಇವುಗಳ ಮೇಲೆ ಅವಲಂಬನೆಯಾಗಬೇಕಾಗುತ್ತದೆ ಕೇಂದ್ರಸರ್ಕಾರಕ್ಕೆ

ಸಂಪನ್ಮೂಲ ಕ್ರೋಢೀಕರಣಕ್ಕೆ ಬಹಳಷ್ಟು ಅವಕಾಶಗಳು ಇವೆ. ನಾವು ಫೆಡರಲ್ ರಾಜ್ಯವೆಂದು ಒಪ್ಪಬೇಕು. ಅದರಲ್ಲಿ ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಸಹಾಯದಿಂದ ಈ ದೇಶದ ರಾಜ್ಯದ ಜನತೆಯ ಸಮಸ್ಯೆಗಳನ್ನು ನಾವು ಬಗೆಹರಿಸಬೇಕಾಗುತ್ತದೆ. ಬಡತನ ನಿವಾರಣೆ ಇರಬಹುದು, ನಿರುದ್ಯೋಗದ ಸಮಸ್ಯೆಗಳು ಇರಬಹುದು, ಗ್ರಾಮೀಣ ಪ್ರದೇಶಗಳಲ್ಲಿ ಇನ್ನು ಕೂಡ ಮೂಲಭೂತ ಸೌಲಭ್ಯಗಳನ್ನು ಕೊಡಲು ಸಾಧ್ಯವಾಗದ ಇರತಕ್ಕಂಥ ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕಂಥ ಕಾರ್ಯಕ್ರಮಗಳು ಇರಬಹುದು. ಈ ದಿಕ್ಕಿನಲ್ಲಿ ಕೂಡ ಪ್ರಯತ್ನ ಮಾಡಿದಾಗ, ಕೇಂದ್ರ ಮತ್ತು ರಾಜ್ಯಗಳು ಇವುಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಸ್ವಾತಂತ್ರ್ಯ ಬಂದು 48 ವರ್ಷಗಳಾದರೂ ಕೂಡ ಇನ್ನು ಈ ಸಮಸ್ಯೆಗಳು ಜನತೆಯನ್ನು ತಿನ್ನುತ್ತಿವೆ ಎನ್ನತಕ್ಕಂಥ ಚಿತ್ರವನ್ನು ನಾವು ಇಡೀ ದೇಶದಲ್ಲಿ ಕಾಣುತ್ತೇವೆ. ನಾನು ಕಳೆದ ವರ್ಷದ ಆಯವ್ಯಯದಲ್ಲಿ ಕೂಡ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದೆ. 10ನೇ ಹಣಕಾಸಿನ ಆಯೋಗ ಏನು ಶಿಫಾರಸ್ಸು ಮಾಡಿದೆ, ಅದು ಸುಮಾರು ಶೇ. 29 ಒಟ್ಟು ಸಂಪನ್ಮೂಲ ಕೇಂದ್ರ ಸರ್ಕಾರಕ್ಕೆ ಬರತಕ್ಕಂಥ ಡೆವಲ್ಯೂಷನ್ ಆಫ್ ಫಂಡ್ಸ್-ಅದರಲ್ಲೆ ಆಗಬೇಕು, ಅದಕ್ಕೆ ರಾಜ್ಯಾಂಗ ತಿದ್ದುಪಡಿಯಾಗಬೇಕೆಂಬ ಒತ್ತಾಯವನ್ನು ಕಳೆದ ಬಾರಿ ಮಾಡಿದ್ದೆ. ಆ ಶೇ. 29ಕ್ಕೆ ಬದಲಾಗಿ ಶೇ. 40ರಷ್ಟಾದರೂ ಕೂಡ ರಾಜ್ಯಗಳಿಗೆ ಕೊಡಬೇಕು. ರಾಜ್ಯಗಳ ಮೇಲೆ ಹೆಚ್ಚು ಜವಾಬ್ದಾರಿ ಇದೆ. ರಾಜ್ಯಕ್ಕೆ ಇರತಕ್ಕಂಥ ಸಂಪನ್ಮೂಲಗಳು ಬಹಳ ಸೀಮಿತವಾಗಿದೆ. ಆದರಿಂದ ಕೇಂದ್ರ ಮತ್ತು ರಾಜ್ಯಗಳ ಹಂಚಿಕೆಯಲ್ಲಿ ಕನಿಷ್ಟ ಪಕ್ಷ ನೂರಕ್ಕೆ ನಲವತ್ತರಷ್ಟಾದರೂ ಕೂಡ ಸಂಪನ್ಮೂಲಗಳ ವರ್ಗಾವಣೆಯಾಗಬೇಕೆಂಬ ಒತ್ತಾಯವನ್ನು ಕಳೆದ ವರ್ಷ ಕೂಡ ಮಾಡಿದ್ದೆ. ಈ ವರ್ಷವೂ ಕೂಡ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತಂದು, ಕೇಂದ್ರ ಸರ್ಕಾರ ಶೇ. 40ರಷ್ಟು ವರ್ಗಾವಣೆ ಮಾಡತಕ್ಕಂಥ ಕಾರ್ಯವನ್ನು ಮಾಡಬೇಕೆಂಬ ಒತ್ತಾಯವನ್ನು ಈ ಸದನದ ಮೂಲಕ ನಾನು ಮಾಡಲು ಬಯಸುತ್ತೇನೆ. ಇದರ ಜೊತೆಗ 10ನೇ ಆಯೋಗ ಸಾಲದ ಮೇಲಿನ ಒಂದು ಯೋಜನೆಯನ್ನು ಕೂಡ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಇದಕ್ಕೆ ಒಂದು ಸಮಗ್ರವಾದ ಸಾಲದ ಯೋಜನೆಯನ್ನು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಏಕೆಂದರೆ ಇಲ್ಲಿಯವರೆ ಕೇಂದ್ರ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. 10ನೇ ಆಯೋಗದಲ್ಲಿ ಆಗಿರತಕ್ಕಂಥ ಒಂದು ಶಿಫಾರಸ್ಸು ಏನು ಎಂದರೆ, ಅವರು ಮಾಡಿರತಕ್ಕಂಥದ್ದು, ಏನೆಂದರೆ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡುತ್ತೇವೆಂದು ಏನು ಹಣವನ್ನು ನಮೂದು ಮಾಡಿದ್ದರು, ಸುಮಾರು 82 ಕೋಟಿ ರೂಪಾಯಿಗಳು-ಅದನ್ನು ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವು ಈ ವರ್ಷದ ನಮ್ಮ ಬಜೆಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡತಕ್ಕಂಥದ್ದನ್ನು ಈ ವರ್ಷದ ಆಯವ್ಯಯದಲ್ಲಿ ನಾನು ಇಟ್ಟಿದ್ದೇನೆಂಬ ಮಾತನ್ನು ಕೂಡ ತಿಳಿಸಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಕೇಂದ್ರ ಸರ್ಕಾರ ವಿಧಿಸತಕ್ಕಂಥ ಬಡ್ಡಿ ಕೂಡ ಹೆಚ್ಚಾಗುತ್ತಿವೆ. ಯೋಜನೆಗಳಿಗೆ ಕೊಡತಕ್ಕಂಥ ಬಡ್ಡಿ

ಅದು ದೇಶೀಯ ನೆರವು ಇರಬಹುದು, ವಿದೇಶಿ ನೆರವು ಇರಬಹುದು, ಅದು ಇವತ್ತು ಶೇ. 11ರಿಂದ ಶೇ. 13 ಆಗಿದೆ. ಮಾರುಕಟ್ಟೆಯಿಂದ ಎತ್ತತಕ್ಕಂಥ, ಸಾಲಗಳು ಕೂಡ ಇವತ್ತು ಜಾಸ್ತಿಯಾಗಿದೆ. ಶೇ. ಹನ್ನೊಂದೂವರೆಯಿಂದ ಶೇ. 13ಕ್ಕೆ ಹೋಗಿರತಕ್ಕಂಥದ್ದು. ಹೀಗೆ ನಮಗೆ ಬರತಕ್ಕಂಥ ಸಾಲಗಳ ಮೇಲಿನ ಬಡ್ಡಿಯು ಕೂಡ ಹೆಚ್ಚಾಗತಕ್ಕಂಥದ್ದು ಆಗಿ, ನಮ್ಮ ಸಂಪನ್ಮೂಲಗಳ ಮೇಲೆ ಭಾರ ಬೀಳುತ್ತದೆ. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಇವೆಲ್ಲ ರಾಜ್ಯಸರ್ಕಾರದ ಸಂಪನ್ಮೂಲಗಳ ಮೇಲೆ ಒತ್ತಡಗಳಾಗುತ್ತವೆ. ಹೆಚ್ಚು ಬಡ್ಡಿಯನ್ನು ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರ ಹೆಚ್ಚು ಆದಾಯವನ್ನು ವರ್ಗಾವಣೆ ಮಾಡದ ಇರತಕ್ಕಂಥದ್ದು. ಇದರಿಂದಾಗಿ ರಾಜ್ಯಸರ್ಕಾರದ ಪ್ರಗತಿಗೆ ಈ ಮೂಲಕ ಸ್ವಲ್ಪ ಮಟ್ಟಿನ ಹೊಡೆತವಾಗುತ್ತದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ನಮ್ಮ ಆಯವ್ಯಯದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ರಾಜ್ಯಮಟ್ಟದಲ್ಲಿ ಚರ್ಚೆಯಾಗಬೇಕು. ಬಡ್ಡಿದರ ನಿಗದಿ ಮಾಡುವುದಕ್ಕೋಸ್ಕರವಾಗಿ ಮತ್ತು ಕೇಂದ್ರಸರ್ಕಾರ ಕೊಡತಕ್ಕಂಥ ಅನೇಕ ನೆರವು, ಪಬ್ಲಿಕ್ ಬಾರೋಯಿಂಗ್ಸ್ ಮೇಲೆ ಹಾಕತಕ್ಕಂಥ ಬಡ್ಡಿದರಗಳು ಇದರ ಬಗ್ಗೆ ಒಂದು ನಿರ್ದಿಷ್ಟವಾದಂಥ ತೀರ್ಮಾನ ಆಗಬೇಕಾಗುತ್ತದೆ. ಅದಕ್ಕೋಸ್ಕರ ಈ ಸದನದ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ರಾಷ್ಟ್ರಮಟ್ಟದಲ್ಲಿ, ಇಂತಹ ಒಂದು ಚಿಂತನೆ ಅತ್ಯಂತ ಅವಶ್ಯವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಒಂದು ಮಾತನ್ನು ಈ ವರ್ಷದ ಆಯವ್ಯಯದಲ್ಲಿ ಹೇಳಿದ್ದೇನೆ. ಕಳೆದ ಒಂದು ವರ್ಷದಲ್ಲಿ ಜನತೆಗೆ ಕೊಟ್ಟಂಥ ಭರವಸೆಯನ್ನು ಈಡೇರಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ರಾಜ್ಯದ ಸಂಪನ್ಮೂಲಗಳ ಮೇಲೆ ಎಷ್ಟೇ ಹೊಡೆತ ಇದ್ದರೂ ಸಹ ನಾವು ಏನು ಜನತೆಗೆ ಭರವಸೆಯನ್ನು ಕೊಟ್ಟಿದ್ದೆವು, ಕಳೆದ ವರ್ಷದ ಆಯವ್ಯಯದಲ್ಲಿ ನಾವು ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು ಆ ಭರವಸೆಗಳನ್ನು, ಆ ಕಾರ್ಯಕ್ರಮಗಳನ್ನು ಈಡೇರಿಸತಕ್ಕಂಥ, ಜಾರಿಗೆ ಕೊಡತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ನಿಮ್ಮ ಸಾಧನೆಗಳು, ಭರವಸೆಗಳು, ಎಲ್ಲಿ ಎಂದು ಹೇಳಿದರು. ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆ ನಂತರ ನಾನು ಬರುತ್ತೇನೆ. ಜನತೆ ನಿಮ್ಮಲ್ಲಿ ಎಲ್ಲಿ ವಿಶ್ವಾಸವಿದೆ, ವಿಶ್ವಾಸವನ್ನು ಕಳೆದುಕೊಂಡು ಬಿಟ್ಟಿದ್ದಾರೆ ಎನ್ನುವಂಥ ಮಾತನ್ನು ಹೇಳಿದರು. ನಾವು ಅಧಿಕಾರಕ್ಕೆ ಬಂದ ಮೇಲೆ ಚುನಾವಣೆಗಳನ್ನು ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ನಗರ ಸಭೆಗಳು ಮತ್ತು ನಗರಪಾಲಿಕೆಗಳ ಚುನಾವಣೆಗಳನ್ನು ನಡೆಸಿದ್ದೇವೆ. ಬೆಂಗಳೂರು ನಗರಪಾಲಿಕೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟು ನಡೆಸಿದ್ದೇವೆ. ಅಲ್ಲಿ ಗೃಹ ಇಲಾಖೆಯ ಅಡ್ವೈಸ್ ಮೇಲೆ ಬಿಟ್ಟಿದ್ದೇವೆ. ಗೃಹ ಇಲಾಖೆಯ ವರದಿಯ ಮೇಲೆ ಅದರ ಚುನಾವಣೆಗಳನ್ನು ನಡೆಸಲಿಲ್ಲ. ನಾವು ಯಾವತ್ತೂ ಚುನಾವಣೆಗಳನ್ನು ನಡೆಸಲು ಹೆದರಿಕೊಳ್ಳುವವರಲ್ಲ. ಹಿಂದೆಯೂ ಸಹ 1983-84ರಲ್ಲೂ ಚುನಾವಣೆಗಳನ್ನು ನಡೆಸಿದ್ದೇವೆ. ನಾವು ಐದು ಬಾರಿ

ಚುನಾವಣೆಗೆ ಜನತ ಮುಂದ ಹೋಗಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಬೆಂಗಳೂರು ಮಂಗಳೂರನ್ನು ಬಿಟ್ಟು,

ಶ್ರೀ ಸಿದ್ದರಾಮಯ್ಯ : ಅಲ್ಲಿಗೂ ಹೋಗುತ್ತೇವೆ. ಅಲ್ಲೂ ಜನರು ಏನು ತೀರ್ಪು ಕೊಡುತ್ತಾರೆ, ನೋಡೋಣ, ಈಗಾಗಲೆ ಕೊಟ್ಟಿದ್ದಾರಲ್ಲ.

ಒಬ್ಬ ಮಾನ್ಯ ಸದಸ್ಯರು : ಈಗ ಅಲ್ಲಿ ಸಮಯ ಕ್ಲಿಯರಾಗಿತ್ತಲ್ಲಾ, ಈಗ ಮಾಡಬಹುದಾಗಿತ್ತು.

ಶ್ರೀ ಸಿದ್ದರಾಮಯ್ಯ : ನಾವು ಚುನಾವಣೆಗಳನ್ನು ನಡೆಸುವುದಕ್ಕೆ ಯಾವತ್ತು ಹಿಂದೆ ಬೀಳುವುದಿಲ್ಲ. ಜನಗಳ ಮುಂದೆ ನಾವು ಹೋಗುವುದಕ್ಕೆ ತಯಾರಾಗಿದ್ದೇವೆ. ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಯನ್ನು ನಾವು ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ನಡೆಸಿದ್ದೇವೆ. ನಗರಪಾಲಿಕೆಯ ಚುನಾವಣೆಯನ್ನು ನಾವು ಎಲ್ಲಾ ಕಡೆಯಲ್ಲಿಯೂ ಮಾಡಿದ್ದೇವೆ. ಆದರೆ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಮಾಡಲಿಲ್ಲ. ಇಲ್ಲಿ ಕಾವೇರಿ ಗಲಾಟೆ ಇತ್ತು, ಅಲ್ಲಿ ಚಳುವಳಿ ನಡೆಯುತ್ತಿತ್ತು. ಆ ಕಾರಣದಿಂದಾಗಿ ನಾವು ಚುನಾವಣೆಗಳನ್ನು ಮಾಡಲಿಲ್ಲ. ಇಲ್ಲದಿದ್ದರೆ ನಾವು ಅಲ್ಲಿಯೂ ಚುನಾವಣೆಯನ್ನು ಮಾಡುತ್ತಿದ್ದೆವು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವು ಪ್ರಜಾತಂತ್ರದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವವರು. ಪ್ರಜಾತಂತ್ರಕೆ, ಪ್ರಜಾತಂತ್ರ ಮೌಲ್ಯಗಳಿಗೆ ಬದ್ಧರಾಗಿರುವಂಥವರು. ನಾವು ಅಧಿಕಾರಕ್ಕೆ ಬಂದಾಗ ಸ್ಥಳೀಯ ಸಂಸ್ಥೆಗಳಿಗೆ ಎಲ್ಲಾ ಕಡೆ ಚುನಾವಣೆಗಳನ್ನು ನಡೆಸಿದ್ದೇವೆ. ಅಧಿಕಾರ ವಿಕೇಂದ್ರಿಕರಣದಲ್ಲಿ ನಾವು ನಮ್ಮ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಗೊಳಿಸಿದ್ದೇವೆ, ಯಶಸ್ವಿಯಾಗಿದ್ದೇವೆ. ಜನರು ನಮ್ಮ ಬದ್ದತೆಗಳನ್ನು ಮತ್ತು ನಮ್ಮ ಕಾರ್ಯಕ್ರಮಗಳನ್ನು ಮೆಚ್ಚಿ ಮತ್ತೆ ನಮಗೆ ಈ ಎರಡು ಚುನಾವಣೆಗಳಲ್ಲಿ ನಮಗೆ ಆಶೀರ್ವಾದವನ್ನು ಮಾಡಿದ್ದಾರೆಂಬ ಮಾತನ್ನು ಮಾನ್ಯ ಸದಸ್ಯರುಗಳ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಜನತೆ ನಮ್ಮ ಮೇಲೆ ವಿಶ್ವಾಸವನ್ನು ಕಳೆದುಕೊಂಡಿಲ್ಲ. ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆಂದು ಮಾನ್ಯ ರಾಮಸ್ವಾಮಿಯವರಿಗೆ ಹೇಳುತ್ತೇನೆ. ನಾವು ಜನತೆಯ ವಿಶ್ವಾಸವನ್ನು ಕಳೆದುಕೊಂಡರೆ ನಾವು ಈ ಕುರ್ಚಿಯಲ್ಲೇ ಇರುವುದಿಲ್ಲ. ಅದು ನಮ್ಮ ನಂಬಿಕೆ ಮತ್ತು ಬದ್ದತೆ ಇದನ್ನು ಬಹಳ ಸ್ಪಷ್ಟ ಪಡಿಸುವುದಕ್ಕಿಚ್ಛಿಸುತ್ತೇನೆ. ಇದನ್ನು ನಾನು ಹೆಚ್ಚು ವಿಸ್ತಾರ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ವಿಶ್ವಾಸವನ್ನು ಕಳೆದುಕೊಂಡರೆ ಈ ಕುರ್ಚಿಯಲ್ಲಿ ಇರುವುದಿಲ್ಲವೆಂದು ಹೇಳುತ್ತೀರಿ. ಆದರೆ ಅವರು ಮುಖ್ಯ ಮಂತ್ರಿಯವರು ಬಿಡುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ಅದು ನಿಮ್ಮ ಜಾಯಮಾನ, ಅಧಿಕಾರಕ್ಕೆ ಅಂಟಿಕೊಂಡು

ಕುಳಿತುಕೊಳ್ಳುವುದು ಕಾಂಗ್ರೆಸ್ ಜಾಯಮಾನ ಮತ್ತು ಸಂಸ್ಕೃತಿ ಇತಿಹಾಸದಲ್ಲಿ ಯಾರು ಯಾರು ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ, ಯಾರು ಯಾರು ಅಧಿಕಾರವನ್ನು ಬಿಟ್ಟಿದ್ದಾರೆ ಎನ್ನತಕ್ಕಂಥದ್ದು 1984ರಲ್ಲಿ ಲೋಕಸಭೆಯ ಚುನಾವಣೆಯಲ್ಲಿ ಸೋತ ತಕ್ಷಣ ನಾವು ಅದು ರಾಜ್ಯಕ್ಕೆ ಸಂಬಂಧ ಪಡದಿದ್ದರೂ ಕೂಡ ರಾಜೀನಾಮೆಯನ್ನು ಕೊಟ್ಟೆವು. ಅಧಿಕಾರಕ್ಕೆ ಅಂಟಿಕೊಳ್ಳುವಂತಹ ಜಾಯಮಾನ ನಮ್ಮ ಪಕ್ಷದಲ್ಲ. ಜನರಲ್ಲಿ ವಿಶ್ವಾಸವಿಲ್ಲವೆಂದರೆ ನಾವು ಐದು ನಿಮಿಷ ಅಧಿಕಾರದಲ್ಲಿ ಉಳಿಯುವುದಿಲ್ಲ. ಅದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಮತ್ತೆ 1985ರಲ್ಲಿ ವಿಧಾನಸಭಾ ಚುನಾವಣೆಗೆ ಹೋದೆವು. ಮಾನ್ಯ ಅಧ್ಯಕ್ಷರೆ ಅದೆಲ್ಲ ತಮಗೆ ಗೊತ್ತಿರುವಂಥಾದ್ದು, ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವಂಥ ವಿಚಾರವಾಗಿದೆ.

ಶ್ರೀ ಬಿ.ಆರ್. ಪಾಟೀಲ್ : ಸ್ವಾಮಿ ಈ ಸಾರಿಯೂ ಆ ರೀತಿ ಮಾಡುತ್ತೀರೋ?.

ಲೋಕಸಭೆಯಲ್ಲಿ ತಾವು ಸೋತರೆ...

ಮಾನ್ಯ ಒಬ್ಬ ಸದಸ್ಯರು : ಆ ರೀತಿ ನೀವು ಕನಸು ಕಾಣಿ, ಆ ತರಹ ಕನಸುಕಾಣಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹೇಳಿದ್ದೇನಲ್ಲಾ, ನಾವು ನಮ್ಮ ಪಕ್ಷದ ವಿಚಾರ, ನಾವು ಜನರ ವಿಶ್ವಾಸ ಕಳೆದುಕೊಂಡರೆ ಅಧಿಕಾರದಲ್ಲಿ ಮುಂದುವರೆಯುವಂತಹ ಪ್ರಯತ್ನವನ್ನು ನಾವು ಮಾಡುವುದಿಲ್ಲ. ಏಕೆಂದರೆ ನಾವು ಪ್ರಜಾತಂತ್ರದಲ್ಲಿ ಜನತೆಯ ತೀರ್ಪಿಗೆ ತಲೆ ಬಾಗುವಂತಹ ಜನರು. ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅದು ಈಗಾಗಲೆ ನಮ್ಮ ನಡೆವಳಿಕೆಯಿಂದ ಸಾಬೀತಾಗಿದೆ. ಆದುದರಿಂದ ಮತ್ತೊಮ್ಮೆ ಪದೇ ಪದೇ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಡಿಸೆಂಬರ್ 1994ರಲ್ಲಿ ಅಧಿಕಾರವನ್ನು ವಹಿಸಿಕೊಂಡಾಗ ನಾನು ಕಳೆದ ವರ್ಷ ಆಯವ್ಯಯವನ್ನು ಮಂಡಿಸುವಾಗ ಶ್ವೇತಪತ್ರವನ್ನು ಮಂಡಿಸಿದ್ದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಏನು ಎಂಬುದನ್ನು ಕೂಡ ಅವತ್ತು ನಾನು ಮಂಡಿಸಿದ್ದೆ. ಅವತ್ತು ಸುಮಾರು 527 ಕೋಟಿ ರೂಪಾಯಿಗಳ ಹೊರೆ ನಮ್ಮ ಮೇಲೆ ಇತ್ತು. ಅಂದರೆ ನಾವು ಅಧಿಕಾರ ವಹಿಸಿಕೊಂಡ ದಿನ ಟ್ರೆಜರಿಯಲ್ಲಿ ನೂರು ಕೋಟಿ ರೂಪಾಯಿಗಳ ಬಿಲ್ ಪಾವತಿಯಾಗಿರಲಿಲ್ಲ. 225 ಕೋಟಿ ರೂಪಾಯಿಗಳು ಪಿ.ಡಬ್ಲ್ಯೂ.ಡಿ ಮತ್ತು ಇರಿಗೇಷನ್ ಬಾಕಿ ಬಿಲ್ ಗಳು ಉಳಿದಿತ್ತು. ಪಿಯರ್ ಲೆಸ್ ಸಾಲ 158 ಕೋಟಿ ರೂಪಾಯಿಗಳು ಕೆನರಾ ಬ್ಯಾಂಕ್ ಸಾಲ ಇವೆಲ್ಲವೂ ಉಳಿದಿತ್ತು. ಇವತ್ತು ನಾವು ಅದೆಲ್ಲವನ್ನು ತೀರಿಸಿದ್ದೇವೆ. ಇಷ್ಟಾದರೂ ಕೂಡ ಕಡಿಮೆ ದುಡ್ಡಿನಲ್ಲಿ ಅಕ್ಕಿಯನ್ನು ಕೊಟ್ಟಿದ್ದೇವೆ. ಬಡ್ಡಿಮನ್ನಾ ಮಾಡುತ್ತೇವೆಂದು ಏನು ಹೇಳಿದ್ದೇವೆ, ಅದು 136 ಕೋಟಿ ರೂಪಾಯಿಗಳು ಕೊಡುವಂಥಾದ್ದನ್ನು ಮಾಡಿದ್ದೇವೆ. 1995-96ರಲ್ಲಿ ಏನೇನು ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು ಅವೆಲ್ಲ ಕಾರ್ಯಕ್ರಮಗಳನ್ನೂ ಕೂಡ ಜಾರಿಗೊಳಿಸುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ.

(ಗೊಂದಲ)

10.00 ಎ.ಎಂ.

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರ ಪೂರ್ಣ ಉತ್ತರ ಆದ ಮೇಲೆ ಕ್ಲಾರಿಫಿಕೇಷನ್ ಕೇಳಿ. ತಾವು ನೋಟ್ ಮಾಡಿಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಅವರ ಪಕ್ಷದವರಿಗೆ ಹೇಳಬೇಕು. ಆಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ ಮಾಡುತ್ತಿದ್ದೀರಿ ನೀವು. ಶಿವಪೂಜೆ ಆಗಲಿ. ಆಮೇಲೆ ಕರಡಿ ಆಟ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಕರಡಿ ಮುಂಚೆಯೇ ಬಂದುಬಿಟ್ಟಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಸದನಕ್ಕೆ ಬಂದಿದ್ದಾರೆ ಎನ್ನುವುದನ್ನು ನಮ್ಮ ಗಮನಕ್ಕೆ ತರುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಈಶ್ವರಪ್ಪನವರೇ ಇವತ್ತು ನಿಮ್ಮ ಸಮ್ಮೇಳನ ಇದೆಯಲ್ಲ. ಇವತ್ತು ನೀವು ಎಲ್ಲರೂ ಮಿಂಚುತ್ತಿದ್ದೀರಿ. ಸಮ್ಮೇಳನ ಇಲ್ಲಲ್ಲ ಇರುವುದು. ನೀವು, ಸಿದ್ಧರಾಮಯ್ಯನವರು, ಕೃಷ್ಣಮೂರ್ತಿ ಎಲ್ಲಾ ನಿಮ್ಮದೇ ಆಗಿದೆ. ಸಮ್ಮೇಳನ ಅಲ್ಲಿ ಮಾಡಿ, ಅಂದರೆ ಇಲ್ಲಿ ಶುರು ಮಾಡಿಬಿಟ್ಟಿರಲ್ಲ. ಮಾಡಿ, ನನಗೆ ಸಂತೋಷ. ಅವರು ಅಲ್ಲೆಲ್ಲಾ ಹೀಗೆ ಮಾತನಾಡುವುದಿಲ್ಲ. ಸಮ್ಮೇಳನವನ್ನು ಚೆನ್ನಾಗಿ ಮಾಡಿ.

ಶ್ರೀ ಸಿದ್ಧರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವರ್ಷದಲ್ಲಿ ನಾವು ಏನು ಮಾಡುತ್ತೇವೆ ಎಂದು ಹೇಳಿದ್ದೆವು, ಮತ್ತು ಏನು ಮಾಡಿದ್ದೇವೆ ಎನ್ನತಕ್ಕಂಥ ವಿಚಾರಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಬಹಳ ವಿವರವಾಗಿ ಹೇಳಿದ್ದಾರೆ. ಆದ್ದರಿಂದ ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಪುನರುಚ್ಚಾರ ಮಾಡಬೇಕಾದಂಥ ಅಗತ್ಯವಿಲ್ಲ. ಎಲ್ಲಾ ಮಾನ್ಯ ಸದಸ್ಯರ ಮುಂದೆ ಅವರು ಇಟ್ಟಿದ್ದಾರೆ. ಇಷ್ಟೆಲ್ಲಾ ಆರ್ಥಿಕ ಪರಿಸ್ಥಿತಿ ಇದ್ದರು ಕೂಡ 1995-96ರಲ್ಲಿ ಉತ್ತಮವಾದಂಥ ಹಣಕಾಸಿನ ನಿರ್ವಹಣೆಯನ್ನು ನಾವು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿರುವ ರೀತಿಯಲ್ಲಿ ತೆರಿಗೆ ಆದಾಯದಲ್ಲಿ ಸುಮಾರು 26 ಪರ್ಸೆಂಟ್ ಬೆಳವಣಿಗೆಯಾಗಿದೆ. ಕಳೆದ ವರ್ಷಕ್ಕೂ ಈ ವರ್ಷಕ್ಕೂ ನಾವು ಹೋಲಿಕೆ ಮಾಡಿ ನೋಡಿದಾಗ 26 ಪರ್ಸೆಂಟ್ ಬೆಳವಣಿಗೆಯಾಗಿದೆ. ಇದಕ್ಕೆ ಕಾರಣವೆಂದರೆ, ಆಡಳಿತದಲ್ಲಿ ಬಿಗಿ ಕ್ರಮ ತಂದಿದ್ದುದರಿಂದ, ಸೋರಿ ಹೋಗತಕ್ಕಂಥದ್ದನ್ನು ತಪ್ಪಿಸಲಿಕ್ಕೆ ಕ್ರಮ ತೆಗೆದುಕೊಂಡಿದ್ದುದರಿಂದ ಮತ್ತು ಪ್ರಾಮಾಣಿಕವಾಗಿ ವಸೂಲು ಮಾಡತಕ್ಕಂಥ ಎಲ್ಲಾ ಪ್ರಯತ್ನಗಳನ್ನು ಮಾಡಿದುದರಿಂದ

ನಾವು ತೆರಿಗೆ ವಸೂಲಿಯನ್ನು ಇಷ್ಟರಮಟ್ಟಿಗೆ ವಸೂಲು ಮಾಡಲಿಕ್ಕೆ ಸಾಧ್ಯವಾಯಿತು. ಇದು ಒಂದು ಗಣನೀಯವಾದಂಥ ಹೆಚ್ಚಳ ಎನ್ನತಕ್ಕಂಥ ಮಾತನ್ನು ಕೂಡ ಹೇಳಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಯಡಿಯೂರಪ್ಪನವರು ಅದಕ್ಕೆ ಒಳ್ಳೆಯ ಮಾತನ್ನೂ ಕೂಡ ಆಡಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಆಭಾರಿಯಾಗಿದ್ದೇನೆ. ಅದರ ಜೊತೆಗೆ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸುಮಾರು ಶೇಕಡ 27ಕ್ಕಿಂತಲೂ ಹೆಚ್ಚು ನಾವು ಬೆಳವಣಿಗೆಯನ್ನು ತಂದಿದ್ದೇವೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸುಮಾರು 3,500 ಕೋಟಿ ರೂಪಾಯಿಗಳನ್ನು ಈ ಸಲ ವಸೂಲು ಮಾಡಬೇಕು. ಅಲ್ಲಿ ಸೋರಿಹೋಗತಕ್ಕಂಥಾದ್ದೆಲ್ಲಾ ಇರುತ್ತದೆ. ಆ ಸಾರಿ ಅದನೆಲ್ಲಾ ತಡೆಗಟ್ಟಿ 12 ಪರ್ಸೆಂಟ್, 13 ಪರ್ಸೆಂಟ್ ಏನು ಇರುತ್ತಿತ್ತು, ಅದನ್ನು ಈ ಸಲ ದಾಖಲೆ ಬೆಳವಣಿಗೆಯನ್ನು ನಾವು ಕಮರ್ಷಿಯಲ್ ಮಾಡಿದ್ದೇವೆ. 3,500 ಕೋಟಿ ರೂಪಾಯಿಯ ಗುರಿಯನ್ನು ತಲುಪುತ್ತೇವೆ. ಹೋದ ಸಾರಿ 2,800 ಕೋಟಿಯಿಂದ ಈ ಸಾರಿ 3,700 ಕೋಟಿ ರೂಪಾಯಿ ಆಗುತ್ತದೆ. ಹಾಗೆಯೇ, ಸನ್ಮಾನ್ಯ ಜಾಲಪ್ಪನವರು, ರೆವಿನ್ಯೂ ಮಂತ್ರಿಗಳು, ಅವರ ಇಲಾಖೆಯಲ್ಲಿ, ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಸುಮಾರು 60 ಪರ್ಸೆಂಟು ಬೆಳವಣಿಗೆಯಾಗಿದೆ. ಒಂದು ಮಾತನ್ನು ಸನ್ಮಾನ್ಯ ಯಡಿಯೂರಪ್ಪನವರು ಅವರ ಭಾಷಣದಲ್ಲಿ ಹೇಳಿದರು. ಏನೆಂದರೆ, ನೀವು ಕಳೆದ ವರ್ಷ ಭಾರೀ ತೆರಿಗೆ ಹಾಕಿಬಿಟ್ಟಿರಿ, 254 ಕೋಟಿ ರೂಪಾಯಿಗಳನ್ನು ಹಾಕಿದಿರಿ. ಈ ಸಾರಿ ನೀವು ಇನ್ನೂ ತೆರಿಗೆ ಹಾಕಿಲ್ಲ ಎಂದು. ಅವರು ಮುಂದೆ ಕಾಯ್ದುಕೊಂಡಿರುವ ಜನಗಳಿಗೆ ಹೇಳುವಂಥ ಮಾತನ್ನು ಹೇಳಿದ್ದಾರೆ. ಕಳೆದ ಸಾರಿ ನಾವು ತೆರಿಗೆ ಹಾಕಿದ್ದುದು, ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಸ್ವಲ್ಪ ವ್ಯತ್ಯಾಸ, ಮಾರಾಟ ತೆರಿಗೆಯಲ್ಲಿ ನಾವು ತೆರಿಗೆ ಹಾಕಿದ್ದುದ್ದು ಕೇವಲ 19 ಕೋಟಿ ರೂಪಾಯಿಗಳು ಮಾತ್ರ. ಇದು ಮಾರಾಟ ತೆರಿಗೆಯಲ್ಲಿ ಹೆಚ್ಚಿಗೆ ಮಾಡಿದ್ದುದ್ದು. ಕಳೆದ ವರ್ಷವೂ ಕೂಡ ತೆರಿಗೆ ಸುಧಾರಣೆ ಕ್ರಮ ಮಾಡುವಾಗ 21 ರಿಂದ 19 ರೇಟ್‌ಗಳಿಗೆ ನಾವು ತಂದಾಗ, 21 ರಿಂದ 13 ರೇಟ್‌ಗಳಿಗೆ ತಂದಾಗ ಕೆಲವು ಕಡೆ ಸ್ವಲ್ಪ ಹೆಚ್ಚಳ ಆಯಿತು, ಕಡಿಮೆ ಆಯಿತು. ಎಕ್ಸೈಸ್‌ನಲ್ಲಿ ಸುಮಾರು 19 ಕೋಟಿ ರೂಪಾಯಿ ತೆರಿಗೆ ಹೆಚ್ಚಾಗುವಂಥಾದ್ದು ಆಗಿತ್ತು. ಆದರೆ ಮೋಟಾರ್ ವೆಹಿಕಲ್ಸ್‌ಗೆ ನಾವು ಜೀವಾವಧಿ ತೆರಿಗೆಯನ್ನು ವಿಧಿಸಿದುದರಿಂದ ಅಲ್ಲಿ ಸುಮಾರು 90 ಕೋಟಿ ರೂಪಾಯಿ ಹೆಚ್ಚು ಬಂತು ಆದುದರಿಂದ ಅಲ್ಲಿ ಸ್ವಲ್ಪ ತೆರಿಗೆ ಆಯಿತು. ಆದರೆ ಜನಸಾಮಾನ್ಯರ ಮೇಲೆ, ಬಡವರು ಬಳಸತಕ್ಕಂಥ ಪದಾರ್ಥಗಳ ಮೇಲೆ ಯಾವ ತೆರಿಗೆಯನ್ನೂ ಕೂಡ ಕಳೆದ ವರ್ಷ ನಾವು ಹೆಚ್ಚು ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಸ್ಪಷ್ಟಪಡಿಸಲಿಕ್ಕೆ ನಾನು ಇಚ್ಛೆಪಡುತ್ತೇನೆ. ಈ ವರ್ಷ 1996-97ರಲ್ಲಿ ಒಂದೇ ಒಂದು ಪೈಸೆ ಹೊಸ ತೆರಿಗೆಯನ್ನು ಹಾಕಿಲ್ಲ. ಮತ್ತು ಅದಕ್ಕೆ ಬದಲಾಗಿ ನಾವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಸುಮಾರು 156 ಎಂಟ್ರೆನ್ಸ್‌ಲ್ಲಿ ರಿಯಾಯಿತಿಗಳು, 30 ಎಂಟ್ರೆನ್ಸ್‌ನಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದೆ. ಮಾನ್ಯ ಅಧ್ಯಕ್ಷರೇ ನಾನು ತೆರಿಗೆ ಬಗ್ಗೆ ಮಾತನಾಡುವಾಗ ಅದರ ವಿವರವನ್ನು ಮುಂದೆ ಕೊಡುತ್ತೇನೆ. ಆದ್ದರಿಂದ, ಇವತ್ತು ತೆರಿಗೆ ವಸೂಲಿಯಲ್ಲಿ ಯಾರದೇ ಮುಲಾಜಿಲ್ಲದೇ ಕಟ್ಟುನಿಟ್ಟಿನ ಕ್ರಮ ತಗೆದುಕೊಂಡಿದ್ದುದರಿಂದ

ಇಷ್ಟು ತೆರಿಗೆ ವಸೂಲಿಯನ್ನು ಮಾಡಲಿಕ್ಕೆ ಸಾಧ್ಯವಾಯಿತು. ಮಾನ್ಯ ಯಡಿಯೂರಪ್ಪನವರು ಒಂದು ಮಾತು ಹೇಳಿದರು. ನೀವು ಮುಂದೆ ತೆರಿಗೆಯನ್ನು ಹಾಕುತ್ತೀರಿ ಎಂದು. ಯಾವುದೇ ತೆರಿಗೆ ಹಾಕುವುದಿಲ್ಲ. ತೆರಿಗೆಗಳನ್ನು ವಿಧಿಸುವುದಕ್ಕೆ ಹೋಗುವುದಿಲ್ಲ. ಇದು ಪೂರ್ಣ ಬಜೆಟ್. ಮಾರಾಟ ತೆರಿಗೆಗಳನ್ನು ಹೆಚ್ಚು ಮಾಡತಕ್ಕಂಥಾದ್ದು, ಅದರ ಮೇಲೆ ಬೇರೆ ಬೇರೆ ಇರತಕ್ಕಂಥಾದ್ದನ್ನು ಹೆಚ್ಚು ಮಾಡತಕ್ಕಂಥ ಕೆಲಸ ಇಲ್ಲ ಮತ್ತು ಇದರಿಂದ ನೀವು 90 ಕೋಟಿ ರೂಪಾಯಿ ಲೈಫ್ ಟ್ಯಾಕ್ಸ್ ಹಾಕಿಬಿಟ್ಟು ಒಂದೇ ಸಲ ಎಲ್ಲಾ ತೆಗೆದುಕೊಂಡುಬಿಟ್ಟಿದ್ದೀರಿ. ಆದ್ದರಿಂದ ಇನ್ನು ಮುಂದೆ ಬರುವವರಿಗೆ ತೆರಿಗೆ ಕಡಿಮೆಯಾಯಿತು ಮತ್ತು ನಿಮಗೂ ಮುಂದಿನ ವರ್ಷಗಳಲ್ಲಿ ತೆರಿಗೆ ಕಡಿಮೆಯಾಯಿತು ಎನ್ನತಕ್ಕಂಥ ಮಾತನ್ನು ಕೂಡ ಆಡಿದ್ದಾರೆ. ಅದು ಕಡಿಮೆಯಾಗುವುದಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಪ್ರತಿವರ್ಷ ಹೆಚ್ಚು ಹೆಚ್ಚು ವಾಹನಗಳು ಮಾರುಕಟ್ಟೆಗೆ ಬರುತ್ತಿವೆ. ಜನರು ಹೆಚ್ಚು ಹೆಚ್ಚು ಬಳಕೆಯನ್ನು ಮಾಡುತ್ತಿದ್ದಾರೆ. ಹೊಸದಾಗಿ ಬರತಕ್ಕಂಥ ಎಲ್ಲಾ ವಾಹನಗಳಿಗೆ ಜೀವಾವಧಿ ತೆರಿಗೆಯನ್ನು ಹಾಕುತ್ತಿರುವುದರಿಂದ ತೆರಿಗೆಯಲ್ಲಿ ಖೋತಾ ಆಗತಕ್ಕಂಥ ಪ್ರಶ್ನೆ ಇಲ್ಲ. ಇನ್ನೂ ಹೆಚ್ಚು ಬರುತ್ತದೆ. ಆದ್ದರಿಂದ ಟ್ರಾನ್ಸ್‌ಪೋರ್ಟ್‌ನಲ್ಲಿ ತೆರಿಗೆ ಕಡಿಮೆ ಆಗತಕ್ಕಂಥಾದ್ದು ಇಲ್ಲ. ಇನ್ನೂ ಹೆಚ್ಚಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ ಸದಸ್ಯರಿಗೆ ಆ ಸಂಶಯ ಬೇಡ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಆದ್ಯತೆ ಇರತಕ್ಕಂಥಾದ್ದು ಗ್ರಾಮೀಣಾಭಿವೃದ್ಧಿ ಮತ್ತು ವಿದ್ಯಾಭ್ಯಾಸಕ್ಕೆ ನಾವು ಕಳೆದ ವರ್ಷ ಏನೇನು ಆದ್ಯತೆಗಳನ್ನು ಗುರುತಿಸಿದ್ದೆವು, ಅದೇ ಆದ್ಯತೆಗಳನ್ನು ಸಾಮಾಜಿಕ ಸೇವೆಗಳಲ್ಲಿ ಮತ್ತು ಆರ್ಥಿಕ ಸೇವೆಗಳಲ್ಲಿ ಅವುಗಳನ್ನು ಮುಂದುವರಿಸುತ್ತಿದ್ದೇವೆ. ಅದಕ್ಕೆ ನಾನು ಒಂದು ಮಾತು ಹೇಳಿದ್ದೇನೆ, ನಮ್ಮದು ಉದ್ಯಮ ಮತ್ತು ಕೃಷಿ ಇವೆರಡನ್ನೂ ಸಮಾನ ಬೆಳವಣಿಗೆಯ ಮೂಲಕ ಈ ರಾಜ್ಯದಲ್ಲಿ ಜನ ಅನುಭವಿಸುತ್ತಿರತಕ್ಕಂಥಾ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ. ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡತಕ್ಕಂಥ, ಬಡವರನ್ನು ಬಡತನದ ರೇಖೆಯಿಂದ ಮೇಲೆ ಎತ್ತಕ್ಕಂಥ ಪ್ರಯತ್ನಗಳನ್ನು ಮಾಡುತ್ತೇವೆ. ಆ ಮೂಲಕ ಆ ಸಮಸ್ಯೆಗಳಿಗೆ ನಿವಾರಣೆಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು, ನೀವು ಎಲ್ಲಾ ವಿದೇಶೀ ಬಂಡವಾಳಕ್ಕೆ ಕೊಟ್ಟುಬಿಟ್ಟಿದ್ದೀರಿ. ರಾಜ್ಯದ ಆದಾಯದ ಮೂಲಕ ನೀವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎನ್ನತಕ್ಕಂಥ ಮಾತನ್ನು ಮತ್ತು ನನ್ನ ಒಂದು ಮಾತನ್ನು ಅವರ ಭಾಷಣದಲ್ಲಿ ಉಲ್ಲೇಖ ಮಾಡಿದರು ಬಂಡವಾಳ ಹೂಡಿಕೆ ಆದಮೇಲೆ ಜನರು ಅದರಲ್ಲಿ ಸ್ವಲ್ಪ ಭಾರವನ್ನು ಹೊರಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ ಆದ್ದರಿಂದ ನೀವು ಮುಂದೆ ತೆರಿಗೆ ಹಾಕುತ್ತೀರಿ ಎಂದು ಆ ಉಲ್ಲೇಖದ ಜೊತೆಯಲ್ಲಿ ಅವರು ಈ ಮಾತನ್ನೂ ಪ್ರಸ್ತಾಪ ಮಾಡಿದ್ದಾರೆ. ನಾನು ಯಾವ ಹಿನ್ನಲೆಯಲ್ಲಿ ಆ ಮಾತು ಹೇಳಿದ್ದೇನೆ ಎಂದರೆ, ಇವತ್ತು

ಭಾರತದಂಥ ಹಳ್ಳಿಗಾಡು ಇರತಕ್ಕಂಥ, 100ಕ್ಕೆ 70 ಜನ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ದೇಶ ಅಥವಾ ನಮ್ಮ ರಾಜ್ಯಗಳು, ಅವುಗಳ ಆರ್ಥಿಕ ಪ್ರಗತಿ ಆಗಬೇಕಾದರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಆಗಲೇಬೇಕು. ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗದೇ ಆರ್ಥಿಕ ಬೆಳವಣಿಗೆಯನ್ನು ಮಾಡುವುದು ಕಷ್ಟವಾಗುತ್ತದೆ. ಅದಕ್ಕೋಸ್ಕರ ಆ ದಿಕ್ಕಿನಲ್ಲಿ ಮೂಲಭೂತ ಸೌರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇವತ್ತು ದೇಶೀಯ ಮತ್ತು ವಿದೇಶೀಯ ಬಂಡವಾಳವನ್ನು ಹೂಡಲಿಕ್ಕೆ ನಾವು ಆಹ್ವಾನಿಸಿದ್ದೇವೆ ಮತ್ತು ಆಯ್ದ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಗೆ ನಾವು ಆಹ್ವಾನ ಮಾಡಿದ್ದೇವೆ. ಈಗ ಅದಕ್ಕೆ ಬಹಳ ಅನುಕೂಲಕರವಾದ ಪ್ರತಿಕ್ರಿಯೆ ದೊರೆತಿದೆ. ಮತ್ತು ಈಗ ಆ ಬಂಡವಾಳ ಹೂಡಿಕೆಯ ಪ್ರಕ್ರಿಯೆಗಳು ಪ್ರಾರಂಭವಾಗಿದೆ ಮತ್ತು ಅವು ಈಗ ಬೇರೆ ಬೇರೆ ಹಂತದಲ್ಲಿ ನಡೆಯುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಇದು ದೇಶದ ಅನೇಕ ಭಾಗಗಳಲ್ಲಿ ಇವೊತ್ತು ನಡೆಯುತ್ತಿದೆ, ಗುಜರಾತ್, ಮಹಾರಾಷ್ಟ್ರ, ರಾಜಾಸ್ತಾನ, ಮಧ್ಯಪ್ರದೇಶ ಮತ್ತು ಕಮ್ಯುನಿಸ್ಟ್ ಸರ್ಕಾರ ಇರತಕ್ಕಂಥ ವೆಸ್ಟಬೆಂಗಾಲ್‌ನಲ್ಲಿಯೂ ಕೂಡ ಇದು ಇಂದು ನಡೆಯುತ್ತಿದೆ. ದೇಶದ ಉದಾರ ಆರ್ಥಿಕ ನೀತಿಗನುಗುಣವಾಗಿ ರಾಜ್ಯ ಸರ್ಕಾರ ಸಂಪನ್ಮೂಲಗಳಿಲ್ಲದೆಯೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಸೀಮಿತವಾದಂಥ ಸಂಪನ್ಮೂಲಗಳಿರುವುದರಿಂದ ಇದನ್ನು ಅನಿವಾರ್ಯವಾಗಿ ಕೆಲವು ಕ್ಷೇತ್ರಗಳಲ್ಲಿ ಬಂಡಾವಾಳವನ್ನು ಹೂಡಲಿಕ್ಕೆ ಮತ್ತೆ ಅದನ್ನು ಬಳಸಿಕೊಳ್ಳುತ್ತಕಂಥ ಪ್ರಯತ್ನವನ್ನು ಮಾಡಲೇಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಆದುದರಿಂದ ಹೌಸಿಂಗ್, ಪವರ್. ಟ್ರಾನ್ಸ್‌ಪೋರ್ಟ್ ಮತ್ತ ವ್ಯವಸಾಯಕ್ಕೆ ಆಗ್ರೋ ಇಂಡಸ್ಟ್ರೀಸ್, ಈ ರೀತಿಯ ಕ್ಷೇತ್ರಗಳಲ್ಲಿ ನಾವು ಬಂಡವಾಳವನ್ನು ಹೂಡಲಿಕ್ಕೆ ಆಹ್ವಾನ ಮಾಡುತ್ತಿದ್ದೇನೆ. ಇದಲ್ಲದೇ ಇಂಥವುಗಳಿಗೆ ಕರ್ನಾಟಕದಲ್ಲಿ ಎಲ್ಲಾ ಭಾಗಗಳಿಂದ ಬರತಕ್ಕಂಥ ಜನರಿಗೆ ಮತ್ತು ಕೈಗಾರಿಕಾ ಬೆಳವಣಿಗೆ ಬೇಕಾದಂಥ ಉತ್ತಮವಾದ ವಾತಾವರಣವಿದೆ ಅಂದರೆ ಕೈಗಾರಿಕಾ ವಾತಾವರಣವಿದೆಯೆಂದು ಬಹಳ ಜನರು ಇಲ್ಲಿಗೆ ಬರಲಿಕ್ಕೆ ಪ್ರಾರಂಭ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಆದ್ದರಿಂದ ನಮ್ಮ ಸಂಪನ್ಮೂಲಗಳ ಜೊತೆಗೆ ಇದನ್ನು ಕೂಡ ಬಳಸಿಕೊಂಡು ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕು ಎಂಬತಕ್ಕಂಥದ್ದೇ ನಮ್ಮ ನೀತಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಮಾನ್ಯ ಅಧ್ಯಕ್ಷರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಮತ್ತು ಖರ್ಗೆಯವರು, ವೀರಪ್ಪಮೊಯ್ಲಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ರಾಜ್ಯದ ಯೋಜನೆ 3758 ಕೋಟಿ ಬಜೆಟ್ ಜಾಟಲೀ, ಅದು ಪ್ಲಾನಿಂಗ್ ಕಮಿಶನ್ ಮುಂದೆ ಇದ್ದದ್ದು ಅಪ್ರೂವಡ್ ಜಾಟಲೀ 3575 ಕೋಟಿ. ಬಜೆಟ್ ಜಾಟಲೀ 3758 ಕೋಟಿ ರೂಪಾಯಿಗಳಾಗಿತ್ತು. ಅದರಲ್ಲಿ 2903 ಕೋಟಿ ರೂಪಾಯಿಗಳು ಇಂಟರ್‌ನಲ್ ಅಂಡ್ ಎಕ್ಸಟ್ರಾ ಬಜೆಟರಿ ರಿಸೋರ್ಸಸ್ ರಾಜ್ಯದ ಬಜೆಟಿನಲ್ಲಿರತಕ್ಕಂಥದ್ದು. ಇದ್ದಲ್ಲದೇ ಎಕ್ಸಟ್ರಾ ಬಜೆಟರಿ ಅಂದರೆ ಆಂತರಿಕ ಮತ್ತು

ಆಯುವ್ಯಯೇತರ ರಿಸೋರ್ಸ್‌ಸ್‌ಗಳಿಂದ ಮೊಬಿಲೈಸ್ ಮಾಡತಕ್ಕಂಥ ಹಣ. ಆದರೆ ಈ ವರ್ಷ ನಾನು ಈಗಾಗಲೇ ಹೇಳಿರುವ ಹಾಗೆ 3758 ಕೋಟಿ ರೂಪಾಯಿಗಳ ಯೋಜನೆಯನ್ನು ಮುಟ್ಟಲಿಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣಗಳನ್ನು ಕೂಡ ನಾನು ಈಗಾಗಲೇ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಅದು ತೆರಿಗೆ ಆದಾಯದಿಂದ ಅದಂಥ ಕೊರತೆಯಿಂದಲ್ಲ. ಆದರೆ ಕೆ.ಇ.ಬಿ., ಕೆ.ಪಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ.ಯಿಂದ ಸಾಂಪ್ರದಾಯಿಕವಾಗಿ ಸಾಲ ಎತ್ತತಕ್ಕಂಥ, ಸಾಲದ ಮೂಲಕ ಬರತಕ್ಕಂಥದ್ದು ಮತ್ತು ಎಕ್ಸ್‌ಟರ್ನಲ್ ಏಡ್‌ನಿಂದ ಬರತಕ್ಕಂಥದ್ದು ಕೃಷ್ಣಾ ಜಲ ಭಾಗ್ಯ ಯೋಜನೆಯಿಂದ ಬರತಕ್ಕಂಥದ್ದು - ಇವೆಲ್ಲವುಗಳನ್ನೂ ಸೇರಿಸಿಕೊಂಡಂತೆ ಒಟ್ಟು 854 ಕೋಟಿ ರೂಪಾಯಿಗಳನ್ನು ನಾವು ಮಾಡಬೇಕಾಗಿತ್ತು. ಆದ್ದರಿಂದ ನಾನು ಈಗಾಗಲೇ ಕಾರಣಗಳನ್ನು ಹೇಳಿರುವ ರೀತಿಯಲ್ಲಿ ಅಷ್ಟು ಹಣವನ್ನು ಐ.ಇ.ಬಿ.ಆರ್. ಭಾಗದಲ್ಲಿ ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯವಾಗದೇ ಇರುವುದರಿಂದ ನಾವು ಯೋಜನೆಯನ್ನು 3100 ಕೋಟಿ ರೂಪಾಯಿಗಳಿಗೆ ನಾವು ಮಾರ್ಚ್‌ವರೆಗೆ ಮುಟ್ಟುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದರೆ ಮುಂದಿನ ವರ್ಷಕ್ಕೆ ಅಂದರೆ 1996-97ರ ಅವಧಿಗೆ ಸುಮಾರು 4360 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಾವು ಯೋಜನೆಗೆ ಇಟ್ಟು ಕೊಂಡಿದ್ದೇವೆ. ಆದರೆ ಈ ಸಾರಿ ನಾವು ಪ್ಲಾನಿಂಗ್ ಕಮಿಶನ್ ಮುಂದ ಹೋಗಲಿಕ್ಕೆ ಸಾಧ್ಯವಾಗಲಿಲ್ಲ, ಅವರ ಜೊತೆಗೆ ಚರ್ಚೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಕಾರಣ ಏನೆಂದರೆ, ಯೋಜನಾ ಆಯೋಗದ ಉಪಾಧ್ಯಕ್ಷರು ನಮಗೊಂದು ಕಾಗದವನ್ನು ಬರೆದು ಲೋಕಸಭೆ ಚುನಾವಣೆ ಇರುವುದರಿಂದ ನೀವು ಚರ್ಚೆಗೆ ಬರಬೇಡಿ ಎಂದಿದ್ದರು. ಈಗಾಗಲೇ ನಾವು ಡಿಸೆಂಬರ್ ತಿಂಗಳಲ್ಲಿ ಚರ್ಚೆಗೆ ಹೋಗಬೇಕಾಗಿತ್ತು. ಅವರು ಪತ್ರದಲ್ಲಿ ನೀವು 1995-96ನೇ ಸಾಲಿನಲ್ಲಿ ಯಾವುವು ಕೇಂದ್ರ ಸರ್ಕಾರದ ಸಹಾಯಗಳು ಇದ್ದವು. ಅದೇ ಮಟ್ಟದಲ್ಲಿ 1996-97ನೇ ಸಾಲಿಗೂ ಯೋಜನೆಯನ್ನು ಅಳವಡಿಸಿಕೊಳ್ಳಬೇಕು ಎಂಬ ಮಾತನ್ನು ಅವರು ಹೇಳಿದ್ದರು, ಮತ್ತೆ ಚುನಾವಣೆಯಾದ ಮೇಲೆ ಇದನ್ನು ಮಾಡೋಣ ಎಂದು ಕಾಗದ ಬರೆದಿರುವುದರಿಂದ ನಾವು ಅವರ ಮುಂದೆ ಹೋಗಿಲ್ಲ. ಲೋಕಸಭಾ ಚುನಾವಣೆಯಾದ ಮೇಲೆ ಮತ್ತೆ ನಾವು ಹೋಗಬೇಕಾಗುತ್ತದೆ. ಅಲ್ಲಿಗೆ ಹೋಗಿ ಬಂದ ಮೇಲೆ ಕೆಲವು ಸಣ್ಣಪುಟ್ಟ ಬದಲಾವಣೆಗಳಾಗಬಹುದು, ಅದನ್ನು ಈ ಸದನದಲ್ಲಿ ಮುಂದೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಧ್ಯೆ ಪ್ರವೇಶ ಮಾಡುವುದಿಲ್ಲ, ತಾವೀಗ ಬಹಳ ಮಹತ್ವವಾದ ವಿಷಯದ ಬಗ್ಗೆ ಹೇಳುತ್ತಾ ಯೋಜನಾ ವೆಚ್ಚವನ್ನು 3758 ಕೋಟಿ ರೂಪಾಯಿಗಳಿಂದ 3100 ಕೋಟಿ ರೂಪಾಯಿಗಳಿಗೆ ಇಳಿಸಬೇಕಾಯಿತು ಎಂದಿದ್ದೀರಿ. ಇದರಲ್ಲಿ ನನಗೇನು ಅರ್ಥವಾಗದಿರುವ ಸಂಗತಿಯೆಂದರೆ ತಾವು ಹೇಳಿದ ಪ್ರಕಾರ ಕಮರ್ಶಿಯಲ್ ಟ್ಯಾಕ್ಸ್ 27 ಪರ್ಸೆಂಟ್ ಜಾಸ್ತಿ, ತೆರಿಗೆ ಬಟ್ವಾರೆ 26 ಪರ್ಸೆಂಟ್ ಜಾಸ್ತಿ, ಸ್ಟಾಂಪ್ ಡ್ಯೂಟಿ 60 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ, ಮೋಟಾರ್ ವೆಹಿಕಲ್ ಮೇಲೆ 90 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಆದ್ದರಿಂದ ಯೋಜನಾ ವೆಚ್ಚಕ್ಕೆ ಈ ಹಣ ಖರ್ಚಾಗಲಿಲ್ಲ ಎಂದರೆ ಅವು ಅಭಿವೃದ್ಧಿ

ಆಗಬೇಕಾದ ಕಡೆ ಕುಂಠಿವಾಗಿ ಈ ಹಣ ಸಂಗ್ರಹವಾದ ಮೇಲೂ ಸಹ ಬೇರೆ ಅನಗತ್ಯವಾದಂಥ ಹೆಚ್ಚು ವೆಚ್ಚ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ತೊಂದರೆ ಆಗುವುದಿಲ್ಲವೇ, ಇದಕ್ಕೆ ತಮ್ಮ ಸಮಜಾಯಿಷಿ ಏನು?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಎಲ್ಲಿ ಆದ್ಯತೆಗಳಿಗೆ ಖರ್ಚು ಮಾಡಬೇಕೋ ಅಲ್ಲಿ ಹೆಚ್ಚು ಖರ್ಚು ಮಾಡುತ್ತೇವೆ. ನೀರಾವರಿಗೆ ನಾವು ಕಡಿಮೆ ಮಾಡಿಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆಗೆ ನಾವು ಕಡಿಮೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರಿಗೆ : ನಿಮಗೆ ಹೊರಗಿನಿಂದ ಬರತಕ್ಕಂಥ ಹಣ, ಅಂದರೆ ಇದರಲ್ಲಿ ಕೃಷ್ಣಾ ಜಲ ಭಾಗ್ಯ ನಿಗಮದಿಂದ ಇರಬಹುದು, ಕರ್ನಾಟಕ ಕಾರ್ಪೋರೇಷನ್‌ನಿಂದ ಇರಬಹುದು ಅಥವಾ ಕೆ.ಎಸ್.ಆರ್.ಟಿ.ಸಿ.ಯಿಂದ ಇರಬಹುದು ಅಥವಾ ಯಾವುದೇ ಸಾರ್ವಜನಿಕ ಉದ್ಯಮ ಕಂಪನಿಗಳಿಂದ ಬರಬಹುದು, taking into account of all those debts or loan ನೀವು ಇದರಲ್ಲಿ ಸ್ಕೀಮ್‌ಗಳನ್ನು ಫಾರ್ಮುಲೇಟ್ ಮಾಡುತ್ತೀರಿ, ಅಂದರೆ ಕೃಷ್ಣಾಜಲ ಭಾಗ್ಯ ನಿಗಮದಲ್ಲಿ 600 ಕೋಟಿ ಬಂದರೆ 600 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ ಎಂದು ನೀವು ಲೆಕ್ಕ ಹಾಕಿ ನಮಗೆ ಹೇಳಿರುತ್ತೀರಿ. ಆದರೆ ಅಷ್ಟು ಹಣ ಬರದೇ ಇದ್ದಾಗ ಸಹಜವಾಗಿ ಅಷ್ಟರಮಟ್ಟಿಗೆ ನಿಮ್ಮ ಪ್ಲಾನ್ ಸೈಟಲೀನಲ್ಲಿ ಕಟ್ ಆಗುತ್ತದೆ. ಈ 650 ಕೋಟಿ ರೂಪಾಯಿಗಳು ಕಟ್ ಆಗಿದೆ. ಏಕೆಂದರೆ ನೀವು ಹೇಳಿದ ಪ್ರಕಾರ ಹೊರಗಡೆಯಿಂದ ನೀವು ಏನು ಹಣವನ್ನು ಅಪೇಕ್ಷೆಮಾಡಿದ್ದೀರಿ ಅಷ್ಟು ಹಣವನ್ನು ಹೊರಗಡೆಯಿಂದ ಸಂಗ್ರಹ ಮಾಡುವುದಕ್ಕೆ ನಿಮ್ಮಿಂದಾಗಿಲ್ಲ. ಇಂಟರನಲ್ ರಿಸೋರ್ಸ್‌ನ್ನು ನಾನು ಹೇಳಲಿಲ್ಲ. ಸೇಲ್ಸ್ ಟ್ಯಾಕ್ಸ್ ಆಗಲೀ ಮತ್ತೊಂದು ಕರವಾಗಲಿ ನೀವು ಸಂಗ್ರಹ ಮಾಡಿದ್ದೀರಿ, ಆದರೆ ಅಬಕಾರಿಯಲ್ಲಿ ನಿಮ್ಮದು 500 ಕೋಟಿ ರೂಪಾಯಿಗಳ ಎಕ್ಸ್‌ಪೆಕ್ಟೇಷನ್ಸ್ ಹಣ ಸಂಗ್ರಹವಾಗಲಿಲ್ಲ. ಸಾಲವನ್ನು ಬರಬೇಕಾಗಿತ್ತು ಅದೂ ಕೂಡ ಬರಲಿಲ್ಲ. ಹೀಗಾಗಿ ಈ ಪ್ಲಾನ್ ಸೈಟಲೀನಲ್ಲಿ 650 ಕೋಟಿ ರೂಪಾಯಿಗಳು ಕಡಿಮೆಯಾಯಿತು. ಇದಲ್ಲದೇ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಯಾವುದು ಅನಾವಶ್ಯಕವಿತ್ತು ಯಾವುದು ಪಾಪ್ಯೂಲರ್ ಸ್ಕೀಮ್ ಇತ್ತು ಅವುಗಳನ್ನು ನಿಮಗೋಸ್ಕರ ಮಾಡಿಕೊಂಡ ಇಲ್ಲಿ ಹೊಡೆತ ಬಿತ್ತು. ಇದರಿಂದ ಸಹಜವಾಗಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತದೆ, ಅದು ನೀರಾವರಿ ಇರಬಹುದು ಪವರ್ ಇರಬಹುದು ಮತ್ತೊಂದು ಇರಬಹುದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾವು ಈಗ ಒಟ್ಟು 200 ಕೋಟಿ ರೂಪಾಯಿಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಖರ್ಚು ಮಾಡುತ್ತೇವೆಂದು ಬಜೆಟ್‌ನಲ್ಲಿ ಸ್ಪೀಚ್‌ನಲ್ಲಿ ತಿಳಿಸಿದ್ದೇವೆ. ಇದನ್ನು ನಾವು 250 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ, ಇದನ್ನು ಸ್ಟೇಟ್ ಬಜೆಟರಿಯಲ್ಲಿಟ್ಟಿದ್ದೇವೆ. ಆದ್ದರಿಂದ ನಾವು ರಿಸೋರ್ಸಸ್‌ನಲ್ಲಿ ಏನು ಮಾಡಿಕೊಂಡಿದ್ದೇವ ಅದೇನೂ ಕಡಿಮೆಯಾಗಿಲ್ಲ. ಆದರೆ 300

ಕೋಟಿ ರೂಪಾಯಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಕಡೆಯಿಂದ ಎತ್ತುತ್ತವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವು. ಒಟ್ಟು 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇತ್ತು ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ನಾನು 800 ಕೋಟಿ ರೂಪಾಯಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಹಣವನ್ನು ಎತ್ತುತ್ತೇವೆ. ಆದುದರಿಂದ 1000 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಸರ್ಕಾರಕ್ಕೆ ಉದ್ದೇಶ ಇದೆ ಎಂದು ಹೇಳಿದರು. ಆದರೆ ನಾನು ಈಗಾಗಲೇ ತಿಳಿಸಿದಂತೆ ಸಭೆಯಿಂದ ಬರತಕ್ಕಂಥದ್ದು ಎರಡು ತಿಂಗಳುಗಳ ಕಾಲ ನಿಧಾನವಾದುದರಿಂದ ನಮಗೆ 300 ಕೋಟಿ ಕೂಡ ಮಾಡಲಿಕ್ಕೆ ಆಗಲಿಲ್ಲ. ಮಾರ್ಚ್ ತಿಂಗಳ ಒಳಗೆ ಈಗ ಪಬ್ಲಿಕ್ ಇಶ್ಯೂ ಆಗಿದೆ. ಮಾರ್ಚ್ ತಿಂಗಳ ಒಳಗಡೆ 300 ಕೋಟಿ ರೂಪಾಯಿಗಳು ಬರುತ್ತದೆ. 180 ಕೋಟಿ ರೂಪಾಯಿಗಳನ್ನು ಈಗಾಗಲೇ ಎತ್ತಿ ಅದು ಮತ್ತೆ ನಾವು ಆಯವ್ಯಯದಲ್ಲಿ ಇಟ್ಟಿರತಕ್ಕಂತಹ 250 ಕೋಟಿ ರೂಪಾಯಿಗಳು ಹೀಗೆ ಈಗಾಗಲೇ 450 ಕೋಟಿ ರೂಪಾಯಿಗಳನ್ನು ಮಾರ್ಚ ಒಳಗೆ ನಮ್ಮ ಸರ್ಕಾರ ಖರ್ಚು ಮಾಡುತ್ತದೆ. ಬಜೆಟ್ ಸಪೋರ್ಟ್ ಏನು ನಾವು ಕೊಡುತ್ತೇವೆಂದು ಹೇಳಿದ್ದೆವು. ಅದಕ್ಕಿಂತಲೂ ಹೆಚ್ಚು ಖರ್ಚು ಮಾಡಿದ್ದೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತಿದ್ದೇವೆ. ಹಾಗಾಗಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಬಜೆಟಿನಲ್ಲಿ 200 ಕೋಟಿ ರೂಪಾಯಿಗಳಿಂದ 250 ಕೋಟಿ ರೂಪಾಯಿಗಳನ್ನು ಮಾಡಿದ್ದು ಸರಿ. ಸ್ವಾಮಿ ನಾವು ಪದೇ ಪದೇ ಹೇಳುವುದು ಏನಂದರೆ ಬಜೆಟಿನಲ್ಲಿ 800 ಕೋಟಿ ರೂಪಾಯಿಗಳಲ್ಲಿ ಕೃಷ್ಣಾಜಲ ಭಾಗ್ಯ ನಿಗಮಕ್ಕೆ ಎಷ್ಟು ಖರ್ಚಾಗಿದೆ ಅದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ : ನಿಮ್ಮ ಸರ್ಕಾರ ಎಷ್ಟು ಖರ್ಚು ಮಾಡಿದೆ ಹೇಳಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಏನು ಮಾಡಿದ್ದೀರಿ ಎಂದು ಕೇಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ : ಆದುದರಿಂದ 300 ಕೋಟಿ ರೂಪಾಯಿಗಳನ್ನು ಮಾರ್ಚ್ ತಿಂಗಳ ಒಳಗಡೆ ನಾವು ಸಾರ್ವಜನಿಕರಿಂದ ಹಣವನ್ನು ಎತ್ತಿ ಜೂನ್ ತಿಂಗಳ ಒಳಗಡೆ 300 ಕೋಟಿ ರೂಪಾಯಿಗಳನ್ನು ಈ ನಿಗಮಕ್ಕೆ ಖರ್ಚು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಜೊತೆ ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದು ಎಂದರೆ 1995-96ರಲ್ಲಿ ಒಮ್ಮೆಯೂ ಕೂಡ ಇವತ್ತಿನವರೆಗೆ ನಾವು ಓವರ್ ಡ್ರಾಫ್ಟ್‌ಗೆ ಹೋಗಿಲ್ಲ. ಹಿಂದೆ ಇದ್ದಂತಹ ಸರ್ಕಾರ 1993-94ರಲ್ಲಿ 22 overdrafts 11 times. ಆಮೇಲೆ 1994-95ರಲ್ಲಿ 9 ಬಾರಿ. ನಾವು ಇವತ್ತಿನವರೆಗೂ ಓವರ್ ಡ್ರಾಫ್ಟ್‌ಗೆ ಹೋಗಿಲ್ಲ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪಮೊಯ್ಲಿರವರು ಏನು ಹೇಳಿದರು ಎಂದರೆ ನಮ್ಮ ಕಾಲದಲ್ಲಿ ಹಣಕಾಸಿನ ನಿರ್ವಹಣೆಗೆ ಬಹಳ ಚೆನ್ನಾಗಿತ್ತು. ಜನತಾ ದಳದ ಸರ್ಕಾರದಲ್ಲಿ ಒಂದು ವರ್ಷದಲ್ಲಿ

ಹಣಕಾಸಿನ ನಿರ್ವಹಣೆ ಎಲ್ಲಾ ಹೋಗಿಬಿಟ್ಟಿದೆ. ಮಾನ್ಯ ಸದಸ್ಯರ ತೀರ್ಮಾನಕ್ಕೆ ಈ ವಿಚಾರವನ್ನು ಬಿಡುತ್ತೇನೆ. ನಾವು ಒಮ್ಮೆಯೂ ಕೂಡ ಒವರ್ ಡ್ರಾಫ್ಟ್‌ಗೆ ಹೋಗಿಲ್ಲ. ಎರಡು ವರ್ಷದಲ್ಲಿ ಕಾಂಗ್ರೆಸ್ ಸರ್ಕಾರದವರು ಒಂದು ಸಲ 11 ಸಾರಿ ಹೋಗಿದ್ದಾರೆ, ಒಂದು ಸಾರಿ 9 ಸಾರಿ ಹೋಗಿದ್ದಾರೆ. ಆದ್ದರಿಂದ ಯಾರ ಕಾಲದಲ್ಲಿ ಹಣಕಾಸಿನ ನಿರ್ವಹಣೆ ಚೆನ್ನಾಗಿದೆ. ವಿಸ್ತತಕ್ಕೆಂಥ ಮಾತನ್ನು ಹೇಳೆ ಇನ್ನೂ ಒಂದು ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುವುದು ಏನೆಂದರೆ ಇವತ್ತು ಬಿಜಾಪುರ ಒಳಗಡೆ ಸರ್ಕಾರ ಕಂಟ್ರಾಕ್ಟರ್‌ಗಳಿಗೆ ಕೊಡಬೇಕಾದಂತಹ ಬಾಕಿ ಬಿಲ್ಲುಗಳು ಉಳಿದಿಲ್ಲ. ಕಂಟ್ರಾಕ್ಟರ್‌ಗಳು ಬಾಕಿ ಬಿಲ್ ಪಾವತಿ ಮಾಡಿಸಿಕೊಳ್ಳುವುದಕ್ಕಾಗಿ ವಿಧಾನಸೌಧದ ಸುತ್ತ ಸುತ್ತುತ್ತಿದ್ದರು. ಕಂಟ್ರ್ಯಾಕ್ಟರ್‌ಗಳು ಎಂ.ಎಲ್.ಎ.ಗಳನ್ನು ಹಿಡಿದುಕೊಂಡು ಬಿಲ್ ಪಾವತಿಗಾಗಿ ಹೋಗುತ್ತಿದ್ದರು. ಆದರೆ ವಿಧಿ ಇಲ್ಲದೇ ಇವರುಗಳು ಹೋಗಬೇಕಾಗಿತ್ತು. ಏನೆಂದರೆ ಅವರ ಕ್ಷೇತ್ರದ ಕೆಲಸಗಳು ಮಾಡಬೇಕಾಗಿದ್ದರಿಂದ ಎಂ.ಎಲ್.ಎ. ಸಹ ಹಣಕಾಸಿನ ಸಕ್ರೆಟರಿಗಳ ಹತ್ತಿರ, ಸಂಬಂಧಪಟ್ಟಂತಹ ಮಂತ್ರಿಗಳ ಹತ್ತಿರ ನಮಗೆ ಎಲ್.ಒ.ಸಿ.ಯನ್ನು ಕೊಡಿ ಎಂದು ಹೋಗಬೇಕಾದಂತಹ ಪರಿಸ್ಥಿತಿಯು ಇತ್ತು. ಇದನ್ನು ಈ ವರ್ಷದಿಂದ ನಾವು ತಪ್ಪಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲಸವನ್ನು ಮಾಡದೇ ಇದ್ದರೆ ತಪ್ಪಿಸದೇ ಏನು?.

ಶ್ರೀ ಬಿ.ಎಸ್.ಯಡಿಯೂರಪ್ಪ : ಎರಡು ವರ್ಷಗಳಿಂದ ಎಲ್.ಓ.ಸಿ.ಯನ್ನು ಕೊಟ್ಟಿಲ್ಲ ಎಂದು ನನಗೆ ತಿಳಿದ ಮಟ್ಟಿಗೆ ಗೊತ್ತಿದೆ. ಇದರ ಬಗ್ಗೆ ತಾವು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ : 410 ಕೋಟಿ ರೂಪಾಯಿಗಳನ್ನು ಅಪರ್ ಕೃಷ್ಣಾಕ್ಕೆ ಖರ್ಚು ಮಾಡಿದರೆ ಕೆಲಸ ಮಾಡಿದ ಹಾಗೆ ಅಲ್ಲವೇ? ಪ್ರತಿ ತಿಂಗಳು 1/12 ರಷ್ಟು ಹಣವನ್ನು ತಾಲ್ಲೂಕು ಪಂಚಾಯ್ತಿಗೆ ಬಿಡುಗಡೆ ಮಾಡಿದರೆ ಕೆಲಸ ಮಾಡಿದ ಹಾಗೆ ಅಲ್ವಾ? ಕುಡಿಯುವ ನೀರಿಗಾಗಿ ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿದರೆ ಕಲಸ ಮಾಡಿದ ಹಾಗ ಅಲ್ವಾ? ಸಬ್ಸಿಡಿಯನ್ನು 100 ಕೋಟಿ ರೂಪಾಯಿಗಳನ್ನು ಕೊಟ್ಟು 36 ಕೋಟಿಗಳನ್ನು ಅರ್ಬನ್ ಏರಿಯಾದಲ್ಲಿ ಕೊಡುತ್ತೇವೆ ಎಂದರೆ ಕೆಲಸ ಮಾಡಿದ ಹಾಗೆ ಅಲ್ವಾ? ಈಗಾಗಲೇ 220 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಟ್ಟಿದ್ದೇವೆ. 136 ಕೋಟಿ ರೂಪಾಯಿಗಳನ್ನು ರೈತರಿಗೆ ಬಡ್ಡಿಯ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಇದೆಲ್ಲಾ ಕೆಲಸ ಮಾಡಿದ ಹಾಗೇ ಅಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹಣಕಾಸಿನ ಸಚಿವರಾಗಿ ತಾವು ಹೇಳುವುದನ್ನು ನಾವು ನಂಬುತ್ತೇವೆ. ಆದರೆ ನಮಗೆ ಬಂದ ಮಾಹಿತಿಯ ಪ್ರಕಾರವಾಗಿ ಹೇಳುತ್ತೇನೆ. ಈ ಸದನದಲ್ಲಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ. ಡಿಸೆಂಬರ್ ಮತ್ತು ಜನವರಿಯಲ್ಲಿ ನಾವು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿದಾಗ ಸಂಬಂಧಪಟ್ಟಂತ ಅಧಿಕಾರಿಗಳು ಕಾಂಟ್ರ್ಯಾಕ್ಟರ್‌ಗಳನ್ನು ಭೇಟಿ ಮಾಡಿದಂತಹ ಕಾಲದಲ್ಲಿ ಮಾಡಿರುವಂತಹ ಕೆಲಸಕ್ಕೆ ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿದರು ಇದು ಸತ್ಯವೋ ಹೇಗೋ

ಅಲ್ಲವೋ? ಎಲ್.ಒ.ಸಿ.ಯನ್ನು ಬಿಡುಗಡೆ ಮಾಡುವ ಪ್ರಶ್ನೆಯೇ ಬಂದಿಲ್ಲ ಎಂದರೆ ಇಲ್ಲಿ ಕೆಲಸ ಆಗಿಲ್ಲವೆಂದು ಅರ್ಥ. ಅಥವಾ ಕೆಲಸವಾಗಿದ್ದರೂ ಹಣ ಬಿಡುಗಡೆ ಮಾಡಿಲ್ಲ ಎಂದು ಅರ್ಥ. ಈಗಾಗಲೇ ಬಿಡುಗಡೆ ಮಾಡಿದ್ದರೆ, ಬಿಡುಗಡೆ ಇಷ್ಟು ಆಗಿದೆ ಎಂದು ದಯಮಾಡಿ ಹೇಳಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಭಾಗ ನೀರಾವರಿ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯದು ಇದೆ. ಈ ವರ್ಷ ಮಾರ್ಚ್ ತಿಂಗಳಿನಲ್ಲಿ ಅದನ್ನು ಬಿಡುಗಡೆ ಮಾಡುತ್ತೇವೆ. ಅದರ ಬಗ್ಗೆ ಇನ್ನು ಸ್ಪಷ್ಟ ಚಿತ್ರ ಬಂದಿಲ್ಲ. ಏಕೆಂದರೆ ಅಧ್ಯಕ್ಷರೆ, ಫೆಬ್ರವರಿ ತಿಂಗಳಿನದ್ದು ಮಾರ್ಚ್ ತಿಂಗಳಿನಲ್ಲಿ ನಮಗೆ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿಸೆಂಬರ್ ಮತ್ತು ಜನವರಿ ತಿಂಗಳಿನದು?

ಶ್ರೀ ಸಿದ್ಧರಾಮಯ್ಯ : ಡಿಸೆಂಬರ್ ಮತ್ತು ಜನವರಿಯ ತಿಂಗಳಿನ ಬಾಕಿಯನ್ನು ಕೊಟ್ಟು ಬಿಟ್ಟಿರುತ್ತೇವೆ. ಜನವರಿ ಮತ್ತು ಫೆಬ್ರವರಿ ತಿಂಗಳಿನ ಬಾಕಿಯನ್ನು ಕೊಡಬೇಕು ಅದನ್ನು ಮಾರ್ಚ್ ತಿಂಗಳಿನಲ್ಲಿ ಸಂಪೂರ್ಣವಾಗಿ ಬಾಕಿ ಬಿಲ್‌ಗಳನ್ನು ಉಳಿಸದಂತೆ ಚುಕ್ತಾ ಮಾಡುತ್ತೇವೆ. ಈಗ ಅಪ್ಪರ್ ಕೃಷ್ಣಾಕ್ಕೆ 1993-94ರಲ್ಲಿ 243 ಕೋಟಿ ರೂಪಾಯಿಗಳು ಖರ್ಚಾಗಿತ್ತು. 1994-95ರಲ್ಲಿ 260 ಕೋಟಿ ರೂಪಾಯಿಗಳು ಖರ್ಚಾಗಿತ್ತು. 1995-96ರಲ್ಲಿ 450 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಅಂದರೆ ಹಿಂದಿನ ಸರ್ಕಾರಕ್ಕಿಂತ ನಮ್ಮ ಸರ್ಕಾರ ಕೆಲಸ ಮಾಡಿಲ್ಲ ಎಂದು ಅರ್ಥ? ಮಾನ್ಯ ಧರ್ಮಸಿಂಗ್‌ರವರಿಗೆ ಆ ಭಾಗದಲ್ಲಿ ಎಷ್ಟು ವೇಗವಾಗಿ ಕೆಲಸ ನಡೆಯುತ್ತಿದೆ ಎಂದು. ನಾನು ಏಕೆ ಹೇಳಿದೆ ಎಂದರೆ ಮಾನ್ಯ ಸದಸ್ಯರ ಗಮನಕ್ಕೆ ಬರಲಿ ಎಂದು. ಗ್ರಾಮಿಣ ಅಭಿವೃದ್ಧಿಗಾಗಿ ಕಳೆದ ವರ್ಷ 620 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಈ ವರ್ಷ 732 ಕೋಟಿ ರೂಪಾಯಿಗಳನ್ನು ಡಿಸ್ಟರಕ್ಟ ಪ್ಲಾನ್‌ನಲ್ಲಿ ಇದಕ್ಕಾಗಿ ಇಟ್ಟಿದ್ದೇವೆ. The growth is 18 percent ಇದು ಗ್ರಾಮಿಣಾಭಿವೃದ್ಧಿಗೆ ಹೆಚ್ಚು ಖರ್ಚು ಮಾಡಬೇಕು ಎಂದು ಬದ್ಧತೆ ಏನಿದೆ. ಇದು ಅಲ್ಲವೇ ಎನ್ನತಕ್ಕಂತಹ ಮಾತನ್ನು ಮಾನ್ಯ ಸದಸ್ಯರ ಮುಂದೆ ಹೇಳುತ್ತಿದ್ದೇನೆ. ಹಾಗೆಯೇ ಕುಡಿಯುವ ನೀರಿಗಾಗಿ ಕಳೆದ ವರ್ಷ ಅಂದರೆ 1995-96 ಪ್ರಸ್ತುತ ವರ್ಷದಲ್ಲಿ 154 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, 1996-97ಕ್ಕೆ 252 ಕೋಟಿ ರೂಪಾಯಿಗಳನ್ನು ಇಟ್ಟಿರುತ್ತೇವೆ ಇದು ಶೇ. 50 ಹೆಚ್ಚು ಇದೆ. ಗ್ರಾಮೀಣ ಪ್ರದೇಶದ ಜನರು ಕೂಡ ಶುದ್ಧವಾದ ಸಾಕಷ್ಟು ನೀರನ್ನು ಕುಡಿಯಬೇಕು ಎನ್ನುವ ಉದ್ದೇಶದಿಂದ ಹೆಚ್ಚು ಹಣವನ್ನು ಗ್ರಾಮೀಣ ಪ್ರದೇಶದ ಜನರಿಗೆ ಖರ್ಚು ಮಾಡುತ್ತಿದ್ದೇವೆ. ಎನ್ನತಕ್ಕಂತಹ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ. ನಾವು ಹಳ್ಳಿಗಾಡಿನ ಜನರು. ಇವತ್ತು ರಾಷ್ಟ್ರದಲ್ಲಿ ಸುಮಾರು 1/3 ಭಾಗ ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ ಎನ್ನತಕ್ಕಂತಹ ಚಿತ್ರವನ್ನು ನಾವು ಅಂಕಿ ಅಂಶಗಳಿಂದ ನೋಡುತ್ತಿದ್ದೇವೆ. ಆದರೆ ಕರ್ನಾಟಕದಲ್ಲಿ ಎಲ್ಲಿ ವಸತಿಗಳು ಇವೆ ಪ್ರತಿ ಹಳ್ಳಿಗಳಿಗೂ ಕೂಡ ಯಾವುದಾದರೂ ಒಂದು ಮೂಲದಿಂದ ಕುಡಿಯುವ ನೀರನ್ನು ಒದಗಿಸಬೇಕು ನಮ್ಮ ಸರ್ಕಾರದ ಬದ್ಧತೆ, ಆ ದಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ

ಎಂದು ತಿಳಿಸಲಿಕ್ಕೆ ನಾನು ಇಚ್ಛೆಯನ್ನು ಪಡುತ್ತೇನೆ. ಅದಕ್ಕಾಗಿ 252 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಒದಗಿಸಿದ್ದೇವೆ. ಇವತ್ತು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಗಳಿಗೆ ಅಧಿಕಾರ ಇರಬೇಕೆಂದು ಹೇಳಿ ಇದರ ಬಗ್ಗೆ ಒಂದು ಸಮಿತಿ ಇದೆ. ಅದು ಇನ್ನು ವರದಿಯನ್ನು ಕೊಟ್ಟಿಲ್ಲ, ಇವುಗಳಿಗೆ ಎಷ್ಟು ಅಧಿಕಾರವನ್ನು ಹಸ್ತಾಂತರ ಮಾಡಬೇಕು. ಆದುದರಿಂದ ಸಧ್ಯದಲ್ಲಿ ವರದಿಯು ಬರುವವರೆಗೆ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರುಗಳಿಗೆ ಕಾರ್ಯ ನಿರ್ವಾಹಕ ಅಧಿಕಾರವನ್ನು ಕೊಡತಕ್ಕಂತಹ ತಿದ್ದುಪಡಿಗಳನ್ನು ನಾವು ಈಗ ತಂದಿದ್ದೇವೆ. ಏಕೆಂದರೆ ಅಧಿಕಾರಿಗಳೇ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಹೆಚ್ಚು ಅಧಿಕಾರವನ್ನು ಹೊಂದಿರಬಾರದು, ಜನ ಪ್ರತಿನಿಧಿಗಳ ಕೈಯಲ್ಲಿ ಹೆಚ್ಚು ಅಧಿಕಾರ ಇರಬೇಕು. ಜನತೆಯ ಕೈಯಲ್ಲಿ ಅಧಿಕಾರ ಎನ್ನುವ ತಾತ್ವಿಕ ವಿಚಾರಕ್ಕೆ ನಾವು ಬದ್ಧರಾಗಿದ್ದೇವೆ. ಅದು ಮೂಲ ತತ್ವ ಕೂಡ ಜನ ತಂತ್ರ ವ್ಯವಸ್ಥೆಯಲ್ಲಿ. ಆ ಬದ್ಧತೆಯನ್ನು ನಾವು ಇವತ್ತು ಮಾಡಿದ್ದೇವೆ. ಆ ವರದಿಯು ಬಂದ ಮೇಲೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ ಎನ್ನತಕ್ಕಂಥದ್ದು.....

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ಈಗ ತಾವು ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷರು, ಮತ್ತು ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರುಗಳಿಗೆ 197 ಜನರಿಗೆ ಅಧಿಕಾರವನ್ನು ಕೊಟ್ಟು ಸುಮಾರು 6,000 ಕ್ಕಿಂತಲೂ ಹೆಚ್ಚು ಇರುವಂಥ ಗ್ರಾಮ ಪಂಚಾಯ್ತಿಯ ಅಧ್ಯಕ್ಷರುಗಳಿಗೆ ಅಧಿಕಾರವನ್ನು ಕೊಡಲಿಲ್ಲ ಎನ್ನುವುದಕ್ಕೆ ಕಾರಣವೇನು?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರುಗಳಿಗೂ ಕೂಡ ವರದಿ ಬಂದ ಮೇಲೆ ಎಷ್ಟು ಅಧಿಕಾರವನ್ನು ಕೊಡಬೇಕೆಂದು ಗೊತ್ತಾಗುತ್ತದೆ. ಏಕೆಂದರೆ ಒಂದು ಸಮಿತಿಯು ಇರುವುದರಿಂದ ಹೆಚ್ಚು ತಿದ್ದುಪಡಿಗಳನ್ನು ತಂದಿದ್ದೇವೆ. ಆ ಸಮಿತಿಗೆ ಎಷ್ಟು ಅಧಿಕಾರವನ್ನು ಕೊಡಬೇಕೆಂದು ತಿಳಿಸಬೇಕೆಂದು ಕೇಳಿದ್ದೇವೆ. ಆ ಕಾರಣಕ್ಕಾಗಿ ನಾವು ಅವರ ವರದಿ ಬಂದ ಮೇಲೆ ಎಷ್ಟು ಅಧಿಕಾರವನ್ನು ಕೊಡಬೇಕೆಂದು ಗೊತ್ತಾಗುತ್ತದೆ. ಡಿ.ಆರ್. ಪಾಟೀಲರೆ ನೋಡಿದ್ದೀರಿ, ಹಿಂದೆ ನೀವು ಜಿಲ್ಲಾ ಪಂಚಾಯ್ತಿಯ ಸದಸ್ಯರಾಗಿದ್ದೀರಿ, ವಿರೋಧ ಪಕ್ಷದ ನಾಯಕರಾಗಿದ್ದೀರಿ ಹಿಂದೆ ನಾವು ಮಂಡಲ್ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್‌ಗಳನ್ನು ತಂದಾಗ ಎಷ್ಟು ಅಧಿಕಾರವನ್ನು ಜಿಲ್ಲಾ ಅಧ್ಯಕ್ಷರುಗಳಿಗೆ ಕೊಟ್ಟಿದ್ದೆವು ಎಂಬುದು ತಮಗೆ ಗೊತ್ತಿದೆ. ಆ ತತ್ವಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವುದು ಕೂಡ ತಮಗೆ ಗೊತ್ತಿದೆ.

10.30. ಎ.ಎಂ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಮಾನ್ಯ ಅಧ್ಯಕ್ಷರೆ, ಜನ ಪ್ರತಿನಿಧಿಗಳ ಕೆಳಗೆ ಅಧಿಕಾರವನ್ನು ಕೊಟ್ಟು, ಆಡಳಿತವನ್ನು ನಡೆಸಬೇಕೆಂಬ ಉದ್ದೇಶವನ್ನು ಈ ಸರ್ಕಾರ ಇಟ್ಟುಕೊಂಡಿದೆ ಎಂಬ ಮಾತನ್ನು ತಾವು ಏನು ಹೇಳುತ್ತಿದ್ದೀರಿ ಇದನ್ನು ನಾನು ಸ್ವಾಗತಿಸುತ್ತೇನೆ. ಅದರ ಜನಪ್ರತಿನಿಧಿಗಳು ಎಂದರೆ ಶಾಸಕರು ಕೂಡ ಇದ್ದಾರೆ ಎನ್ನುವುದು ಸರ್ಕಾರದ

ಗಮನದಲ್ಲಿರಬೇಕಾಗುತ್ತದೆ. ನಾವು ಶಾಸಕರಾಗಿ ಇಡೀಕ್ಷೇತ್ರದ ಪ್ರತಿನಿಧಿಗಳಾಗಿ ಕೆಲಸಮಾಡುತ್ತಿರುತ್ತೇವೆ, ನಾವು ತಾಲೂಕು ಕೇಂದ್ರಕ್ಕೆ ಬಂದರೆ ನಾವು ಕುಳಿತುಕೊಳ್ಳುವುದಕ್ಕೆ ಒಂದು ಕಛೇರಿ ಇಲ್ಲ, ನಮಗೆ ಒಬ್ಬ ಅನಾಥನನ್ನು ನೋಡುವಂತೆ ನೋಡುತ್ತಾರೆ. ಇಂಥವನು ಬಹಳ ಬಡವ ಇವನಿಗ ಒಂದು ಮನೆ ಕೊಡಿ, ಇಂಥವನಿಗೆ ನಿವೇಶನ ಕೊಡಿ, ಇಂಥವನಿಗೆ ಇಂಥ ಒಂದು ಸಹಾಯವನ್ನು ಮಾಡಿ ಎಂದು ಹೇಳಿ ಕೊಡಿಸುವಂಥ ಅಧಿಕಾರವನ್ನು ತಾವು ನಮಗೆ ಕೊಟ್ಟಿಲ್ಲ. ಅಧಿಕಾರಿಗಳಿಗೆ ನಾವು ನೇರವಾಗಿ ಹೇಳಿ ಕೊಡಿಸುವಂಥ ಅಧಿಕಾರ ನಮಗೆ ಕೊಟ್ಟಿಲ್ಲ. ಈ ವಿಚಾರಕ್ಕೆ ಸಂಬಂಧ ಪಟ್ಟಂತೆ ನನಗೆ ತಾವು ಉತ್ತರವನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೆ ಹೇಳಿದಂಥ ಪರಿಸ್ಥಿತಿ ಏತಕ್ಕೆ ಬಂತು ಎಂದರೆ ಈಗ ತಂದಿರತಕ್ಕ ಪಂಚಾಯ್ತಿ ಕಾಯಿದೆಯಿಂದ. ಹಿಂದೆ ಇದ್ದಂಥ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಒಂದು ತಾಲ್ಲೂಕು ಪಂಚಾಯಿತಿ ಎನ್ನತಕ್ಕ ವ್ಯವಸ್ಥೆ ಇತ್ತು. ಅದು ಚುನಾಯಿತ ಪ್ರತಿನಧಿಗಳು ಇರತಕ್ಕ ವ್ಯವಸ್ಥೆ ಅಲ್ಲ. ಸಂಬಂಧಪಟ್ಟ ಎಂ.ಎಲ್.ಎ.ಅವರೇ ಇರುತ್ತಿದ್ದರು. ಆದರೆ ಈಗ 3 ಹಂತಗಳಲ್ಲಿ ಚುನಾವಣೆಯನ್ನು ಮಾಡುತ್ತಿರುವುದರಿಂದ ಅಲ್ಲೂ ಕೂಡ ಚುನಾಯಿತ ಪ್ರತಿನಿಧಿಗಳೇ ಅಧ್ಯಕ್ಷರಾಗಿರುತ್ತಾರೆ. ತಮಗೆ ಗೊತ್ತಿರಬಹುದು, ತಾವು ತಾಲ್ಲೂಕು ಬೋರ್ಡ್ ಸದಸ್ಯರಾಗಿದ್ದಿರಬಹುದು. ನಾನೂ ಕೂಡ ತಾಲೂಕು ಬೋರ್ಡ ಸದಸ್ಯನಾಗಿದ್ದೆ. ಆಗ ಬಡವರಿಗೆ ಮನೆಗಳನ್ನು ಕೊಡುವುದು, ನಿವೇಶನಗಳನ್ನು ಕೊಡುವದು ಆಗಲಿಲ್ಲ. ನಾನು 1978ರಿಂದ 83ರವರೆಗೆ ತಾಲೂಕು ಬೋರ್ಡ್ ಸದಸ್ಯನಾಗಿದ್ದೆ. ಆಗಲೂ ಕೂಡ ಇದೇ ಗ್ರಾಮಪಂಚಾಯಿತಿ, ತಾಲೂಕು ಬೋರ್ಡ್ ಇದ್ದುವು. ಜಿಲ್ಲಾ ಬೋರ್ಡ್ ಇರಲಿಲ್ಲ. ಶಾಸಕರ ಅಧಿಕಾರವನ್ನು ಮೊಟಕು ಮಾಡಬೇಕೆಂದು ಉದ್ದೇಶ ನಮಗಿಲ್ಲ. ಆದರೆ ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಾಗ ಇಂಥಾದ್ದು ಅನಿವಾರ್ಯವಾಗುತ್ತವೆಂಬುದನ್ನೂ ನಾವು ತಿಳಿದುಕೊಳ್ಳಬೇಕಾಗುತ್ತದೆಂಬುದನ್ನು ಮಾತ್ರ ನಾನು ಹೇಳಬಯಸುತ್ತೇನೆ. ಸರ್ಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಯಾವರೀತಿ ಹಂಚಿಕೆಯಾಗಬೇಕೆಂಬ ಬಗ್ಗೆ ಡಾ॥ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೆವು ಅವರ ವರದಿ ಈಗ ಒಂದು ವಾರದ ಹಿಂದೆ ನಮಗೆ ಬಂದಿದೆ. ಇದರಿಂದಾಗಿ ಆ ವರದಿ ಕ್ಯಾಬಿನೆಟ್ ಮುಂದೆ ಬಂದಿಲ್ಲ. ಸರ್ಕಾರ ಇದರ ಬಗ್ಗೆ ಯಾವುದೇ ನಿರ್ಣಯವನ್ನೂ ಮಾಡಿಲ್ಲ. ಅದರಲ್ಲಿ ಏನು ಹೇಳಿದ್ದಾರೆಂದರೆ, ರಾಜ್ಯಕ್ಕೆ ಬರತಕ್ಕ ನಾನ್ ಲೋನ್ ರೆವಿನ್ಯೂ ರಿಸೀಟ್ಸ್ ಏನಿದೆ ಇದರಲ್ಲಿ 36 ಪರ್ಸೆಂಟನ್ನು ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಳೀಯ ಸಂಸ್ಥೆಗಳಿಗೆ ಹೋಗಬೇಕೆಂದು ಶಿಫಾರಸು ಮಾಡಿದ್ದಾರೆ. ಆ 36 ಪರ್ಸೆಂಟ್‌ನಲ್ಲಿ 85 ಪರ್ಸೆಂಟ್ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಮತ್ತು 15 ಪರ್ಸೆಂಟ್ ನಗರ ಸ್ಥಳೀಯ ಸಂಸ್ಥೆಗಳಿಗೆ ಹೋಗಬೇಕೆಂದು ಶಿಫಾರಸು ಮಾಡಿದ್ದಾರೆ.

ಇವರ ಬಗ್ಗೆ ಇನ್ನೂ ಅಂತಿಮವಾಗಿ ತೀರ್ಮಾನ ಆಗಬೇಕಾಗಿದೆ. ಹೀಗೆ ಹೇಳಿದ್ದರೂ ಕೂಡ ನಾನು ನಗರ ಸಂಸ್ಥೆಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ 60 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೋರಿಸಿದ್ದೇನೆ ಎಂಬುದನ್ನು ಹೇಳಬಯಸುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರೂ ಮತ್ತು ಮಾನ್ಯ ಯಡಿಯೂರಪ್ಪನವರೂ ಮಾತನಾಡಿ 8 ನೇ ಯೋಜನೆಯಲ್ಲಿ ನೀವು ಬಹಳ ಕೊರತೆ ಬಿದ್ದಿದ್ದೀರಿ ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಲ್ಲಿ ಬಹಳ ಕುಂಠಿತವಾಗುತ್ತದೆ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ, 8ನೇ ಯೋಜನೆ ಪ್ರಾರಂಭವಾದುದು 1992-93ರಿಂದ. ಅಲ್ಲಿ ನಿಗದಿಯಾದ ಪ್ಲಾನ್ ಔಟಲೇ ಎಂದರೆ 91-92ರಲ್ಲಿದ್ದಂಥದರ ಸುಮಾರು 12,300 ಕೋಟಿ ರೂಪಾಯಿಗಳು ಮಾನ್ಯ ಮೊಯ್ಲಿಯವರೂ ಮತ್ತು ಅವರಿಗಿಂತ ಹಿಂದೆ ಮಾನ್ಯ ಬಂಗಾರಪ್ಪನವರೂ ಅಧಿಕಾರದಲ್ಲಿ ಇದ್ದಾಗ ಅವರು ಪ್ಲಾನ್‌ನ್ನು ರೀಚ್ ಆಗಿದ್ದುದು ಅವತ್ತಿನ ಕಾನ್‌ಸ್ಟಂಟ್ ರೇಟಿಗನುಗುಣವಾಗಿ 51 ಪರ್ಸೆಂಟ್. ನಮ್ಮದು 2 ವರ್ಷದಲ್ಲಿ 3100 ಕೋಟಿ, ಇನ್ನೊಂದು 4360 ಕೋಟಿ ರೂಪಾಯಿಗಳನ್ನು 91-92ರ ಕಾನ್‌ಸ್ಟೆಂಟ್ ರೇಟಿಗೆ ತಗೆದುಕೊಂಡರೆ ನಾವೂ ಕೂಡ 42 ಪರ್ಸೆಂಟ್‌ಗಿಂತ ಹೆಚ್ಚು 2 ವರ್ಷದಲ್ಲಿ ಮಾಡಿದ್ದೇವೆ. ಅವರು 3 ವರ್ಷದಲ್ಲಿ 51 ಪರ್ಸೆಂಟ್ ಮಾಡಿದ್ದಾರೆ. ಅಂದಮೇಲೆ ಅವರ ಕಾಲದಲ್ಲಿ ಯೋಜನೆಯಲ್ಲಿ ಬಹಳ ಮುಂದೆ ಹೋಗಿದ್ದರೆ, ಎಲ್ಲವನ್ನೂ ಮಾಡಿದ್ದರು, ಇವರು ಏನೂ ಮಾಡಿಲ್ಲವೆಂದು ಮಾಡತಕ್ಕ ವಾದದಲ್ಲಿ ಯಾವುದೇ ತಿರುಳೂ ಇಲ್ಲ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

ಅವರು ಏನೊಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಹೇಳುವುದಾದರೆ, 8ನೇ ಪ್ಲಾನ್‌ನ ಮೊದಲ 3 ವರ್ಷಗಳ 67 ಪರ್ಸೆಂಟ್ ನಾವು ಇಟ್ಟಿದ್ದೆವು ಎಂದು ಹೇಳಿದ್ದಾರೆ. ಆದರೆ ನಿಜವಾಗಿ ಔಟ್‌ಲೇನಲ್ಲಿ ಇರುವುದು ಬೇರೆ, ಖರ್ಚು ಮಾಡುವುದು ಬೇರೆ. ಅದರ ಪ್ರಕಾರ ಅವರ 52.4 ಪರ್ಸೆಂಟ್ ಖರ್ಚುಮಾಡಿದ್ದರು. 1992-93ರಲ್ಲಿ ಪರ್ ಕ್ಯಾಪಿಟಾ ಔಟ್‌ಲೇನಲ್ಲಿ ನಮ್ಮ ಕರ್ನಾಟಕ 6ನೇ ಸ್ಥಾನದಲ್ಲಿತ್ತು. 1993-94ನೇ ಸಾಲಿನಲ್ಲಿ ಮೊದಲನೇ ಸ್ಥಾನಕ್ಕೆ ನಾವು ತೆಗೆದುಕೊಂಡು ಹೋಗಿದ್ದೆವು. ನಾನಾದರೂ ಹೇಳುತ್ತೇನೆ, ನಮ್ಮ ಕಾಲದಲ್ಲಿ ಕಡಿಮೆ ಏನೂ ಆಗಿಲ್ಲ. ಪರ್ ಕ್ಯಾಪಿಟಾ ಜಾಟಲೇನಲ್ಲಿ ಮೊದಲನೇ ಜಾಗದಲ್ಲೇ ಇರಬೇಕಾಗಿತ್ತು. ಆದರೆ 2ನೇ ಸ್ಥಾನದಲ್ಲಿವೆ. ಈಗ 1ನೇ ಸ್ಥಾನದಲ್ಲಿ ಪಂಜಾಬ್ ಇದೆ. ಇದಕ್ಕೆ ಕಾರಣ ಏನೆಂದರೆ, ಪಂಜಾಬ್‌ನಲ್ಲಿ ಗಲಾಟೆಗಳು ಇದ್ದುದರಿಂದ ಮತ್ತು ಚುನಾವಣೆ ಆದಮೇಲೆ ಕೇಂದ್ರ ಸರ್ಕಾರದಿಂದ ಬಹಳಷ್ಟು ಹಣವನ್ನು ಅಲ್ಲಿನ ಯೋಜನೆಗಳಿಗೆ ಕೊಟ್ಟರು. ಇದರಿಂದಾಗಿ ಅದು ಮೊದಲನೇ ಸ್ಥಾನಕ್ಕೆ ಹೋಗುವುದಕ್ಕೆ ಕಾರಣವಾಯಿತೇ ಹೊರತು, ಬೇರೆ ಕಾರಣ ಅಲ್ಲ. ಎಲ್ಲರಿಗೂ ಕೊಡುವ ರೀತಿಯಲೇ ಪ್ಲಾನ್ ಅಪ್ರೂವಲ್ ಆಗಿದ್ದಿದ್ದರೆ ನಾವೇ ಮೊದಲನೇ ಸ್ಥಾನದಲ್ಲಿ ಇರುತ್ತಿದ್ದೆವು ಎನ್ನತಕ್ಕಂಥ ಮಾತನ್ನು ಕೂಡ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇವೆ. 25 ರಾಜ್ಯಗಳ ಪೈಕಿ ಪ್ಲಾನ್ ಜಾಟಲೇನಲ್ಲಿ ನಾವು ಮೊದಲನೇ ಸ್ಥಾನವನ್ನು ಉಳಿಸಿಕೊಂಡು ಹೋಗುತ್ತಿದ್ದೆವು ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇವೆ. ಕಳೆದ 1ವರ್ಷದ ಅವಧಿಯಲ್ಲಿ

ಬೆಳವಣಿಗೆಯಲ್ಲಿ ಪರ್ ಕ್ಯಾಪಿಟಾ ಔಟಲೇನಲ್ಲಿ, ದೇಶದಲ್ಲಿರುವ 25 ರಾಜ್ಯಗಳಿಗೆ ಕೊಟತಕ್ಕ ಪ್ಲಾನ್ ಔಟಲೇನಲ್ಲಿ ನಾವು ಯಾವಾಗಲೂ ಹಿಂದೆ ಬಿದ್ದಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ಈ ಟ್ರೆಂಡ್ ಹೇಗಿದೆ ಎಂದರೆ ಯಾವುದೇ ಪಂಚವಾರ್ಷಿಕ ಯೋಜನೆಯನ್ನು ತೆಗೆದುಕೊಂಡರೂ ನೂರಕ್ಕೆ ನೂರು ಗುರಿ ಸಾಧನೆ ಆಗಿಲ್ಲ. ತಮಗೆ ಸ್ಪಷ್ಟ ಚಿತ್ರಣ ಕೊಡಬೇಕೆಂದರೆ, ಮೊದಲನೇ ಪಂಚವಾರ್ಷಿಕ ಯೋಜನೆ ಒಂದರಲ್ಲೇ ರೀಚ್ ಆಗಿರತಕ್ಕದ್ದು-18.3, 3ನೇ ಪಂಚವಾರ್ಷಿಕ ಯೋಜನೆಯಲ್ಲಿ -12.7, 1965ರಿಂದ 69ರವರೆಗೆ 3ನೇ ಯೋಜನೆಯಲ್ಲಿ -4.7 ಕೊರತೆ ಇತ್ತು. 4ನೇ ಯೋಜನೆಯಲ್ಲಿ -13, 5ನೇ ಯೋಜನೆಯಲ್ಲಿ -21, 6ನೇ ಯೋಜನೆಯಲ್ಲಿ -13.5, 7ನೇ ಯೋಜನೆಯಲ್ಲಿ 2.0, ಇದರಲ್ಲಿ ಅಂದರೆ 89ನೇ ಇಸವಿಯವರೆಗೂ ನಾವೂ ಕೂಡ ಆ ಸರ್ಕಾರದಲ್ಲಿ ಇದ್ದೆವು. ಇದು 1985ರಿಂದ 90ರವರೆಗೆ. ಆಮೇಲೆ ಈಗ ಅದು ಆರು ಪಾಯಿಂಟ್ ಸಮತಿಂಗ್ ಆಗಿದೆ. ಇದು ಎಲ್ಲಾ ಪಂಚವಾರ್ಷಿಕ ಯೋಜನೆಗಳು ಕೂಡ ಒಂದು ವರ್ಷದ ಪ್ರೈಸಸ್ ಮೇಲೆ ನಿಗದಿ ಮಾಡಿರುತ್ತಾರೆ. ಆ ಕಾನ್‌ಸ್ಟಂಟ್‌ಪ್ರೈಸಸ್‌ನಲ್ಲಿ ಯಾವ ಪಂಚವಾರ್ಷಿಕ ಯೋಜನೆಗಳೂ ಕೂಡ ಗುರಿ ತಲುಪುವುದಕ್ಕೆ ಸಾಧ್ಯವಾಗಿಲ್ಲ ಎಂಬ ಮಾತನ್ನು ಹೇಳುವುಕ್ಕೆ ಇಷ್ಟಪಡುತ್ತೇನೆ. ಇದು ಇರತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಿದ್ದಾರೆ. ವಿದ್ಯುತ್‌ಗೆ ಕಡಿಮೆ ಆಯಿತು. ಎಂದು ಹೇಳಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ವಿದ್ಯುತನಲ್ಲಿ ಐ.ಪಿ.ಆರ್.ನಲ್ಲಿ ರಿಸೋರ್ಸ್ ಮಾಡುವುದಿಕ್ಕಾಗಿಲ್ಲ. ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಅದು ಕೂಡ ಸ್ಥಗಿತವಾಯಿತು, ರೀಯಿಂಬರ್ಸ್‌ಮೆಂಟ್ ಬರಲಿಲ್ಲ. ಹಾಗಯೇ ಅಪ್ಪರ್ ಕೃಷ್ಣಾದಲ್ಲಿ ಕೂಡ. 186 ಕೋಟಿ ರೀಯಿಂಬರ್ಸ್‌ಮೆಂಟ್ ಆಗಬೇಕಾಗಿದ್ದರೆ ಆದದ್ದು 65 ಕೋಟಿ ಮಾತ್ರ. ಅಲ್ಲಿಯೂ 120 ಕೋಟಿ ರೂಪಾಯಿ ಕೊರತೆ ಆಯಿತು. ಇಲ್ಲದಿದ್ದರೆ ಮುಖ್ಯ ಮಂತ್ರಿಗಳು ಏನು ಹೇಳಿದ್ದರು ಅಷ್ಟು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ವರ್ಲ್ಡ್ ಬ್ಯಾಂಕಿನವರು ಬಂದು ಹೇಳಿದ ಮೇಲೆ 689 ಕೋಟಿ ಇಟ್ಟಿದ್ದರಲ್ಲಿ 515 ಕೋಟಿ ಖರ್ಚು ಮಾಡುವುದಕ್ಕಾಗಲಿಲ್ಲ. 590 ಕೋಟಿ ಎಂದು ಮಾಡಿದ್ದುದು 515 ಕೋಟಿ ಆಯಿತು. ಮತ್ತು ನಾವು ರಾಜ್ಯದಿಂದ ನಮ್ಮ ಬಜೆಟ್ ಕ್ಯಾಪಿಟಾ ಕೂಡ ಕೊಟ್ಟಿದ್ದೇವೆ. ಈ ವಿದ್ಯುತ್ ತರಿಸುವುದಕ್ಕೋಸ್ಕರ. ಇದರ ಜೊತೆಗೆ ವಿದ್ಯುತ್ ಉತ್ಪಾದನೆ ಕಡಿಮೆ ಆಯಿತು. ಜಲ ವಿದ್ಯುತ್ ಉತ್ಪಾದನೆ ಕಡಿಮೆಯಾದುದರಿಂದ ಬೇರೆ ವಿದ್ಯುತ್ ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳಬೇಕಾಗಿ ಬಂತು. ಇದಕ್ಕೆ ಸರ್ಕಾರದಿಂದ ನೂರು ಕೋಟಿಗಿಂತ ಹೆಚ್ಚು ಹಣ ನಾವು ಕೊಟ್ಟಿದ್ದೇವೆ. ಮತ್ತೆ ಮುಂದಿನ ವರ್ಷಕ್ಕೆ ಕಡಿಮೆ ಮಾಡಿದ್ದೀರಿ ಎಂಬ ಮಾತನ್ನು ಮಾನ್ಯ ಯಡಿಯೂರಪ್ಪನವರು ಹೇಳಿದರು. ಆದರೆ ಅದು ಕಡಿಮೆಯಾಗಿಲ್ಲ. ಒಟ್ಟು 776 ಕೋಟಿ ರೂಪಾಯಿ ಹೋದಸಾರಿ ಇತ್ತು. ಮುಂದಿನ ವರ್ಷಕ್ಕೆ ಅದಕ್ಕಿಂತಲೂ ಹೆಚ್ಚು ನಾವು ಇಟ್ಟಿದ್ದೇವೆ. 590 +186 ಕೋಟಿ ರೂಪಾಯಿ ಎಲೆಕ್ಟ್ರಿಸಿಟಿ ಸಬ್ಸಿಡಿ ಕೊಡತಕ್ಕದ್ದು. ಅಲ್ಲಿ ಮೊದಲು ಏನಿತ್ತು ಅಂದರ 680+80 ಕೋಟಿ ಇತ್ತು. ಒಟ್ಟು ಈ ಸಾರಿ 766 ಕೋಟಿ ಆಯಿತು. ಈ ಸಾರಿ

590+186 ಆಯಿತು. ಒಟ್ಟು ಇಷ್ಟು ಹೆಚ್ಚು ಹಣವನ್ನು ಇರತಕ್ಕ ಕೆಲಸವನ್ನು ಮಾಡಿದ್ದೇವೆ. ಇವರ ಜೊತೆಗೆ ಅನೇಕ ಪ್ರಾಜೆಕ್ಟಗಳನ್ನು ಕ್ಲಿಯರ್ ಮಾಡತಕ್ಕದ್ದನ್ನು ಮಾಡಿದ್ದೇವೆ. ಕೊಜೆಂಟ್ರಿಕ್ಸ್ ಕೇಂದ್ರಕ್ಕೆ ಕಳುಹಿಸಿದ್ದೇವೆ. ಇನ್ನೂ ಅದು ಬಂದಿಲ್ಲ. ಕೊಜೆಂಟ್ರಿಕ್ಸ್ ನಮ್ಮದು ಅಲ್ಲ. ಬಂಗಾರಪ್ಪನವರ ಕಾಲದಿಂದ, ಮೊಯಿಲಿಯವರ ಕಾಲದಿಂದ ಇತ್ತು. ಅದನ್ನು ನಾವು ಮುಂದುವರಿಸಿದ್ದೇವೆ. ಏಕೆಂದರೆ, ವಿದ್ಯುತ್ ಬೇಕಾದ ಕಾರಣಕ್ಕೋಸ್ಕರ ಇದನ್ನು ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಒಂದು ಮಾತನ್ನು ಮೊಯಿಲಿಯವರು ಹೇಳಿದರು, ನೀವು ಚಾರ್ಜಿಮೆಂಟ್ ಏನೋ ಮಾಡುವುದಕ್ಕೆ ಹೊರಟಿದ್ದೀರಿ, ಅದು ನಮಗೆ ಸಿಡಿಲು ಬಡಿದ ಹಾಗ ಆಗಿದೆ ಎಂದು ಹೇಳಿದರು. ಅದಕ್ಕೆ ಹೆದರಿಕೊಳ್ಳಬೇಕಾದ ಅಗತ್ಯ ಏನೂ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಜಗತ್ತಿನ ಅನೇಕ ಪ್ರದೇಶಗಳಲ್ಲಿ ಈ ರೀತಿ ವಿದ್ಯುತ್ ಉತ್ಪಾದನೆ ಮಾಡತಕ್ಕ ಪರಿಸ್ಥಿತಿ ಇದೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಾ, ನಾವು 4 ಕಡೆ ಕುಮಟಾ, ಮುಲ್ಕಿ, ಮಂಗಳೂರಿನಲ್ಲಿ ಪ್ರಾಜೆಕ್ಟ ಮಾಡಿ ಒಂದೊಂದು ಪ್ರಾಜೆಟ್‌ಗೆ 400 ಕೋಟಿ ರೂಪಾಯಿ ಇಟ್ಟಿದ್ದೇವೆ. ಅದಕ್ಕಿಂತ ಹೆಚ್ಚಾದರೆ ಸೆಂಟ್ರಲ್ ಗವರ್ನ್‌ಮೆಂಟ್ ಕ್ಲಿಯರೆನ್ಸ್ ಬೇಕಾಗುತ್ತದೆಂಬ ಕಾರಣದಿಂದ ಇದು ಮಾಡುತ್ತಿದ್ದೇವೆ. ಮತ್ತು ಅದರಿಂದ 6 ತಿಂಗಳಲ್ಲಿ ಉತ್ಪಾದನೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅದು ಆಗದೆ ಹೋದರೆ ನಷ್ಟ ಕಟ್ಟಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆ ಪ್ರಯತ್ನ ನಡೆದಿದೆ. ಹೇಗಾದರೂ ಮಾಡಿ ವಿದ್ಯುತ್ ಕೊರತೆ ನೀಗಿಸಬೇಕೆಂಬ ಪ್ರಯತ್ನದಿಂದ ಇದನ್ನು ಮಾಡುತ್ತಿದ್ದೇವೆ. ಸುಮಾರು 500 ರಿಂದ 600 ಮೆಗಾವ್ಯಾಟ್ ಉತ್ಪಾದನೆ ಮಾಡತಕ್ಕದ್ದು ಆಗುತ್ತದೆ. ಆದುದರಿಂದ ಮುಂದಿನ ಒಂದು ವರ್ಷದಲ್ಲಿ ಈ ಸಮಸ್ಯ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇವೆ. ಆದುದರಿಂದ ನೀರಾವರಿ ಮತ್ತು ವಿದ್ಯುತ್‌ನಲ್ಲಿ ಈಗಾಗಲೇ ಹೇಳಿದಂತೆ ವಿದ್ಯುತ್‌ಗೆ ಆ ಭಾಗದಲ್ಲಿ ಮಳೆ ಬರಲಿಲ್ಲ. ಬಹುತೇಕವಾಗಿ ಹೈಡ್ರೋ ಎಲೆಕ್ಟ್ರಿಕ್ ಪವರ್ ಹತ್ತಿರ ಇರತಕ್ಕದ್ದು. ಆದುದರಿಂದ ಅದನ್ನು ಮಾಡಲಿಕ್ಕೆ ಹೊರಟಿದ್ದೇವೆ. ಒಂದು ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಹೆಚ್ಚು ಹಣವನ್ನು ಪ್ರತಿ ಯೂನಿಟ್‌ಗೆ ಕೊಡಬೇಕಾದ ಪರಿಸ್ಥಿತಿ ಬರುತ್ತಿವೆ ಎಂದು ಹೇಳಿದ್ದಾರೆ. ರಾಯಚೂರಿನಲ್ಲಿ ಥರ್ಮಲ್ ಪ್ಲಾಂಟಿನಲ್ಲಿ ಮಾಡತಕ್ಕದ್ದರಲ್ಲಿ ಕೂಡ ಸುಮಾರು 2.40 ಪೈಸೆಯಷ್ಟು ಒಂದು ಯೂನಿಟಿಗೆ ಆಗುತ್ತಿದೆ. ಇದರಲ್ಲಿ ಕೂಡ ಇವರು ಚಾರ್ಜಿಮೆಂಟ್ ಅವರದ್ದು 2.60:2.65 ಪೈಸೆಗೆ ಫೈನಲ್ ಆಗುವ ಹಂತದಲ್ಲಿದೆ. ಕೊಜೆಂಟ್ರಿಕ್ಸ್‌ದೂ ಕೂಡ ಬದಲಾಗುತ್ತದೆಂಬ ಮಾತನ್ನು ಹೇಳಿದ್ದಾರೆ. ಅದು ಸುಮಾರು 3 ರೂಪಾಯಿ ಹತ್ತಿರ ಆಗಬಹುದೆಂದು ಇದೆ. ಆದುದರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಈ ಸಮಸ್ಯೆಗಳು ಇವೆ. ಏಕೆಂದರೆ ವಿದ್ಯುತ್ ಇಲ್ಲದೆ ಹೋದರೆ ಯಾವುದೇ ಆರ್ಥಿಕ ಬೆಳವಣಿಗೆ ಯಾವುದೇ ರಾಜ್ಯದಲ್ಲಿ, ದೇಶದಲ್ಲಿ ಆಗುವುದು ಕಷ್ಟವಾಗುತ್ತದೆ. ಕೈಗಾರಿಕಾ ಕ್ಷೇತ್ರದ ಬೆಳವಣಿಗ ಇರಬಹುದು, ಕೃಷಿ ಕ್ಷೇತ್ರದ ಬೆಳವಣಿಗೆ ಇರಬಹುದು, ಈ ಒಂದು ಬೆಳವಣಿಗ

ಕುಂಠಿತವಾಗುತ್ತದೆಂಬ ಕಾರಣಕ್ಕೋಸ್ಕರ ಅನೇಕ ಪ್ರಾಜೆಕ್ಟ್‌ಗಳನ್ನು ಇವತ್ತು ಕ್ಲಿಯರ್ ಮಾಡತಕ್ಕ ಪ್ರಯತ್ನ ಮಾಡಿದ್ದೇವೆ. ಅದರ ಜೊತೆಗೆ ಇನ್ನೊಂದು ಮಾತು ಹೇಳಿದರು, ನೀವು ಪರಿಸರದ ಬಗ್ಗೆ ಗಮನಹರಿಸಬೇಕು, ಓಟ್ ಕರಂಟ್ ನೀರಿನಲ್ಲಿ ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ಅದನ್ನೆಲ್ಲ ಪರಿಶೀಲನೆ ಮಾಡಿಯೇ ಅದಕ್ಕೆ ಒಪ್ಪಿಗೆ ಕೊಡತಕ್ಕ ತೀರ್ಮಾನವನ್ನು ಸರ್ಕಾರ ಮಾಡುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಹೊಸ ಕೈಗಾರಿಕೆಗಳು ಬಂದಾಗಲೂ ಕೂಡ ಮಾನ್ಯ ಸದಸ್ಯರಾದ ಯೋಗೀಶಭಟ್‌ರು ಇದರ ಬಗ್ಗೆ ಹೇಳಿದರು, ಅದಕ್ಕೆ ಹೊಸ ನೀತಿ ಬರುತ್ತದೆ. ಅದನ್ನು ಒಂದು ತಿಂಗಳಲ್ಲಿ ಅನೌನ್ಸ್ ಮಾಡುತ್ತೇವೆ. ಕೈಗಾರಿಕೆ ಬರುವಾಗ ಏನು ಸರೋಜಿನಿ ಮಹಿಷಿ ವರದಿಯಲ್ಲಿ ಶಿಫಾರಸ್ಸುಗಳನ್ನು ಮಾಡಿದ್ದಾರೆ ಅದನ್ನು ನಾವು ಜಾರಿಗೆ ಕೊಟ್ಟು ಅವರಿಗೆ ಲೈಸನ್ಸ್ ಕೊಡುವಾಗ ಹೇಳುತ್ತಿದ್ದೇವೆ, ಸ್ಥಳೀಯ ಜನರಿಗೆ ಅವಕಾಶ ಕೊಡಬೇಕು, ಕನ್ನಡಿಗರಿಗೆ ಅವಕಾಶ ಕೊಡಬೇಕೆಂಬ ಮಾತನ್ನು ಉಲ್ಲೇಖ ಮಾಡಿ ಕೊಡುತ್ತಿದ್ದೇವೆ. ಈಗ ಹೊಸದಾಗಿ ನಮ್ಮ ಸರ್ಕಾರ ಬಂದ ಮೇಲೆ ಅದನ್ನು ನಾವು ಕ್ಲಿಯರ್ ಮಾಡುವಾಗ ಸರೋಜಿನಿ ಮಹಿಷಿ ವರದಿಗೆ ಅನುಗುಣವಾಗಿ ಕನ್ನಡಿಗರಿಗೆ ಕೆಲಸ ಕೊಡಬೇಕೆಂದು ಅದನ್ನು ಸ್ಪಷ್ಟಪಡಿಸಿ ನಾವು ಕೊಡುತ್ತಿದ್ದೇವೆಂಬ ಮಾತನ್ನು ಹೇಳುತ್ತಿದ್ದೇವೆ. ಇದರ ಬಗ್ಗೆ ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದ್ದೇವೆ. ಯಾವ ಇಂಡಸ್ಟ್ರಿಗಳನ್ನು ಮಾಡಲಿಲ್ಲವೆಂದು ಹೇಳುತ್ತಾರೆ. ವಿಜಯನಗರ ಎಲ್ಲ ಆಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸರೋಜಿನಿ ಮಹಿಷಿ ವರದಿ ಜಾರಿಗೆ ಕೊಡುವಲ್ಲಿ ಬಹು ರಾಷ್ಟ್ರೀಯ ಕಂಪನಿಗೆ ಪರವಾಗಿ ಕೊಡಬೇಕಾದರೆ ಆ ನಿಯಮಾವಳಿಯನ್ನು ಅನುಸರಿಸಿ ಆ ತಾಂತ್ರಿಕ ಜ್ಞಾನ ವಿಚಾರ ಸರೋಜಿನಿ ಮಹಿಷಿ ವರದಿ ಜಾರಿಗೆ ತರುವ ಕೆಲಸಗಾರರಿಗೆ ಗೊತ್ತಿದ್ದರೆ ಅದು ಅನುಷ್ಠಾನಕ್ಕೆ ಬರುತ್ತದೆ. ಅವರಿಗೆ ಸಂಬಂಧಪಟ್ಟ ತಾಂತ್ರಿಕ ಜ್ಞಾನ ಇಲ್ಲದಿದ್ದರೆ ಕರ್ನಾಟಕದ ಜನತೆಗೆ ಹೇಗೆ ಉದ್ಯೋಗ ಸಿಗುವುದಕ್ಕೆ ಸಾಧ್ಯ?

ಶ್ರೀ ಸಿದ್ಧರಾಮಯ್ಯ : ತಾಂತ್ರಿಕ ಜ್ಞಾನ ಉಳ್ಳವರು ಇಲ್ಲಿದ್ದರೆ ಕರ್ನಾಟಕದಲ್ಲಿದ್ದರೆ ಅವರಿಗೆ ಪ್ರಥಮ ಆದ್ಯತೆ ಕೊಡಬೇಕೆಂದು ಸೂಚಿಸಿದ್ದೇವೆ. ಒಂದು ವೇಳೆ ತಾಂತ್ರಿಕ ಜ್ಞಾನ ಇಲ್ಲದಿದ್ದರೆ ಅವರನ್ನು ತೆಗೆದುಕೊಂಡು ತರಬೇತಿ ಕೊಟ್ಟು ತಾಂತ್ರಿಕ ಜ್ಞಾನ ಕೊಡಬೇಕೆಂಬುದನ್ನು ನಾವು ಮಾಡಿದ್ದೇವೆ.

ಅಧ್ಯಕ್ಷರು : ಅವಾಸ್ತವ.

ಶ್ರೀ ಸಿದ್ಧರಾಮಯ್ಯ : ಇದು ವಾಸ್ತವ ಸಂಗತಿ. ಹೈಟೆಕ್ ಜ್ಞಾನ ಇರತಕ್ಕವರು ಅಲ್ಲಿ ನಾನು ಹೇಳಿದ್ದು. ಐಟಿಐ ಮಾಡಿರತಕ್ಕ ಹುಡುಗರು ಇರುತ್ತಾರೆ, ಅವರನ್ನು ತೆಗೆದುಕೊಂಡು ಅಲ್ಲಿಗೆ ಬೇಕಾದ ತಂತ್ರಜ್ಞಾನ ಇಲ್ಲವೆಂದರೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಬೇರೆ ಯಾವುದೇ ಊರಿನಿಂದ ಕರೆದುಕೊಂಡು ಬನ್ನಿ ಎಂದು ಅಲ್ಲ, ನಮ್ಮಲ್ಲಿರತಕ್ಕ ಐಟಿಐ ಹುಡುಗರಿಗೆ ತರಬೇತಿ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ನಾವು ಸ್ಪಷ್ಟವಾಗಿ

ತಿಳಿಸಿದ್ದೇವೆ. ಆದುದರಿಂದ ಇದರ ಬಗ್ಗೆ ಯಾವುದೇ ರಾಜಿ ಇಲ್ಲವೆಂದು ಮಾನ್ಯ ಪುಟ್ಟಣ್ಣಯ್ಯನವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇವೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ಅದೇ ಹಿನ್ನೆಲೆಯಲ್ಲಿ ಬಂದಿರುವುದರಿಂದ ಕನ್ನಡ ಚಿತ್ರಗಳಿಗೆ ಪೂರ್ಣವಾಗಿ ವಿನಾಯಿತಿ ಮಾಡಿದ್ದೇವೆ. ನಾನು ಹಣಕಾಸಿನ ಮಂತ್ರಿಯಾದಾಗಿನಿಂದ ನೋಡುತ್ತಿದ್ದೇನೆ. ಬಹಳ ದಿನಗಳಿಂದ ಕನ್ನಡ ಚಿತ್ರ ತಯಾರಕರು ಹೇಗಾದರೂ ಮಾಡಿ ನಮ್ಮ ಪಿಕ್ಚರ್‌ಗೆ ಕನ್‌ಸೆಷನ್ ಕೊಡಿ 100 ಪರ್ಸೆಂಟ್ ಟ್ಯಾಕ್ಸ್ ಫ್ರೀ ಮಾಡಿ ಎಂದು ಬರೀ ಒತ್ತಾಯ. ಒಂದು ವರ್ಷಕ್ಕೆ 70 ಚಿತ್ರಗಳು ತಯಾರಿಸಿದರೆ 150 ಪರ್ಸೆಂಟ್ ತೆರಿಗೆ ವಿನಾಯಿತಿ ಈಗಾಗಲೇ ಇತ್ತು. ಇನ್ನೂ 50 ಪರ್ಸೆಂಟ್ ಪೂರ್ಣ ವಿನಾಯಿತಿ ಕೊಡಿ ನಮ್ಮದು ಎಜುಕೇಷನ್ ಫಿಲಂ ಎಂದು ಒತ್ತಾಯ ಮಾಡುತ್ತಿದ್ದರು.

ಅಧ್ಯಕ್ಷರು : ಫಿಲಂಗಳಿಗೆ ಹೆಸರು ಬಹಳ ಚೆನ್ನಾಗಿ ಇಡುತ್ತಾರೆ, ಎದ್ದವನು ಬಿದ್ದ, ಬಿದ್ದವನು ಎದ್ದ. ಅದಕ್ಕೆ ಪೂರ್ಣ ವಿನಾಯಿತಿ.

ಶ್ರೀ ಜೆ.ಬಿ. ಶಿವಕುಮಾರ್ : ತರಲೆ ನನ್ಮಗ, ರಾಜ್ಯ ಎಂ.ಎಲ್.ಎ. ಇತ್ಯಾದಿ.

ಶ್ರೀ ಸಿದ್ಧರಾಮಯ್ಯ : ಎಲ್ಲಿ ಹಿಂಸೆ ಇದೆ, ಕ್ರೌರ್ಯ ಇದೆ, ಅಶ್ಲೀಲ ಇದೆ ಇಂಥ ಚಿತ್ರಗಳಿಗೆ ನಾವು ಅವುಗಳನ್ನು ನೋಡಿ ಪರಿಶೀಲಿಸಿ ಸಬ್ಸಿಡಿ ಕೊಡುತ್ತಿದ್ದೇವೆ, ತೆರಿಗೆ ವಿನಾಯಿತಿ ಮಾಡುತ್ತೇವೆ. ಗುಣಮಟ್ಟ ನೋಡುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ.

ಅಧ್ಯಕ್ಷರು : ಅದನ್ನು ಹೇಗೆ ನಿರ್ಣಯಮಾಡುತ್ತೀರಿ?

ಶ್ರೀ ಸಿದ್ಧರಾಮಯ್ಯ : ಅದಕ್ಕೆ ಒಂದು ಸಮಿತಿ ರಚನೆ ಮಾಡುತ್ತಿದ್ದೇವೆಂದು ನಾವು ಬಜೆಟ್ ಭಾಷಣದಲ್ಲಿ ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಆ ಸಮಿತಿಯಿಂದ ಇವರು ಅಶ್ಲೀಲ ಯಾವುದು ಎಂದು ಗುಣಮಟ್ಟ ನಿರ್ಧಾರ ಮಾಡುವುದಕ್ಕಾಗುವುದಿಲ್ಲ. ಇದು ಸ್ಪಷ್ಟ.

ಅಧ್ಯಕ್ಷರು : ಅಶ್ಲೀಲ ಯಾವುದು ಎಂದು ಇತ್ಯರ್ಥ ಮಾಡುವುದಕ್ಕೆ ಇವರ ಸಹಾಯ ಪಡೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಕೈಯಲ್ಲಿಯೂ ಆಗುವುದಿಲ್ಲ. ತಾವು ಅಭಿಮಾನದಿಂದ ಥೇರ್ಮಸ್ ಮಾಡಬೇಕೆಂದು ಹೊರಟಿದ್ದರೂ ನನ್ನ ಕೈಯಲ್ಲಿಯೂ ಅದು ಆಗುವುದಿಲ್ಲ ಪರಿಸ್ಥಿತಿ ಹೀಗಿದೆ. ಮಾನ್ಯ ಸಿದ್ಧರಾಮಯ್ಯನವರು ನೂರಕ್ಕೆ ನೂರು ತೆರಿಗೆಯನ್ನು ತೆಗೆದದ್ದು ಸಂತೋಷ. ಎಲ್ಲಾ ಕಡೆ ಅದಕ್ಕೆ ಸ್ವಾಗತ ದೊರೆತಿದೆ. ಆದರೆ, ಗುಣಮಟ್ಟವಿರುವ ಚಿತ್ರಗಳಿಗೆ ಮಾತ್ರ ಸಹಾಯ ಧನ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ತಮಗೆ ಹೇಳುವುದಾದರೆ, ಮೊನ್ನೆ 'ಗಾನಯೋಗಿ ಪಂಚಾಕ್ಷರಿ ಗವಾಯಿ' ಎಂಬ ಚಿತ್ರ ಬಿಡುಗಡೆಯಾಯಿತು. ಇದು ಅತ್ಯಂತ ಮೇಲು ಕೃತಿ, ಈ ಚಿತ್ರವನ್ನು ಜನರು ನೋಡಲಿಲ್ಲ. ಚಿತ್ರ ನಿರ್ಮಿಸಿರುವವರಿಗೆ

ಸಹಕಾರ ನೀಡುವವರು ಯಾರು? ಅವರಿಗೆ ಸಹಾಯಧನವೊಂದೇ ಆಧಾರ. ಇಂತಹ ನೂರೂರು ಒಳ್ಳೆಯ ಚಿತ್ರಗಳು ಕನ್ನಡದಲ್ಲಿ ಬರುತ್ತವೆ. ಒಳ್ಳೆಯ ಚಿತ್ರಗಳನ್ನು ನಿರ್ಮಿಸುವವರಿಗೆ ಮತ್ತು ಕನ್ನಡ ಚಿತ್ರರಂಗ ಉಳಿಯುವುದಕ್ಕೆ ಸಹಾಯಧನ ಎನ್ನುವುದು ಒಂದು ಬುನಾದಿಯಿದ್ದಂತೆ. ಸಹಾಯಧನ ಕೊಡುವುದು ಸರ್ಕಾರದ ಕೃಪೆಯಲ್ಲ. ಅವರಿಂದಲೇ ವಸೂಲು ಮಾಡಿ ಅವರಿಗೆ ಸಹಾಯಧನದ ರೂಪದಲ್ಲಿ ಕೊಡತಕ್ಕಂಥಾದ್ದು, ಇದೇನೂ ಹೊಸದಾಗಿ ಸೃಷ್ಟಿ ಮಾಡಿ ಸಹಾಯಧನ ಕೊಡತಕ್ಕಂಥಾದ್ದಲ್ಲ. ಆದುದರಿಂದ, ನಾನು ಇನ್ನೂ ಸಹ ಹೇಳುತ್ತಿದ್ದೇನೆ. ಈ ಸಹಾಯಧನ ಕೈಬಿಟ್ಟಿರುವುದರಿಂದ ಕನ್ನಡ ಚಿತ್ರರಂಗ ಸಂಪೂರ್ಣವಾಗಿ ನೆಲಕಚ್ಚುತ್ತದೆ. ಇದನ್ನು ತಾವು ಗಮನಿಸಬೇಕು.

ಶ್ರೀ ಸಿದ್ಧರಾಮಯ್ಯ:- ಸರ್ಕಾರ ಕೈಗೊಂಡಿರುವ ಕ್ರಮವನ್ನು ಕನ್ನಡ ಚಿತ್ರರಂಗದ ಉದ್ಯಮದಲ್ಲಿರುವವರು ಬಹಳ ವ್ಯಾಪಕವಾಗಿ ಸ್ವಾಗತಿಸಿದ್ದಾರೆ. ಅವರೆಲ್ಲರೂ ನನ್ನ ಹತ್ತಿರ ಬಂದಿದ್ದರು. ನಿಮ್ಮ ಜೊತೆಯೂ ಅವರು ಮಾತನಾಡಿರಬೇಕೆಂದು ಕಾಣುತ್ತದೆ. ಆದುದರಿಂದ, ನಾನು ಏಕೆ ಹೇಳುತ್ತಿದ್ದೇನೆಂದರೆ, ಬೇರೆ ಚಿತ್ರಗಳ ಜೊತೆ ಪೈಪೋಟಿ ಮತ್ತು ಕನ್ನಡ ಚಿತ್ರಗಳನ್ನು ಪ್ರದರ್ಶಿಸಲು ಸಿನಿಮಾ ಮಂದಿರಗಳಲ್ಲಿ ಅವಕಾಶ ಸಿಗುವುದಿಲ್ಲವೆಂಬ ಗೊಂದಲ ಮತ್ತು ಇನ್ನಿತರ ಹಲವಾರು ಕಾರಣಗಳಿಂದ ಉತ್ತಮ ಗುಣಮಟ್ಟದ ಚಿತ್ರಗಳು ಜನರಿಗೆ ದೊರಕಬೇಕೆನ್ನುವ, ಮನರಂಜನೆ ನೀಡುವ ಜೊತೆಗೆ ನೀತಿ ಬೋಧನೆ ಮಾಡತಕ್ಕಂಥ ಸ್ವಲ್ಪ ಎಜುಕೇಟಿವ್ ಆಗಿರುವ ಚಿತ್ರಗಳನ್ನು ಆಯ್ಕೆ ಮಾಡುವುದಕ್ಕೆ ಸಮಿತಿಯನ್ನು ರಚಿಸಿದ್ದೇವೆಯೇ ವಿನಹ ಬೇರೆ ಯಾವ ಉದ್ದೇಶದಿಂದಲ್ಲ. ಏಕೆಂದರೆ, ಇವೊತ್ತು ಅಶ್ಲೀಲ, ಕ್ರೌರ್ಯ, ದ್ವಂದ್ವಾರ್ಥದ ಸಂಭಾಷಣೆಗಳು ಯುವಕರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಾದ್ದರಿಂದ ಇದು ತಪ್ಪಬೇಕೆಂಬ ಉದ್ದೇಶದಿಂದ ಈ ರೀತಿಯ ಕ್ರಮ ತೆಗೆದುಕೊಂಡಿದ್ದೇವೆ. ಇದಕ್ಕೆ ವ್ಯಾಪಕವಾದ ಸ್ವಾಗತ ಸಿಕ್ಕಿದೆ. ನನ್ನ ಪ್ರಕಾರ ಇದರಿಂದ ಕನ್ನಡ ಚಿತ್ರೋದ್ಯಮ ಬೆಳೆಯುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಚಿತ್ರೋದ್ಯಮದವರು ನನ್ನ ಬಳಿ ಬಂದಿದ್ದಾಗ "ನಾವು ಯಾವ ಕಾಲಕ್ಕೂ ಯಾವುದೇ ವಿನಾಯಿತಿ ಕೇಳದಂತೆ ನಿಮ್ಮ ಸರ್ಕಾರ ಮಾಡಿದೆ ಎಂದು ಹೇಳಿದರು. ಆಗ ನಾನು ಹೇಳಿದೆ: ಇನ್ನು ಮೇಲಾದರೂ ಉತ್ತಮ ಗುಣಮಟ್ಟದ ಕನ್ನಡ ಚಿತ್ರಗಳನ್ನು ತೆಗೆಯುವುದಕ್ಕೆ ಪ್ರಯತ್ನಿಸಿ, ಇದಕ್ಕಾಗಿ ನಾವು ಪೂರ್ಣ ತೆರಿಗೆ ವಿನಾಯಿತಿ ಕೊಟ್ಟಿದ್ದೇವೆ ಎಂದು. ಇದರಿಂದ ಬಹಳಷ್ಟು ಅನುಕೂಲವಾಗುತ್ತದಲ್ಲದೆ, ಪ್ರೇಕ್ಷಕರಿಗೂ ಕೂಡ ಅನೂಕೂಲವಾಗುತ್ತದೆ. ಅದೇನೇ ಇರಲಿ, ಇದರ ಆಗು-ಹೋಗುಗಳ ಬಗ್ಗೆ ಇನ್ನೊಂದು ದಿವಸ ಚರ್ಚಿಸೋಣ. ಇನ್ನು ಈ ವರ್ಷ ಹಾಗೂ ಕಳೆದ ವರ್ಷ ಶಿಕ್ಷಣ ರಂಗದಲ್ಲಿನ ಪ್ರಾಥಮಿಕ ಶಿಕ್ಷಣದ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಹೇಳಿದ್ದೇವೋ, ಅವೆಲ್ಲವನ್ನೂ ಕೂಡ ಈಡೇರಿಸತಕ್ಕ ಪ್ರಯತ್ನ ಮಾಡಿದ್ದೇವೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಸುಮಾರು 159 ಹಾಸ್ಟೆಲ್‌ಗಳನ್ನು ಕಟ್ಟುತ್ತೇವೆಂದು ಹೇಳಿದ್ದು, ಈಗಾಗಲೇ ನೂರು ಹಾಸ್ಟೆಲ್‌ಗಳನ್ನು ನಿರ್ಮಿಸಿದ್ದು,

ಇನ್ನೂ 59 ಹಾಸ್ಟೆಲ್‌ಗಳ ನಿರ್ಮಾಣ ವಿವಿಧ ಹಂತಗಳಲ್ಲಿವೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಈಗ ಸದನದಲ್ಲಿಲ್ಲ. ಅವರು ಮಾತನಾಡುತ್ತಾ ತಾವು ಅಧಿಕಾರದಲ್ಲಿದ್ದಂಥ ಕಾಲದಲ್ಲಿ ವಿಶೇಷ ಘಟಕ ಯೋಜನೆ (ಎಸ್‌ಸಿಪಿ)ಯಡಿ ಕೊಟ್ಟಿದಂಥ ಎಲ್ಲಾ ಹಣವನ್ನು ಪೂಲ್ ಮಾಡಿದ್ದೇವೆ ಹೇಳಿದರು. ಈ ಕುರಿತು ಹೇಳುವುದಾದರೆ ಪ್ರಸಕ್ತ ವರ್ಷದಲ್ಲಿ 1996-97ನೇ ಸಾಲಿಗೆ ಸುಮಾರು ನೂರು ಕೋಟಿ ರೂಪಾಯಿಗಳನ್ನು ಪೂಲ್ ಮಾಡಿ ನೀರಾವರಿ, ವಸತಿ, ಹಾಸ್ಟೆಲ್ ಮತ್ತು ಶಿಕ್ಷಣಕ್ಕಾಗಿ ಕೊಟ್ಟಿದ್ದೇವೆ. ಅಲ್ಲದೆ, ವಸತಿ ಶಾಲೆಗಳನ್ನು ತೆರೆಯುತ್ತಿದ್ದು, ಹಿಂದುಳಿದವರಿಗಾಗಿ ಪ್ರತ್ಯೇಕವಾಗಿ 14 ಹಾಗೂ 34 ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕವಾಗಿ ವಸತಿ ಶಾಲೆಗಳನ್ನು ಕೊಡುತ್ತಿದ್ದೇವೆ. ಏಕೆಂದರೆ, ಬಡವರ ಮಕ್ಕಳು, ನಿರ್ಗತಿಕರ ಮಕ್ಕಳಿಗೂ ಕೂಡ ವಿದ್ಯಾಭ್ಯಾಸ ಕೊಡಬೇಕೆಂಬುದು ಇದರ ಹಿಂದಿರುವ ಉದ್ದೇಶ ಹಾಗಿಯೇ ಗಂಗಕಲ್ಯಾಣ. ಯೋಜನೆಗೂ ಸುಮಾರು 25 ಕೋಟಿ ರೂಪಾಯಿಗಳಷ್ಟು ಎಸ್.ಸಿ.ಪಿ. ಹಣವನ್ನು ಮುಂದೆಯೂ ಪೂಲಮಾಡಿ ಒಟ್ಟುಗೂಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಆದುದರಿಂದ, ಬಡವರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಮುಂದುವರೆಸುವುದಕ್ಕೆ ಹೆಚ್ಚು ಹಣ ಖರ್ಚು ಮಾಡುವುದಲ್ಲದೆ, ಪ್ರಾಥಮಿಕ ಶಿಕ್ಷಣಕ್ಕೂ ಹೆಚ್ಚು ಹಣ ಖರ್ಚು ಮಾಡಲು ಪ್ರಯತ್ನಿಸುತ್ತಿದ್ದೇವೆ. ಪ್ರಾಥಮಿಕ ಶಿಕ್ಷಣಕ್ಕೆ ಪ್ರಸಕ್ತ ವರ್ಷ ಹಾಗೂ ಕಳೆದ ವರ್ಷ ಎಷ್ಟು ಶೇಕಡಾವಾರು ಹಣ ಖರ್ಚು ಮಾಡಿದ್ದೇವೆ. ಅದೇ ರೀತಿ ನೀರಾವರಿಗೆ ಎಷ್ಟು ಶೇಕಡಾವಾರು ಖರ್ಚು ಮಾಡಿದ್ದೇವೆ, ಹಾಗೆಯೇ ಜಿಲ್ಲಾ ಯೋಜನೆಯಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೇವೆಂಬುದನ್ನು ನಾನು ಆಯ-ವ್ಯಯ ಪತ್ರದಲ್ಲೇ ಸ್ಪಷ್ಟಪಡಿಸಿದ್ದೇನೆ. ಯಾವ ಕ್ಷೇತ್ರದಲ್ಲಿ ಜನರ ಬೆಳವಣಿಗೆ ಮತ್ತು ಬಡವರ ಕಲ್ಯಾಣ ಆಗಬೇಕಾಗುತ್ತದೋ ಆ ಕ್ಷೇತ್ರದಲ್ಲಿ ನಾವು ಹಿಂದೆ ಬಿದ್ದಿಲ್ಲ. ಅದರ ಜೊತೆಗೆ ನಾನು ಕಳೆದ ಸಾರಿ ಹೇಳಿದ್ದೆ ಮಾನ್ಯ ಸದಸ್ಯರಾದ ಎ.ಟಿ.ರಾಮಸ್ವಾಮಿಯವರು ಮಾತನಾಡುತ್ತಾ, ನಿಮ್ಮ 'ಆಧಾರ' ಹಾಗೂ 'ಸ್ವಶಕ್ತಿ' ಯೋಜನೆ ಏನಾಯಿತು ಎಂದರು. 'ಆಧಾರ' ಯೋಜನೆ ಬಗ್ಗೆ ಹೇಳುವುದಾದರೆ, ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲೂ ಯಾರು ಅಂಗವಿಕಲರಿದ್ದಾರೆ, ಪ್ರತಿ ಜಿಲ್ಲೆಯಲ್ಲೂ ಅಂಥ ನೂರು ಜನರನ್ನು ಗುರ್ತಿಸಿ ಸಹಾಯ ಮಾಡಲು ಇಟ್ಟಂಥ ಒಂದು ಕೋಟಿ ರೂಪಾಯಿಯನ್ನು ಖರ್ಚು ಮಾಡಲಾಗಿದೆ. 'ಸ್ವಶಕ್ತಿ' ಯೋಜನೆ ನಿಶ್ಯಕ್ತ ಮಹಿಳೆಯರಿಗಾಗಿದ್ದು, ಅವರು ಸ್ವಾವಲಂಬಿಯಾಗ ಬೇಕೆಂಬ ಕಾರಣದಿಂದ ಸದರಿ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥ ಕೆಲಸಮಾಡಿದ್ದೇವೆ. ಇಷ್ಟೇ ಅಲ್ಲದೆ, 'ಪ್ರಸಕ್ತ ವರ್ಷ ಘೋಷಿಸಲಾಗಿರುವ 'ನಮ್ಮ ಮಗಳು ನಮ್ಮ ಶಕ್ತಿ' ಯೋಜನೆಯಡಿ ಮೂರು ಕೋಟಿ ಚಿಲ್ಲರೆಯಷ್ಟು ಹಣ ಒದಗಿಸಿದ್ದೇವೆ. ಸದರಿ ಯೋಜನೆಯಡಿ 2 ಸಾವಿರ, ಇಲ್ಲವೇ ಮೂರು ಸಾವಿರ ರೂಪಾಯಿಗಳನ್ನಿಟ್ಟು, ಮಗಳು ಬೆಳೆದು 21ನೇ ವಯಸ್ಸಿಗೆ ಬರುವ ಹೊತ್ತಿಗೆ ಎಷ್ಟಾಗುತ್ತದೆಂಬುದನ್ನು ವರ್ಕ್‌ಔಟ್ ಮಾಡಿ ತಿಳಿಸಬೇಕೆಂದು ಇಲಾಖಾಧಿಕಾರಿಗಳಿಗೆ ಹೇಳಿದ್ದೇನೆ. ಹರಿಯಾಣ ರಾಜ್ಯದಲ್ಲಿ ಈ ಕಾರ್ಯಕ್ರಮ ಜಾರಿಯಿದ್ದು ಅಲ್ಲಿ ಇದನ್ನು 'ಹಮಾರಾ ಭೇಟಿ ಹಮಾರಾ...' ಎಂದು ಏನೋ ಯೋಜನೆಯಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿನ್ನೆ ಸದಸ್ಯರಾದ ರಾಜಣ್ಣನವರು ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದರು. ಏನೆಂದರೆ, ನಿಮ್ಮ ಮಗಳು ನಮ್ಮ ಶಕ್ತಿ' ಎಂದು.

ಶ್ರೀ ಸಿದ್ಧರಾಮಯ್ಯ : ಸದರಿ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿರುವ ಬಗ್ಗೆ ಬಹಳ ಚೆನ್ನಾಗಿ ರಾಜಣ್ಣನವರು ಹೇಳಿದರು. ನಾನು ಅವರ ಭಾಷೆ, ಶೈಲಿಯಲ್ಲಿ ಹೇಳುವುದಕ್ಕಾಗುವುದಿಲ್ಲ. ಅವರು ಮಾತನಾಡುತ್ತಾ ಎಲ್ಲರನ್ನೂ ನಗಿಸಿದರು. ಬಡತನದಲ್ಲಿರುವ ಹೆಣ್ಣುಮಕ್ಕಳು ಇವೊತ್ತಿನ ಪರಿಸ್ಥಿತಿಯಲ್ಲಿ ಸ್ವಾವಲಂಬಿಯಾಗಿರಬೇಕು, ಸ್ವಂತ ಕಾಲ ಮೇಲೆ ನಿಲ್ಲಬೇಕೆಂಬ ಕಾರಣದಿಂದ ಮತ್ತು ನಾಳೆ ಮದುವೆಯಾಗತಕ್ಕಂಥವರನ್ನು ಇವೊತ್ತು ಗೌರವದಿಂದ ಕಾಣಬೇಕೆನ್ನುವ ಕಾರಣಕ್ಕೋಸ್ಕರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಸದರಿ ಕಾರ್ಯಕ್ರಮದಡಿ ಎಷ್ಟು ಹಣವನ್ನು ನಿಗದಿಪಡಿಸಿ ಇಡಬೇಕು, ಏನು ಮಾಡಬೇಕೆಂಬುದರ ಬಗ್ಗೆ ನಾನು ಮಾನ್ಯ ಸದಸ್ಯರುಗಳಿಗೆ ತಿಳಿಸುತ್ತೇನೆನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ರಾಜ್ಯದಲ್ಲಿರುವ ಎಲ್ಲಾ ಲಾರಿ ಡ್ರೈವರ್‌ಗಳು, ಟೆಂಪೋ ಡ್ರೈವರ್‌ಗಳು, ಆಟೋರಿಕ್ಷಾ ಡ್ರೈವರ್‌ಗಳು ಕ್ಲೀನರ್‌ಗಳು ಆಕಸ್ಮಿಕವಾಗಿ ಮರಣ ಹೊಂದಿದಲ್ಲಿ ಅವರಿಗೆ ಪರಿಹಾರವಾಗಿ ಐವತ್ತು ಸಾವಿರ ರೂಪಾಯಿಗಳನ್ನು ಕೊಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದಕ್ಕಾಗಿ ಸ್ಥಾಪಿಸಲಾಗಿರುವ ನಿಧಿಯಿಂದ ಪರಿಹಾರವಾಗಿ ಹಣ ಕೊಡಲಾಗುವುದೆಂದು ಈಗಾಗಲೇ ನಮ್ಮ ಮುಖ್ಯಮಂತ್ರಿಗಳೂ ಸಹ ಪ್ರಕಟಿಸಿದ್ದಾರೆ. ಮತ್ತು ರೈತರು ಮಾರುಕಟ್ಟೆ ಪ್ರದೇಶದಲ್ಲಿ ಆಹಾರ ಪದಾರ್ಥಗಳನ್ನು ಕೊಂಡುಕೊಂಡು ಬರುತ್ತಿರುವಾಗ ಅಪಘಾತಕ್ಕೀಡಾದರೆ, ಸಾವು-ನೋವುಗಳುಂಟಾದರೆ ಪರಿಹಾರ ಕೊಡುವುದಕ್ಕೆ ಅವರನ್ನೂ ಕೂಡ ಸದರಿ ಕಾರ್ಯಕ್ರಮದಡಿ ಸೇರಿಸಬೇಕೆಂದು ತೀರ್ಮಾನಿಸಿದ್ದೇವೆ. ಅದೇ ರೀತಿ ಮುಂದಿನ ವರ್ಷ ಇನ್ನೂರು ಹೊಸ ಪ್ರೌಢಶಾಲೆಗಳನ್ನು, ಐವತ್ತು ಜ್ಯೂನಿಯರ್ ಕಾಲೇಜುಗಳನ್ನು ತೆರೆಯುವುದರ ಮತ್ತು ಐ.ಟಿ.ಐ.ಗಳನ್ನು ನವೀಕರಣಗೊಳಿಸುವಂಥ ಕೆಲಸ ಹೀಗೆ ಯಾವ್ಯಾವುದು ಮಾಡಲಿಕ್ಕೆ ಸಾಧ್ಯವೋ ಅವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ 'ನೀವು ರೂಮುಗಳನ್ನು ಕಟ್ಟಿಸುತ್ತೇವೆಂದು ಹೇಳಿದಿರಿ, ಕಟ್ಟಿಸಿದ್ರಾ?' ಎಂದು ಕೇಳಿರುವುದಕ್ಕೆ ಕಟ್ಟಿಸಿದ್ದೇವೆಂದು ಉತ್ತರಿಸುತ್ತಾ ಹನ್ನೆರಡು ಸಾವಿರ ರೂಮುಗಳನ್ನು ಈಗಾಗಲೇ ಕಟ್ಟಿಸಿದ್ದು, ಮುಂದಿನ ವರ್ಷ ಹತ್ತು ಸಾವಿರ ರೂಮುಗಳನ್ನು ಕಟ್ಟಿಸುತ್ತೇವೆ ಹಾಗೆಯೇ ಹತ್ತೊಂಬತ್ತು ಸಾವಿರ ಶಿಕ್ಷಕರನ್ನು ನೇಮಿಸುತ್ತೇವೆಂದು ಹೇಳಿದ್ದು ಈಗಾಗಲೇ ಒಂಬತ್ತೂವರೆ ಶಿಕ್ಷಕರುಗಳನ್ನು ನೇಮಕಗೊಳಿಸಿದ್ದು ಇನ್ನೂ ಒಂಭತ್ತೂವರೆ ಸಾವಿರ ಶಿಕ್ಷಕರುಗಳನ್ನು ನೇಮಿಸುತ್ತಿದ್ದೇವೆ. ಅಲ್ಲದೆ, ಸುಮಾರು ಐವತ್ತು ಸಾವಿರ ಜನರಿಗೆ ಉದ್ಯೋಗ ಕೊಡತಕ್ಕಂಥ ಕಾರ್ಯಕ್ರಮ ಈಗಾಗಲೇ ಬೇರೆ ಬೇರೆ ಹಂತಗಳಲ್ಲಿದೆ. ಪೊಲೀಸ್, ಕಂದಾಯ, ಆರೋಗ್ಯ, ಪಶುಸಂಗೋಪನಾ, ಶಿಕ್ಷಣ ಮುಂತಾದ ಎಲ್ಲಾ ಇಲಾಖೆಗಳಲ್ಲಿ ಹುದ್ದೆಗಳನ್ನು ತುಂಬುವುದಕ್ಕೆ ನೇಮಕಾತಿ ನಿಯಮಗಳಲ್ಲಿನ ನಿರ್ಬಂಧವನ್ನು ಸಡಿಲಿಸಿ ಇಲ್ಲವೇ ತೆಗೆದುಹಾಕಿ ಐವತ್ತು ಸಾವಿರ ಯುವಕರಿಗೆ ಕೆಲಸ ಕೊಟ್ಟರೆ ಅದು ಪ್ರಗತಿಯಲ್ಲವೇ?

ಸಾಧನೆಯಲ್ಲವೇ? ಆದುದರಿಂದ, ಇದನ್ನೆಲ್ಲಾ ಈ ವರ್ಷ ಮಾಡಿದ್ದೇವೆ. ಮುಂದಿನ ವರ್ಷವೂ ಕೂಡ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹತ್ತೊಂಭತ್ತು ಸಾವಿರದಷ್ಟು ಉಪಾಧ್ಯಾಯರುಗಳನ್ನು ನೇಮಿಸುತ್ತೇವೆಂಬ ಮಾತನ್ನು ಹೇಳಿದ್ದೇವೆ. ಏಕೆಂದರೆ, ಪ್ರಾಥಮಿಕ ಶಿಕ್ಷಣ ಪ್ರತಿಯೊಬ್ಬರಿಗೂ ತಲುಪಬೇಕು ಎನ್ನತಕ್ಕಂಥಾದ್ದು. ಇಷ್ಟು ವರ್ಷಗಳಾದರೂ ಕೂಡ ಇನ್ನು ನೂರಕ್ಕೆ ಸುಮಾರು ಐವತ್ತಕ್ಕಿಂತ ಹೆಚ್ಚು ಜನರು ಹೆಬ್ಬೆಟ್ಟನ್ನು ಒತ್ತತಕ್ಕಂಥ ಪರಿಸ್ಥಿತಿಯಲ್ಲಿರುವುದರಿಂದ ಇದಕ್ಕೆ ಯಾರು ಹೊಣೆ ಎಂದು ನಾನು ಹೇಳುವುದಿಲ್ಲ. ಸ್ವಾತಂತ್ರ್ಯ ಬಂದ ನಲವತ್ತೆಂಟು ವರ್ಷಗಳಲ್ಲಿ ಇದಕ್ಕೆ ಎಲ್ಲರೂ ಹೊಣೆ.

11.00 ಎ.ಎಂ.

ಇವತ್ತು ಪವರ್ ಶಾರ್ಟೇಜ್ ಬಂದಿದ್ದರೆ ಅದಕ್ಕೆ ಎಲ್ಲರೂ ಹೊಣೆ. ಹೀಗೆ ಈ ಎಲ್ಲಾ ಸಮಸ್ಯೆಗಳನ್ನು ಹುಟ್ಟಿಹಾಕಿಕೊಂಡು ಇವತ್ತು ನಾವು ಬಂದಾಗ ದೊಡ್ಡ ಭಾರವಾಗಿವೆ, ಜಾಸ್ತಿಯಾಗಿದೆ ಎಂದು ನೀವು ಏನೇನು ಹೇಳಿದ್ದೀರಿ ಅದನ್ನೆಲ್ಲ ಮಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಯುವಕರಿಗೆಲ್ಲ ಸುಮಾರು ಏಳೂವರೆ ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟು ಅವರಿಗೆ ಸ್ವಯಂ ಉದ್ಯೋಗ ಮಾಡಲು ಸಾಲವನ್ನು ಐಆರ್ ಡಿಪಿ ಸಾಲವನ್ನು ಕೊಡಿಸುವ ಬಗ್ಗೆ ಮಾನ್ಯ ಶ್ರೀ ರಾಮರೆಡ್ಡಿಯವರು ಅದರ ಪುನರ್ ಪರಿಶೀಲನೆಯಾಗಬೇಕೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇವತ್ತು ಇಂತಹ ಅನೇಕ ಆರ್ಥಿಕವಾದ ಕಾರ್ಯಕ್ರಮಗಳು ಜನರಿಗೆ ತಲುಪದೇ ಇದ್ದಾಗ, ಮತ್ತೆ ಜನಪ್ರತಿನಿಧಿಗಳಿಗೂ ಕೂಡ ಇದರಲ್ಲಿ ಹೆಚ್ಚು ಜವಾಬ್ದಾರಿಯನ್ನು ತೆಗೆಯ ಬೇಕಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಬ್ಯಾಂಕುಗಳಲ್ಲಿ ಸರಿಯಾಗಿ ಸಾಲ ಕೊಡುವುದಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ಕಾಣುತ್ತದೆ. ಅಥವಾ ಬೇರೆ ಯಾರೋ ಸದಸ್ಯರು ಹೇಳಿದರು. ಬ್ಯಾಂಕುಗಳಲ್ಲಿ ಸರಿಯಾಗಿ ಸಾಲ ಕೊಡುವುದಿಲ್ಲ, ತಿರುಗಿಸಿ ತಿರುಗಿಸಿ ಬಹಳ ಸಾಕು ಮಾಡುತ್ತಾರೆನ್ನುವ ಮಾತನ್ನು ಕೂಡ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅರ್ಥಸಚಿವರು ಯುವಕರ ಬಗ್ಗೆ ಮತ್ತು ಐಆರ್‌ಡಿಪಿ ಸಾಲದ ಬಗ್ಗೆ ಮಾತನಾಡುತ್ತಾ ಇದ್ದೀರಿ. ಈ ಸಂದರ್ಭದಲ್ಲಿ ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದನ್ನು ಪರಿಶೀಲನೆ ಮಾಡಿ ಅದು ಈಗಲೇ ಆಗಬೇಕೆಂದು ನಾನು ಹೇಳುವುದಿಲ್ಲ. ಇವತ್ತು ಇಂಜಿನಿಯರಿಂಗ್ ಗ್ರಾಜುಯೇಟ್ಸ್ ಮತ್ತು ಡಿಪ್ಲೊಮೊ ಮಾಡಿದವರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಇವತ್ತು ನಾವು ಅವರಿಗೆ ನೌಕರಿಯನ್ನಂತೂ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಆ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ಲೋಕೋಪಯೋಗಿ ಇಲಾಖೆಯಲ್ಲಿ, ನೀರಾವರಿ ಇಲಾಖೆಯಲ್ಲಿ, ಜಿಲ್ಲಾಪಂಚಾಯಿತಿಯಲ್ಲಿ ಕಾಮಗಾರಿಗೆ ಆದ್ಯತೆಯನ್ನು 5 ಲಕ್ಷ ರೂಪಾಯಿಗಳವರೆಗೂ ಕೆಲಸ ಮಾಡಬಹುದು. ಸರ್ಕಾರದವರು ನಾವು ಅವರಿಗೆ 50 ಸಾವಿರ ರೂಪಾಯಿ ಅಡ್ವಾನ್ಸ್ ಕೊಡುತ್ತೇವೆಂದರೆ ಅವರು ಉತ್ತಮವಾದ ಕೆಲಸವನ್ನು

ಮಾಡುತ್ತಾರೆ. ನಾವೇ ಅವನಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಶಿಕ್ಷಣವನ್ನು ಏನು ಕೊಟ್ಟಿದ್ದೇವೆ ಅದನ್ನು ಸದುಪಯೋಗ ಮಾಡಿಕೊಂಡ ಹಾಗೆ ಆಗುತ್ತದೆ. ಅದರ ಬಗ್ಗೆ ಏನಾದರೂ ಹೊಸ ಚಿಂತನೆ ಮಾಡಬೇಕು. ಕೆಲವು ರಾಜ್ಯಗಳಲ್ಲಿ ಮಾಡಿದ್ದಾರೆ. ಒಳ್ಳೆಯ ಅನುಭವಕ್ಕೆ ಬಂದಿದೆ. ಮಹಾರಾಷ್ಟ್ರದಲ್ಲಿ ನಾವು ಹೋದಾಗ ಅದನ್ನು ಸ್ಟಡಿ ಮಾಡುವಂತಹ ಪ್ರಯತ್ನ ಮಾಡಿದ್ದೇವೆ. ನೀವು ಅದನ್ನು ಸ್ಟಡಿ ಮಾಡಿಯಾದರೂ ಅದನ್ನು ಇಂಟರಡ್ಯೂಸ್ ಮಾಡಿದರೆ, ಜಸ್ಟ್ ಅವನು ರಿಜಿಸ್ಟ್ರೇಷನ್ ಮಾಡಿಕೊಂಡು 5 ಲಕ್ಷದವರೆಗೂ ಕೆಲಸ ಮಾಡುವುದಕ್ಕೆ ಅವಕಾಶಕೊಟ್ಟು 50 ಸಾವಿರ ರೂಪಾಯಿ ಅಡ್ವಾನ್ಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಪೇಮೆಂಟ್ ಮಾಡುವ ಬಿಲ್‌ನಲ್ಲಿ ಅದನ್ನು ಕಟ್ ಮಾಡುವುದಕ್ಕೆ ಬರುತ್ತದೆ. ಆದುದರಿಂದ ಅದನ್ನು ಪರಿಶೀಲನೆ ಮಾಡಿಯೆಂದು ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರು ಹೇಳತಕ್ಕ ಸಲಹೆ ಬಹಳ ಚೆನ್ನಾಗಿದೆ. ಈಗಾಗಲೇ ಅದು ಇದೆ. ಅದು ಇನ್ನು ಕೂಡ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇಂಜಿನಿಯರ್ ಗ್ರಾಜುಯೇಟ್ಸ್‌ಗಳಿಗೆ ಈಗಾಗಲೇ ಇದೆ. ಅವರಿಗೆ ಮೂಲ ಬಂಡವಾಳ ಕೊಡತಕ್ಕದ್ದು ಇಎಂಡಿ ಡಿಪಾಸಿಟ್ ಇಡದೇ ಕೆಲಸ ಮಾಡತಕ್ಕದ್ದು ಈಗಾಗಲೇ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗೌರ್ನ್‌ಮೆಂಟ್ ಆರ್ಡರ್ ಇದೆ. ಆದರೆ ಏನಾಗಿದೆ ಅಂದರೆ, ಗ್ರಾಜುಯೇಟ್ಸ್ ಇಂಜಿನಿಯರ್‌ಗಳು ಟೇಬಲ್ ಟು ಟೇಬಲ್ ಹೋಗುವುದಿಲ್ಲ. ಆ ಜೂನಿಯರ್ ಇಂಜಿನಿಯರ್ ಹತ್ತಿರ ಹೋಗಲಿಕ್ಕೆ ಪಾಪ ಇವರು ನಾಚಿಕೊಳ್ಳುತ್ತಾರೆ. ಅದಕ್ಕೆ ಅವರು ಏನು ಮಾಡುತ್ತಾರೆಂದರೆ, ಈ ಇಂಜಿನಿಯರ್ಸ್ ಅನ್ ಎಜುಕೇಟೆಡ್ ಕಂಟ್ರಾಕ್ಟರ್ಸ್‌ಗೆ ಎನ್ಕರೇಜ್ ಮಾಡಿದಷ್ಟು ಎಜುಕೇಟೆಡ್ ಇಂಜಿನಿಯರ್‌ಗಳಿಗೆ ಮಾಡುವುದಿಲ್ಲ. ಏಕೆಂದರೆ, ಇವನು ಪರ್ಸೆಂಟೇಜ್ ಕೊಡುವುದಿಲ್ಲ. ಇವರಿಗೆಲ್ಲ ಗೊತ್ತಿರುತ್ತದೆ, ಅದಕ್ಕಾಗಿ ಇವರಿಗೆ ತೊಂದರೆಯಿರುತ್ತದೆ. ಅದಕ್ಕೆ ಇವರಿಗೆ ಬೇರೆ ಯಾವರೀತಿಯಿಂದಲಾದರೂ ಲ್ಯಾಂಡ್ ಆರ್ಮಿಯಲ್ಲಿ ತೆಗೆದುಕೊಂಡು ಅವರಿಗೆ ಕೊಡಿಸುತ್ತಿರೋ ಅಥವಾ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನಿಂದ ಕೊಡಿಸುತ್ತಿರೋ ಹೀಗೆ ಏನಾದರೂ ವ್ಯವಸ್ಥೆ ಮಾಡಿದರೆ ಸ್ವಲ್ಪ ಅವರಿಗೆ ಸಹಾಯವಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಯಡಿಯೂರಪ್ಪನವರು ಹೇಳಿರತಕ್ಕ ಸಲಹೆಗಳನ್ನು ಪರಿಶೀಲನೆ ಮಾಡಿ ಈಗಿರತಕ್ಕ ಗೌರ್ನ್‌ಮೆಂಟ್ ಆರ್ಡರ್‌ನಲ್ಲಿ ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲಿಕ್ಕೆ ಏನು ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಪರಿಶೀಲನ ಮಾಡುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ತೆರಿಗೆಗಳ ಬಗ್ಗೆ ಬಹಳ ಜನ ಮಾನ್ಯ ಸದಸ್ಯರುಗಳು ಪ್ರಶಂಸೆಯನ್ನು ಮತ್ತು ಸ್ವಾಗತವನ್ನು ಮಾಡಿದ್ದಾರೆ. ಆದರೆ ಅವರು ಮಾತನಾಡುತ್ತಾ ಕೆಲವು ವಿಚಾರಗಳನ್ನು

ಹೇಳಿದ್ದಾರೆ. ಏನೆಂದರೆ, ನೀವು ಶ್ರೀಮಂತರ ಪರವಾಗಿರತಕ್ಕ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡಿಬಿಟ್ಟಿದ್ದೀರಿ, ಬಡವರು ಉಪಯೋಗಿಸತಕ್ಕ ಪದಾರ್ಥಗಳ ಮೇಲಿನ ತೆರಿಗೆ ಹೆಚ್ಚಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಮ್ಮ ಕೇಂದ್ರಸರ್ಕಾರದ ಅರ್ಥಮಂತ್ರಿಗಳು ಒಂದು ಸಭೆಯನ್ನು ದೆಹಲಿಯಲ್ಲಿ ಕರೆದಿದ್ದರು. ಅದಕ್ಕಿಂತ ಹಿಂದೆ ಚೆಲ್ಲಯ್ಯನವರ ಶಿಫಾರಸ್ಸಿನ ಮೇರೆಗ ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ 10 ಜನ ಅಂದರೆ 10 ರಾಜ್ಯಗಳ ಅರ್ಥಸಚಿವರದು ಒಂದು ಸಮಿತಿಯನ್ನು ಮಾಡಿದ್ದರು. ಏಕೆಂದರೆ ಬೇರೆ ಬೇರೆ ದೇಶಗಳಲ್ಲಿ ದೇಶದ ಉದ್ದಗಲಕ್ಕೆ ವ್ಯಾಟ್ಸ್ ಸಿಸ್ಟಂ ತರಬೇಕು, ಮುಂದುವರೆದ ದೇಶಗಳಲ್ಲೆಲ್ಲ ವ್ಯಾಟ್ ಸಿಸ್ಟಂ ಇದ, ವ್ಯಾಲ್ಯೂ ಟ್ಯಾಕ್ಸ್ ಸಿಸ್ಟಂ ಇದೆ. ಆದುದರಿಂದ ಇದನ್ನು ಭಾರತದಲ್ಲೂ ಕೂಡ ತರಬೇಕು ಎನ್ನುವ ಉದ್ದೇಶದಿಂದ ಇದರ ಬಗ್ಗ ಅಧ್ಯಯನ ಮಾಡಿ ವರದಿಯನ್ನು ಕೊಡುವುದಕ್ಕೆ 10 ಜನ ಅರ್ಥಸಚಿವರ ಸಮಿತಿಯನ್ನು ಮಾಡಿದ್ದರು. ಅವರು ವರದಿಯನ್ನು ಕೊಟ್ಟರು. ಅದರಲ್ಲಿ ನಮ್ಮ ರಾಜ್ಯದ ಅರ್ಥಸಚಿವರು ಇರಲಿಲ್ಲ ಏಕೋ ಗೊತ್ತಾಗಲಿಲ್ಲ. ಕರ್ನಾಟಕ ಅರ್ಥ ಸಚಿವರು ಆ ಸಮಿತಿಯಲ್ಲಿರಲಿಲ್ಲ. ಆಗ ಶ್ರೀಮಾನ್ ಮೊಯಿಲಿಯವರು ಅರ್ಥಸಚಿವರಾಗಿದ್ದರು, ಅವರು ಮುಖ್ಯಮಂತ್ರಿಗಳೂ ಆಗಿದ್ದರು. ಅವರನ್ನು ಏತಕ್ಕೆ ಅದರಲ್ಲಿ ಸೇರಿಸಲಿಲ್ಲವೋ ಗೊತ್ತಾಗಲಿಲ್ಲ. ಆ 10 ಜನ ಅರ್ಥಸಚಿವರು ಒಂದು ವರದಿಯನ್ನು ಕೊಟ್ಟಿದ್ದರು. ಆ ವರದಿಯಲ್ಲಿ ಟ್ಯಾಕ್ಸ್ ರೇಟ್ ಎಷ್ಟಿರಬೇಕು, ವ್ಯಾಲ್ಯು ಟ್ಯಾಕ್ಸ್ ಇದೆಲ್ಲ ಮಾಡಬೇಕಾದರೆ ಏನು ಮಾಡಬೇಕು, ಅದಕ್ಕೆ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಪೂರಕವಾಗಿರತಕ್ಕ ತಯಾರಿಗಳು ಏನಿರಬೇಕು, ಮತ್ತೆ ವಿವಿಧ ಕಮಾಡಿಟಿಗಳ ಮೇಲೆ ಫ್ಲೋರ್ ರೇಟ್ಸ್ ಹೇಗಿರಬೇಕು ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಅದಕ್ಕ ಸಮಾನತೆ ತರತಕ್ಕದ್ದು ಹೇಗಿರಬೇಕು ಇವುಗಳೆಲ್ಲದರ ಬಗ್ಗೆಯೂ ಕೂಡ ಅವರು ಅಧ್ಯಯನ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ನಾನು ದೇಶದ ಅರ್ಥಮಂತ್ರಿಗಳ ಸಮ್ಮೇಳನದಲ್ಲಿ ಡಾ: ಮನಮೋಹನ್‌ಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಗೆ ನಾನು ಹೋಗಿದ್ದ. ಅವರು ಕೊಟ್ಟಿರತಕ್ಕ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ಅವರು ಎಲ್ಲಾ ರಾಜ್ಯಗಳ ತರಿಗೆಗಳನ್ನು, ಆ ರೇಟುಗಳನ್ನು ಕ್ರೋಢಿಕರಿಸಿ ಬಿಟ್ಟು ಫ್ಲೋರ್ ರೇಟ್ಸ್ 0-4-8-12 ಇದು ಇರಬೇಕೆಂದು ಹೇಳಿ ಶಿಫಾರಸ್ಸು ಮಾಡಿದ್ದಾರೆ. ಬಹುತೇಕ ಎಲ್ಲಾ ರಾಜ್ಯಗಳು ಇದಕ್ಕೆ ಒಪ್ಪಿಗೆಯನ್ನು ಮಾಡಿದ್ದಾರೆ. ಯಾವುದೇ 20 ಇದ್ದರೂ ಅದು ಮ್ಯಾಕ್ಸಿಮಮ್ 12 ಇರಬೇಕು. ಮತ್ತು ಎರಡು ವಿಶೇಷ ದರಗಳನ್ನು ಅವರು ಮಾಡಿದ್ದಾರೆ. 1 ಮತ್ತು 20. ಇದನ್ನು ಬಿಟ್ಟು 0-4-8-12 ಈ ನಾಲ್ಕು ಹಂತಗಳ ರೇಟು ಇರಬೇಕು. ಕಳೆದ ವರ್ಷ ಬಹಳ ತರಿಗೆದಾರರಿಂದ, ಇಂಡಸ್ಟ್ರಿಯಲಿಸ್ಟ್‌ಗಳಿಂದ, ಟ್ರೇಡರ್ಸ್ ಕಮ್ಯುನಿಟಿಯಿಂದ ಎಲ್ಲಾ ಕಡೆಯಿಂದ ಬಂದ ಮನವಿಗಳನ್ನು ಕೊಡತಕ್ಕದ್ದು ಆಯಿತು. ಹೋದವರ್ಷ ನಾನು ಎಲ್ಲರನ್ನು ಭೇಟಿಮಾಡಿದ್ದ ಈ ವರ್ಷ ಎಲ್ಲಾ ಸಂಘಸಂಸ್ಥೆಗಳವರು, ಟ್ರೇಡರ್ಸ್, ತೆರಿಗೆ ಕೊಡತಕ್ಕವರು ಬೇರೆ ಬೇರೆ ಸಣ್ಣಪುಟ್ಟ ವ್ಯಾಪಾರಸ್ಥರು ಎಲ್ಲರನ್ನು ನಾನು ಒಂದು ವಾರದವರಗ ಭೇಟಿ ಮಾಡಿದ್ದೇನೆ, ಅದರ ಹಿಂದಿನ ವರ್ಷವೂ ಭೇಟಿ ಮಾಡಿದ್ದ. ಅವರು

ಏನು ಒತ್ತಾಯ ಮಾಡಿದರು ಅಂದರೆ ನಿಮಗೆ ತೆರಿಗೆ ಸೋರುವುದು ತಪ್ಪಿಹೋಗಬೇಕಾದರೆ, ಅದು ಪಾರದರ್ಶಕವಾಗಿರಬೇಕಾದರೆ, ಅಕೌಂಟ್ಸ್ ಸಿಸ್ಟಂ ಕಡಿಮೆಯಾಗಬೇಕಾದರೆ, ವಸೂಲಿ ಅದು ಸರಳೀಕರಣವಾಗಬೇಕಾದರೆ ನೀವು ಟ್ಯಾಕ್ಸ್‌ನ್ನು ಕಡಿಮೆ ಮಾಡಬೇಕು, ಎನ್ನುವಂತಹ ಒಂದು ವಾದ. ಮತ್ತು ತೆರಿಗೆಗಳ ರೇಟನ್ನು ಕಡಿಮೆ ಮಾಡಬೇಕೆನ್ನುವುದು ವಾದ. ಇದನ್ನು ಮಾಡುವುದರಿಂದ ನಿಮಗ ಬರತಕ್ಕ ಆದಾಯ ಹೆಚ್ಚಾಗುತ್ತದೆ. ಮತ್ತು ಸೋರಿಹೋಗುವುದು ಕೂಡ ಕಡಿಮೆಯಾಗುತ್ತದೆ. ಎನ್ನತಕ್ಕ ವಾದವನ್ನು ಎಲ್ಲಾ ಕಡೆ ಇಟ್ಟರು. ಇದೇ ರೀತಿಯ ಶಿಫಾರಸ್ಸು ಫೈನಾನ್ಸ್ ಮಿನಿಸ್ಟರ್ಸ್ ಸಮ್ಮೇಳನದಲ್ಲಿ ಕೂಡ ವ್ಯಕ್ತವಾಗಿದೆ. ನಾನು ಪ್ರಸಕ್ತ ವರ್ಷದಲ್ಲಿ 21 ರೇಟುಗಳು ಇದ್ದುದನ್ನು 13 ರೇಟುಗಳಿಗೆ ಇಳಿಸಿದ್ದೇನೆ. ಸ್ವಲ್ಪಮಟ್ಟಿಗೆ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಇದು ಬಹಳ ಕಸರತ್ತು ಮಾಡಬೇಕು ಇದು ಬಹಳ ಕಷ್ಟದ ಕೆಲಸ. ಕಡಿಮೆ ಮಾಡುವುದು ಬಹಳ ಕಷ್ಟದ ಕೆಲಸ. ಏಕೆಂದರೆ ಬಡವರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಶ್ರೀಮಂತರಿಗೆ ಸ್ವಲ್ಪ ಹೆಚ್ಚಾದರೂ ಪರವಾಗಿಲ್ಲ. ಆ ರೀತಿ ನೋಡಬೇಕು. ಇದು ವರ್ಗೀಕರಣ ಮಾಡತಕ್ಕದ್ದು ಗ್ರೂಪ್ ಮಾಡಿ ಮಾಡತಕ್ಕದ್ದು ಸ್ವಲ್ಪ ಕಷ್ಟದ ಕೆಲಸ. ಇದನ್ನು ನಾನು ಕಳೆದ ಒಂದು ತಿಂಗಳಿಂದ ಕಸರತ್ತು ಮಾಡಿ ಮಾಡಿದ್ದೇನೆ. ನಮ್ಮ ಅಧಿಕಾರಿಗಳು ನಾವೆಲ್ಲ ಸೇರಿಕೊಂಡು ಒಂದು ತಿಂಗಳಿಂದ ಕಸರತ್ತು ನಡೆಸಿ ಎಷ್ಟು ರೇಟುಗಳಿಗೆ ತರಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂದ್ದು, ಮತ್ತೆ ಎಲ್ಲಾ ಹಣಕಾಸಿನ ಮಂತ್ರಿಗಳ ವರದಿಯ ಶಿಫಾರಸ್ಸಿಗೆ ಅನುಗುಣವಾಗಿ ಮಾಡಬೇಕೆಂದು ಹೇಳಿ ಅದಕ್ಕೋಸ್ಕರ 2-4-8-12 ರೇಟುಗಳನ್ನು ನಾವು ತಂದಿದ್ದೇವೆ. ಇದರಲ್ಲಿ ಸುಮಾರು 156 ಎಂಟರಿನಲ್ಲಿ ಕಡಿಮೆಯಾಗಿದೆ. ಸುಮಾರು 30 ಎಂಟರಿಗಳಲ್ಲಿ ಹೆಚ್ಚಾಗಿದೆ. ಹೀಗೆ ಹೆಚ್ಚು ಆಗುವಾಗಲೂ ಕೂಡ ಕೆಲವು ಬಾಬುಗಳಲ್ಲಿ ಅಂದರೆ ಕಿರಾಣಿ ಬಗ್ಗೆ ಮಾಡುವಾಗ ಬೇರೆ ಬೇರೆ ದರಗಳಿಂದ ಕಿರಾಣಿ ಪದಾರ್ಥಗಳು ಇರುತ್ತೆದೆ. ಒಬ್ಬ ಕಿರಾಣಿ ಅಂಗಡಿಗೆ ಹೋದರೆ ಅಲ್ಲಿರತಕ್ಕ ಕಿರಾಣಿ ಪದಾರ್ಥಗಳೆಲ್ಲ ಒಂದು ರೇಟಿನಲ್ಲಿರಬೇಕು, ಅದರಿಂದ ಅಕೌಂಟ್ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರು ತೆರಿಗೆ ತಪ್ಪಿಸಿಕೊಳ್ಳುವುದು ಕೂಡ ತಪ್ಪಿಹೋಗುತ್ತದೆ. ಮತ್ತು ಇಲ್ಲಿ ವಸೂಲಿ ಮಾಡುವುದಕ್ಕೆ ಕೂಡ ಅನುಕೂಲವಾಗುತ್ತದೆ, ರಶೀತಿ ಹಾಕುವುದಕ್ಕೂ ಕೂಡ ಅನುಕೂಲವಾಗುತ್ತದೆನ್ನುವ ಕಾರಣಕ್ಕೋಸ್ಕರ ಅದನ್ನೆಲ್ಲ ನಾಲ್ಕು ಪರ್ಸೆಂಟ್‌ಗೆ ತರಬೇಕೆಂದು ಮಾಡಿದ್ದೇವೆ.

ಹಾಗೆಯೇ ಸ್ಟೇನಲೆಸ್ ಸ್ಟೀಲ್ ಪದಾರ್ಥಗಳು, ಅಲ್ಯುಮಿನಿಯಂ ಪದಾರ್ಥಗಳನ್ನು ಬಿಟ್ಟು ಬಾಕಿ ಎಲ್ಲದಕ್ಕೂ 8 ಪರ್ಸೆಂಟ್ ಇರಬೇಕೆಂದು ಮಾಡಿರತಕ್ಕಂಥಾದ್ದು ಅದು ಒಟ್ಟಿಗೆ ಒಂದು ಗುಂಪು ಬರಬೇಕು. ಹಾಗೆಯೇ ಮೆಶಿನರೀಸ್ ಸ್ಪೇರ್‌ಪಾರ್ಟ್ಸ್ ಈ ತರಹ ಮಾಡುವಾಗ ಕೆಲವು 15 ಇದ್ದದ್ದು 12 ಆಗಿವೆ. 10 ಇದ್ದದ್ದು 12 ಆಗಿವೆ. 6 ಇದ್ದದ್ದು 8 ಆಗಿವೆ. ಈಗ 6ರ ರೇಟ್ ಇಲ್ಲ, 10ರ ರೇಟ್ ಇಲ್ಲ, 13 ರೇಟ್ ಇಲ್ಲ, 15ರ ರೇಟ್ ಇಲ್ಲ. 20ರ ರೇಟ್ ಇದೆ. ಡೀಸೆಲ್ ಮತ್ತು ಪೆಟ್ರೋಲ್ ಮತ್ತು ಲಿಕ್ಕರ್ಸ್ - ಇದನ್ನು ಸ್ಪೆಶಲ್

ರೇಟ್‌ಗಳಾಗಿ ಉಳಿಸಿಕೊಂಡಿದ್ದೇವೆ. 6 ರಷ್ಟು ಎರಡು ಪದಾರ್ಥಗಳನ್ನು ಇಲ್ಲಿಯವರೆಗೆ ಉಳಿಸಿಕೊಂಡಿದ್ದೇವೆ. ಅದು ಯಾವುದು ಎಂದರೆ, ಕಾಫಿ ಮತ್ತು ಇನ್ನೊಂದು ಆಟೋರಿಕ್ಷಾದವರಿಗೆ ಹೆಚ್ಚಿಸಿದ ಟ್ಯಾಕ್ಸ್. ಅದನ್ನು ಹೋದಸಾರಿ 8ರಿಂದ 6 ಮಾಡಿದ್ದೆವು. ಪಾಪ, ಬಹಳ ಜನ ನಿರುದ್ಯೋಗಿಗಳು ಆಟೋರಿಕ್ಷಾ ತೆಗೆದುಕೊಳ್ಳುತ್ತಾರೆ ಅಂತ ಹೇಳಿ ಇದು ಹೆಚ್ಚಾಗಬಾರದು, ಹಾಗಯೇ ಉಳಿಸಿಕೊಳ್ಳಬೇಕು ಎಂದು ಅದನ್ನು ಮಾಡಿದ್ದೇವೆ. ಒಟ್ಟಾರೆ ಈ ಎಕ್ಸೈಸ್‌ನಲ್ಲಿ ಬಡವರಿಗೆ ತೊಂದರೆಯಾಗದ ರೀತಿಯಲ್ಲಿ ಬಹಳ ಮಟ್ಟಿಗೆ ನಾವು ನೋಡಿಕೊಂಡಿದ್ದೇವೆ. ಬಡವರು ಬಳಸತಕ್ಕಂಥ ಪದಾರ್ಥಗಳು, ಸಾಮಾನ್ಯ ಜನ ಬಳಸತಕ್ಕಂಥ ಪದಾರ್ಥಗಳು, ಅಗ್ರಿಕಲ್ಚರ್ ಇಂಪ್ಲಿಮೆಂಟ್‌ಗೆ ಕೊಟ್ಟಿದ್ದೇವೆ. ಪವರ್ ಟಿಲ್ಲರ್ಸ್‌ಗೆ ಏಕೆ ಮಾಡಿದ್ದೆವು ಎಂದರೆ ಟ್ರೇಲರ್ಸ್, ಟ್ರಾಕ್ಟರ್ ಇವೆಲ್ಲ ಇದ್ದುದರಿಂದ 2 ರಿಂದ 4 ಮಾಡಿದ್ದೆವು. ಅದನ್ನು ಕಡಿಮೆ ಮಾಡಬೇಕೆಂದು ಬಹಳ ಜನರ ಒತ್ತಾಯ ಇದೆ. ಅದರ ಜೊತೆಗೆ ...

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ದೇಶದಲ್ಲಿ ಎಲ್ಲಿಯೂ ಇಲ್ಲ. ಇದನ್ನು ಪೂರ್ಣ ತೆಗೆದುಬಿಡಿ. ಟ್ರೇಲರ್ಸ್ ಟ್ರಾಕ್ಟರ್ಸ್‌ಗೆ ಪೂರ್ತಿಯಾಗಿ, ತೆಗೆದುಬಿಡಿ, ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಈಗಾಗಲೇ 2 ಪರ್ಸೆಂಟ್ ಇದೆ. ಇದರ ಜೊತೆಗೆ ಸೀಮೆಎಣ್ಣೆ ಬಗ್ಗೆ ಬಹಳ ಹೇಳಿದ್ದಾರೆ. ಪಿ.ಡಿ.ಎಸ್. ಮೂಲಕ ಮಾರತಕ್ಕಂಥ ಸೀಮೆಎಣ್ಣೆಗೆ ನಾವು ಹೆಚ್ಚು ಮಾಡಿಲ್ಲ. ಯಾರು ಫೇರ್‌ಪ್ರೈಸ್ ಡಿಪೋದಿಂದ ತೆಗೆದುಕೊಳ್ಳುತ್ತಾರೆ, ಅಲ್ಲಿಯೇ ಹೆಚ್ಚು ಸೀಮೆಎಣ್ಣೆ ಮಾರಾಟವಾಗತಕ್ಕಂಥಾದ್ದು. ಸಾಮಾನ್ಯ ಜನ ಬಳಸತಕ್ಕಂಥವರಿಗೆ ಹೆಚ್ಚು ಮಾಡಿಲ್ಲ. ಇದು ಮೊದಲು 6 ಇತ್ತು. ಪಿ.ಡಿ.ಎಸ್. ಹೊರಗಡೆ ಮಾರತಕ್ಕಂಥ ಸೀಮೆಎಣ್ಣೆಗೆ 6 ಇತ್ತು. ಅದನ್ನು ತೆಗೆದ ಮೇಲೆ 8 ಮಾಡತಕ್ಕಂಥಾದ್ದು ಆಯಿತು. ಈಗ ಬಹಳ ಜನ ಇದೂ ಕೂಡ ಹೆಚ್ಚಾಗಿದೆ ಎಂಬ ವಾದಮಾಡಿ, ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ಬಡವರು ಹೆಚ್ಚು ಉಪಯೋಗಿಸುತ್ತಿಲ್ಲ, ಬಳಕೆ ಕೂಡ ಕಡಿಮೆ ಪಿ.ಡಿ.ಎಸ್. ಬಿಟ್ಟು ಹೊರಗಡೆ ಕೊಂಡುಕೊಳ್ಳತಕ್ಕಂಥಾದ್ದು ಬಹಳ ಕಡಿಮೆ ಕ್ವಾಂಟಿಟಿ. 55 ಸಾವಿರ ಕೆ.ಎಲ್. ಪಿ.ಡಿ.ಎಸ್.ನಲ್ಲಿ ಇರುವುದು ಬಡವರಿಗೆ ಅನುಕೂಲವಾಗುತ್ತದೆ. ಅವರಿಗೆ ತೊಂದರೆಯಾಗುವುದು ಯಾವುದನ್ನೂ ನಾವು ಮಾಡಿಲ್ಲ. ಆಮೇಲೆ ಗಾಂಜಾ, ಅಫೀಮು, ಬಗ್ಗೆ ಬಹಳ ಜನ ಪ್ರಸ್ತಾಪ ಮಾಡಿದ್ದಾರೆ. ಗಾಂಜಾ, ಅಫೀಮು- ಇದಕ್ಕೆಲ್ಲ ಇಳಿಸಿ ಬಿಟ್ಟಿದ್ದೀರಿ, ಅದು 150 ಇತ್ತು 20ಕ್ಕೆ ತೆಗೆದುಕೊಂಡು ಬಂದಿದ್ದೀರಿ ಎಂದು ಹೇಳಿದ್ದಾರೆ. ಹಣಕಾಸಿನ ಮಂತ್ರಿಗಳ ವರದಿಯಲ್ಲಿ ಇದರ ಬಗ್ಗೆ ಶಿಫಾರಸ್ಸು ಮಾಡಿದ್ದುದು 20 ಪರ್ಸೆಂಟ್. ಮತ್ತೆ ಬೇರೆ ರಾಜ್ಯಗಳಲ್ಲಿಯೂ ಕೂಡ ಇದರ ಮಾರಾಟವೇ ಇಲ್ಲ. There is not a single licence in Karnataka. ಯಾರಿಗೂ ಮಾರಾಟ ಮಾಡಿ ಎಂದು ನಾವು ಲೈಸನ್ಸ್ ಕೊಟ್ಟಿಲ್ಲ. It is prohibited.

ಶ್ರೀ ಅರಗ ಜ್ಞಾನೇಂದ್ರ : ಅದು ಬ್ಲಾಕ್‌ನಲ್ಲಿ ಮಾರಾಟವಾಗುತ್ತದೆ, ವ್ಯವಹಾರವಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಅದು ನಿಮಗೆ ಗೊತ್ತಿದೆಯೇ?

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ, ಕರ್ನಾಟಕದಲ್ಲಿ ಗಾಂಜಾ ಇಲ್ಲವೇನು? ಇಲ್ಲಿ ಗಾಂಜಾ ಮಾರಾಟವೇ ಇಲ್ಲವೆಂದು ತಾವು ಡಿಕ್ಲೇರ್ ಮಾಡುವುದಾದರೆ ನಮ್ಮದೇನೂ ತೊಂದರೆ ಇಲ್ಲ.

SRI SIDDHARAMAIAH : Presumption is,there is no transaction. ಆದರೆ ನನಗೆ ಗೊತ್ತಿಲ್ಲ. There is no licence. ಯಾರ ಮೇಲೆ ನಾವು ತೆರಿಗೆ ಹಾಕುವುದು? It is only notional. ಒಂದು ವೇಳೆ ಮುಂದೆ ಯಾವತ್ತಾದರೂ ಅವರು ಲೈಸೆನ್ಸ್ ಕೊಟ್ಟರೆ ಇರಲಿ ಎನ್ನುವ ಕಾರಣಕ್ಕೋಸ್ಕರ ಎಂಟ್ರಿ ಇಟ್ಟುಕೊಂಡಿರುವುದು. ಆದ್ದರಿಂದ ಇಲ್ಲಿ ಗಾಂಜಾ, ಅಫೀಮು ಕಡಿಮೆಮಾಡಿಬಿಟ್ಟು ಸೀಮೆಎಣ್ಣೆಗೆ ಹೆಚ್ಚು ಮಾಡಿದ್ದೇವೆ. ಎನ್ನುವ ವಾದ ಏನಿದೆ ಅದರಲ್ಲಿ ತಿರುಳಿಲ್ಲ. ಬೇರೆ ರಾಜ್ಯಗಳಲ್ಲಿ ಕಡಿಮೆ ಇದೆ. 18 -16 ಇದೆ. ಇದು ಫೈನಾನ್ಸ್ ಮಿನಿಸ್ಟರ್‌ಗಳ ಕಾನಫರೆನ್ಸ್‌ನಲ್ಲಿ ಶಿಫಾರಸ್ಸು ಆವದ್ದು ಅದಕ್ಕಾನುಗುಣವಾಗಿರಲಿ ಎಂದು ಮಾಡಿದೆ. ಮುಂದೆ ಒಂದು ವೇಳೆ ಕೊಟ್ಟಾಗ, ಕೊಡುವುದಿಲ್ಲ ಎಂದು ನಿರ್ಬಂಧ ಇದೆ. ಮಾರಾಟ ಮಾಡಬಾರದು ಎಂದು ಇದೆ. ಕೆಲವು ರಾಜ್ಯಗಳಲ್ಲಿ ಮಾತ್ರ ಇದಕ್ಕೆ ಲೈಸೆನ್ಸ್ ಇದೆಯಂತೆ. ಔಷಧಿ , ಡ್ರಗ್ಸ್‌ಗೆ ಇವನ್ನು ಉಪಯೋಗ ಮಾಡುತ್ತಾರಂತೆ. ನಮ್ಮ ರಾಜ್ಯದಲ್ಲಂತೂ ಇದರ ಮಾರಾಟ ನಿಷಿದ್ಧ. ಯಾರಿಗೂ ಕೂಡ ಪರವಾನಿಗಿ ಇಲ್ಲ. ಯಾರೂ ಕೂಡ ಬೆಳೆಯುತಕ್ಕದ್ದು ಅಲ್ಲ. ಆದ್ದರಿಂದ ಇಲ್ಲಿ ಸಂಪೂರ್ಣ ನಿಷೇಧ ಇದೆ. ಆದ್ದರಿಂದ it is only a national thing. ಆದ್ದರಿಂದ ಇದು ಕಡಿಮೆಯಾಯಿತು, ಕಳ್ಳತನಕ್ಕೆ ಸಹಾಯಕವಾಯಿತು ಎನ್ನುವಂಥ ವಿಚಾರ ನಿಮ್ಮ ತಲೆಯಲ್ಲಿದ್ದರೆ ದಯವಿಟ್ಟು ಅದನ್ನು ದೂರ ಮಾಡಿಕೊಳ್ಳಬೇಕೆಂದು ಹೇಳಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

SRI MARUTHI RAO PAWAR : ಅಕ್ರಮವಾಗಿ ತುಂಬಾ ಜನ ಗಾಂಜಾ ಮಾರಾಟ ಮಾಡುತ್ತಾರೆ. ಕಳ್ಳತನದಿಂದ ಇದನ್ನು ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ: ಕಳ್ಳತನಗಳು ಬೇಕಾದಷ್ಟು ಆಗುತ್ತವೆ. ಕಾನೂನು ವಿರುದ್ಧವಾಗಿ ಅನೇಕ ಚುಟುವಟಿಕೆಗಳು ರಾಜ್ಯದಲ್ಲೂ ನಡೆಯುತ್ತವೆ, ದೇಶದಲ್ಲಿ ನಡೆಯುತ್ತವೆ, ಎಲ್ಲಾ ಕಡೆಯಲ್ಲೂ ನಡೆಯುತ್ತವೆ. ಇಂತಹ ಕಳ್ಳತನಗಳು ಆದಾಗ ಶಿಕ್ಷೆ ಮಾಡುವುದಕ್ಕೆ ಕಾನೂನು ಕಡೆಯಲ್ಲೂ ಇದೆ. ಅದನ್ನು ನಾವೆಲ್ಲ ಮಾಡುವವರು. Not the Commercial Taxes Department, it is the Police Department in accordance with law, they have to take action. ಆದ್ದುದರಿಂದ ಇಲ್ಲಿ ಇದು ಒಂದು ನೋಶನಲ್ ಎನ್ನತಕ್ಕಂಥ ಮಾತನ್ನು ಹೇಳಿ, ಮುಂದೆ ಯಾರಿಗೂ ಲೈಸೆನ್ಸ್ ಕೊಡುವುದಿಲ್ಲ. ಒಂದು ವೇಳೆ ಆ ತರಹದ್ದು ಇದ್ದರೆ ಇರಲಿ ಎಂದು ಹೇಳಿ ದೂರದೃಷ್ಟಿ ಇಟ್ಟುಕೊಂಡು ಈ ರೀತಿಯ ಒಂದು ನೋಶನಲ್ ರೇಟ್ ಇಟ್ಟಿರತಕ್ಕಂಥಾದ್ದೇ ಹೊರತು, ಇದರಿಂದ ಯಾವ ಅನಾನುಕೂಲವಾಗಲೀ ಜನಸಾಮಾನ್ಯರ

ಮೇಲೆ ಆಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ತೆರಿಗೆ ಮೇಲೂ ಕೂಡ ಇದರ ಪರಿಣಾಮ ಇಲ್ಲ.

ಶ್ರೀ ಹೆಚ್. ಶಿವಪ್ಪ : ಒಂದು ನಿಮಿಷ ನೋಶನಲ್ ಎಂದು ಹೇಳಿದಿರಿ ಅದಕ್ಕೆ ನಾವೇಕೆ ಆಂಟಿಸಿಪೇಟ್ ಮಾಡಬೇಕು. ಹಾಗಾದರೆ ಮುಂದೆ ಸರ್ಕಾರಕ್ಕೆ ಇನ್ನೂ ಸ್ಕೋಪ್ ಇದೆಯೆನ್ನುವುದಾಯಿತಲ್ಲ? ಈ ಟ್ಯಾಕ್ಸ್ ಎಂದು ಹೇಳುವುದರಿಂದ ಲೈಸೆನ್ಸ್ ಕೊಡುವ ಪ್ರಾವಿಜನ್ ಅನ್ನು ನೀವು ಆಂಟಿಸಿಪೇಟ್ ಮಾಡುತ್ತಿದ್ದೀರಿ, When you are very much definite you are going to give licence such units. It should be banned.

SRI SIDDRAMAIAH : In case if such licence is issued in future, let there be some rate. ಎಂದು ಇಟ್ಟಿರುವುದು. It is only national. Nothing is coming to the Government. ಆದ್ದರಿಂದ ಶಿವಪ್ಪನವರೇ, ಇದರ ಬಗ್ಗೆ ಚರ್ಚೆ ಬೇಡ. ಹಾಗೆಯೇ ಬೇರೆ ಬೇರೆ ರಿಯಾಯಿತಿಗಳನ್ನು ಕೂಡ ನಾವು ಕೊಟ್ಟಿದ್ದೇವೆ. ಇದು ಬಿಟ್ಟಾರೆ ಸರಳೀಕರಣ, ಪಾರದರ್ಶಕತ್ವ ಮತ್ತೆ ಎಲ್ಲ ಕೂಡ ಮುಂದೆ ಸಿಸ್ಟಮ್ ತರತಕ್ಕಂಥ ವಿಚಾರ ಇದೆ. ನಾವೇನೂ ವ್ಯಾಟ್ ಸಿಸ್ಟಮ್‌ಗೆ ವಿರೋಧ ಇಲ್ಲ. ಮುಂದೆ ಇದನ್ನು ಮಾಡಬೇಕು ಎನ್ನತಕ್ಕಂಥ ವಿಚಾರ ಇದ್ದಾಗ, ಗಣಕೀಕರಣ ತೆರಿಗೆಯ ಸರಳೀಕರಣ, ಇದರಲ್ಲಿ ಅಡ್ಮಿನಿಸ್ಟ್ರೇಶನ್ ಪಾರದರ್ಶಕವಾಗಿರತಕ್ಕಂಥಾದ್ದು ಹಾಗೆಯೇ ತೆರಿಗೆ ವಸೂಲಿ ಕ್ರಮ ಕಡಿಮೆಯಾಗಿರತಕ್ಕಂಥಾದ್ದು, ಅಕೌಂಟಿಂಗ್ ಕಡಿಮೆಯಾಗಿರತಕ್ಕಂಥಾದ್ದು, ಇವೆಲ್ಲವೂ ಕೂಡ ಇದರಲ್ಲಿ ಅಡಕವಾಗಿದ್ದು ಮತ್ತು ಈ ಇವೇಶನ್ ಕಡಿಮೆ ಆಗುತ್ತದೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಮತ್ತು ಈ ಎಲ್ಲ ರಿಫಾರ್ಮ್ಸ್ ಮಾಡುವುದರಿಂದ ನಮ್ಮ ರಾಜ್ಯದಿಂದ ಬೇರೆ ರಾಜ್ಯಗಳಿಗೆ ವ್ಯಾಪಾರ ಹೋಗುತ್ತಿತ್ತು ಎನ್ನತಕ್ಕಂಥಾದ್ದು ತಪ್ಪು ಗ್ರಹಿಕೆಯಾಗುತ್ತದೆ. ನಮ್ಮ ಟ್ರೇಡ್ ಡೈವರ್ಶನ್ ಆಗದ ರೀತಿಯಲ್ಲಿ ಕರ್ನಾಟಕದಲ್ಲಿ ಹೆಚ್ಚು ಈ ವ್ಯವಹಾರ ನಡೆಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಬಹುತೇಕವಾಗಿ ಪಕ್ಕದ ರಾಜ್ಯಗಳಿಗೆ ರೇಟ್ಸ್‌ನಲ್ಲಿ ಪ್ಯಾರಿಟಿಯನ್ನು ತಂದಿದ್ದೇವೆ. ಅನೇಕ ಪದಾರ್ಥಗಳನ್ನು ಅವರಿಗಿಂತ ಕಡಿಮೆ ಇಡುವಂತಾದ್ದನ್ನು ಕೂಡ ನಾವು ಮಾಡಿದ್ದೇವೆ. ಆದ್ದರಿಂದ. ನನ್ನ ಅಭಿಪ್ರಾಯದಲ್ಲಿ ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ತೆರಿಗೆ ಬರುತ್ತದೆ. ಸೋರುವಿಕೆ ಕಡಿಮೆಯಾಗುತ್ತದೆ. ಮತ್ತೆ ರೇಟ್‌ಗಳು ಕಡಿಮೆ ಇರುವುದರಿಂದ, ಅಕೌಂಟಿಂಗ್‌ಗೆ ಬಹಳ ಸುಲಭವಾಗುತ್ತದೆ. ಮತ್ತು ಮುಂದೆ VAT system ಕೂಡ ತರುವುದಕ್ಕೆ ಬಹಳ ಅನುಕೂಲವಾಗುತ್ತದೆ. ಇಡೀ ದೇಶದಲ್ಲಿ, ಕರ್ನಾಟಕವೇ ಮೊಟ್ಟಮೊದಲ ರಾಜ್ಯ, ತೆರಿಗೆ ಸುಧಾರಣೆ ಮಾಡತಕ್ಕಂಥಾದ್ದರಲ್ಲಿ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮುಂದೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಇನ್ನೂ ಏನಾದರೂ ಉಳಿದಿದ್ದರೆ, rationalisation of taxes - ಇದನ್ನು ಮಾಡತಕ್ಕಂಥ ಪ್ರಯತ್ನ ಮುಂದೆಯೂ ಕೂಡ ಮುಂದುವರಿಯುತ್ತದೆ. ಈ ಸದನದ ಮೂಲಕ, ಬಹಳ ಜನ

ತೆರಿಗೆದಾರರು, ಕಡಿಮೆ ತೆರಿಗೆ ಆದರೂ, ನಾವು ಹೆಚ್ಚು ತೆರಿಗೆ ಕೊಡುತ್ತೇವೆ ಎಂಬ ವಾದವನ್ನು ಮಾಡುತ್ತಿದ್ದಾರೆ. ನೀವು ಅಡಿಕೆ ಬಗ್ಗೆಯೂ ಕೂಡ ಹೇಳಿದಿರಿ. 8 ಜಾಸ್ತಿಯಾಯಿತು, ಅದನ್ನು ಕಡಿಮೆ ಮಾಡಿ, ತೆರಿಗೆ ಹೆಚ್ಚು ಕೊಡುತ್ತೇವೆ ಎಂದು. ಈಗ 4 ಮಾಡಿದ್ದೇನೆ, ಎಲ್ಲಾ ಅಡಿಕೆ ವ್ಯವಹಾರದಲ್ಲಿರುವವರಿಗೆ ಹೆಚ್ಚು ತೆರಿಗೆ ಕೊಡಬೇಕು ಎಂದು ಯೋಗೀಶಭಟ್ಟರು ದಯಮಾಡಿ ಹೇಳಬೇಕು. ಆದ್ದರಿಂದ, ನಮ್ಮ ಈ ಹೊಸ ತೆರಿಗೆ ಕ್ರಮವನ್ನು ತೆರಿಗೆದಾರರು ಮೆಚ್ಚಿಕೊಂಡಿದ್ದಾರೆ,ಎಲ್ಲರೂ ಕೂಡ ಸ್ವಾಗತ ಮಾಡಿದ್ದಾರೆ. ನಾನು ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತೆರಿಗೆ ತಪ್ಪದೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಕೊಡಬೇಕು. ಇದಕ್ಕೆ ಯಾರೇ ತಪ್ಪಿದರೂ ಕೂಡ, ಅತ್ಯಂತ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಇದರಲ್ಲಿ ಯಾವುದೇ ಮುಲಾಜು ಇಲ್ಲ. ಮಾನ್ಯ ಯಡಿಯೂರಪ್ಪನವರು ಇನ್ನೊಂದು ಮಾತು ಹೇಳಿದರು. ನೀವು ತೆರಿಗೆ ಮಾಡುವ ಬದಲು ಬಾಕಿ ವಸೂಲಿ ಮಾಡಿ ಎಂದು ಹೇಳಿದರು. ದೊಡ್ಡ ಅಮೌಂಟ್ ಇದೆ, ಬಾಕಿ ವಸೂಲ್ಮಾಡಿ ಎಂದು ಹೇಳಿದರು, ನಿಜ. ಎಕ್ಸೈಸ್‌ನಲ್ಲಿ 1946ನೇ ಇಸವಿಯಿಂದ ಉಳಿದುಕೊಂಡು ಬಂದಿದೆ. ಅಸಲಿಗಿಂತ ಬಡ್ಡಿಯೇ ಜಾಸ್ತಿಯಾಗಿದೆ. ಬಡ್ಡಿಯೇ ಸುಮಾರು ಒಂದೂವರೆ ಪಟ್ಟು ಇದೆ. ಇದು 1946ನೇ ಇಸವಿಯಿಂದ ಬೆಳೆಕೊಂಡು ಬಂದಿದೆ. ಇದರ ಬಗ್ಗೆ ಕೂಡ ಕರಾರುವಾಕ್ಕಾಗಿ ವಸೂಲ್ಮಾಡಬೇಕು. ಇದಕ್ಕೆ ಒಂದು ಆಕ್ಟ್ ಮಾಡಿದೆವು, ಕೋರ್ಟಿನಲ್ಲಿ ಅದಕ್ಕೆ ತಡೆಯಾಜ್ಞೆ ಕೊಡಬಾರದೆಂದು ಮಾಡಿದರು. Again it has been questioned in the High Court - ಕಮರ್ಷಿಯಲ್ ಟ್ಯಾಕ್ಸ್‌ನಲ್ಲೂ ಕೂಡ ಇದೆ. 400 ಚಿಲ್ಲರೆ ಅಥವಾ 500 ಕೋಟಿ ರೂಪಾಯಿನಷ್ಟು ಇದೆ. ಅದಕ್ಕೆ ನಮ್ಮ ಕಾನೂನು ವಿಭಾಗ ಇದೆಯಲ್ಲ, ಇದನ್ನು ಹೆಚ್ಚು ಭದ್ರಪಡಿಸಬೇಕೆಂದು ಮಾಡಿದ್ದೇವೆ. ಕೋರ್ಟಿನಲ್ಲಿ ಬಹಳಷ್ಟು ಸ್ಟೇನಲ್ಲಿ ಸಿಕ್ಕಿಹಾಕಿಕೊಂಡಿವೆ. ಆದುದರಿಂದ ಇದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅದ್ದರಿಂದ, ಅದು ಕಮರ್ಷಿಯಲ್ ಟ್ಯಾಕ್ಸ್ ಇರಬಹುದು. ಎಕ್ಸೈಸ್ ಇರಬಹುದು, ಮತ್ತೆ ಬೇರೆ ಯಾವುದೇ ಇರಬಹುದು. ನಿನ್ನೆ ನಮ್ಮ ಮುಖ್ಯಮಂತ್ರಿಗಳು ಒಂದು ಘೋಷಣೆ ಮಾಡಿದ್ದಾರೆ. ವಾಟರ್ ರೇಟ್ಸ್ ಅದರ ಬಗ್ಗೆ ದಂಡ ಹಾಕಿ, ಸುಮಾರು 215 ಕೋಟಿ ರೂಪಾಯಿಗಳನ್ನು ವೇವ್ ಆಫ್ ಮಾಡಿದ್ದೇನೆ. ಎಂದು ಡಿಕ್ಲೇರ್ ಮಾಡಿದ್ದಾರೆ. ರೈತರಿಂದ ಬರಬೇಕಾಗಿದ್ದಂಥ ಹಣವನ್ನು 215ಕೋಟಿ ರೂಪಾಯಿಗಳನ್ನು ವಜಾ ಮಾಡಿದ್ದೇವೆಂದು ಹೇಳಿದ್ದಾರೆ. ನೀರಾವರಿ ವಾಟರ್ ರೇಟಿನ ಮೇಲೆ, ಪೀನಲ್ ರೇಟ್ ಎಂದು ಹಾಕಿದ್ದರು. 215 ಕೋಟಿ ರೂಪಾಯಿಗಳನ್ನು ವೇವ್ ಆಫ್ ಮಾಡಿದೆ. ಇದನ್ನು ನೀವುಗಳೆಲ್ಲರೂ ಸ್ವಾಗತ ಮಾಡಬೇಕು. ಇಡೀ ರಾಜ್ಯದಲ್ಲಿ ರೆವಿನ್ಯೂ ಇಲಾಖೆಯಲ್ಲಿ ವಾಟರ್ ರೇಟ್ಸ್ ವಸೂಲ್ಮಾಡಬೇಕಾದುದು ಬಾಕಿ ಇತ್ತು. ಆ ವಾಟರ್ ರೇಟ್ ಕೊಡದೇ ಇರುವುದಕ್ಕೆ, ಅದರ ಮೇಲೆ ದಂಡ ಹಾಕಿದ್ದರು. ಆ ದಂಡವನ್ನು ಸಂಪೂರ್ಣವಾಗಿ ಈಗ ತೆಗೆದುಹಾಕಿದ್ದೇವೆ. ಆದ್ದರಿಂದ, ನೀವು ಸ್ವಾಗತ ಮಾಡಬೇಕು. ಹಾಗಾದರೆ, ಇದನ್ನು ಬೇರೆಯವರು ಏಕೆ

ಮಾಡಲಿಲ್ಲ, ಹೇಳಿ. ಬೇರೆಯವರು ಮಾಡುವುದಕ್ಕೆ ಮನಸ್ಸು ಇರಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಹಿಂದಿನ 5 ವರ್ಷದಲ್ಲಿ ಆಗಿದ್ದೇ ಅಲ್ಲ, ಹಿಂದೆಯೂ ಇತ್ತು.

ಶ್ರೀ ಸಿದ್ಧರಾಮಯ್ಯ : ಹಿಂದೆ ಇದ್ದರೂ ಕೂಡ, ಮಾಡಲಿಲ್ಲವಲ್ಲ.

ಶ್ರೀ ವೈ. ರಾಮಕೃಷ್ಣ : ಬಾಕಿಯನ್ನು ಕಲೆಕ್ಟ್ ಮಾಡುವುದಕ್ಕೆ, ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಇರಬಹುದು, ಎಕ್ಸೈಸ್ ಡಿಪಾರ್ಟ್‌ಮೆಂಟ್ ಇರಬಹುದು ಅಥವಾ ಯಾವುದೇ ಡಿಪಾರ್ಟ್‌ಮೆಂಟ್ ಇರಬಹುದು. ಇದನ್ನು ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಟ್ರೀಟ್ ಮಾಡಿ, ರೆವಿನ್ಯೂ ಮಂತ್ರಿಗಳ ಕೈಗೆ ಕೊಟ್ಟುಬಿಟ್ಟರೆ, ಅವರು ವಸೂಲ್ಮಾಡುತ್ತಾರಲ್ಲ. ಎಲ್ಲಾ ಬಾಕಿಯನ್ನು ಅವರಿಗೆ ಕೊಟ್ಟರೆ, ವಸೂಲ್ಮಾಡುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ : ಎಲ್ಲರ ಹಣವನ್ನೂ ಹೊರುವವನು ನಾನೇನಾ. ಸಂಬಂಧಪಟ್ಟ ಇಲಾಖೆಗೆ ನಾನು ಹೇಳಿದ್ದೇನೆ. ಕಮರ್ಷಿಯಲ್ ಟ್ಯಾಕ್ಸ್, ಬಾಗಿಲು ಹಾಕಿಕೊಂಡು ಹೋಗುವವರೆಗೂ ಸುಮ್ಮನೇ ಇರುತ್ತಾರೆ, ಆ ಮೇಲೆ ವಸೂಲಿಗೆ ನಮ್ಮ ಹತ್ತಿರ ಕಳುಹಿಸುತ್ತಾರೆ. ಎಕ್ಸೈಸ್, ಇದರಲ್ಲಿ ಮುಕ್ಕಾಲುಭಾಗ ಬೇನಾಮಿಗಳು. ಬೇರೆ ಬೇರೆಯವರ ಹೆಸರಿನೊಳಗೆ, ಅಡಿಗೆಯವರ ಹೆಸರಿನೊಳಗೆ ಎಲ್ಲಾ ಕಂಟ್ರಾಕ್ಟ್ ತೆಗೆದುಕೊಳ್ಳುವುದು. ಅವನ ಹತ್ತಿರ ಸಮಯಕ್ಕೆ ಸರಿಯಾಗಿ ವಸೂಲ್ಮಾಡುವುದಿಲ್ಲ. ಎಕ್ಸೈಜ್ ಕಂಟ್ರಾಕ್ಟರ್ 2 ತಿಂಗಳು ಡಿಪಾಸಿಟ್ ಕಟ್ಟಬೇಕಾಗಿದ್ದು, 10 ತಿಂಗಳವರೆಗೆ ಸೆಕ್ಯುರಿಟಿ ಕೊಡಬೇಕಾಗಿತ್ತು. ಈಗ ಬ್ಯಾಂಕ್ ಗ್ಯಾರಂಟಿ ಎಂದು ಮಾಡಿ ಒಂದು ತಿಂಗಳ ಕಿಸ್ತ ತೆಗೆದುಕೊಳ್ಳುತ್ತಾರೆ. 10ನೇ ತಾರೀಖು ಕಿಸ್ತ ಕಟ್ಟಬೇಕು 15-20ನೇ ತಾರೀಖಿಗೆ ಹರಾಜು ಬಂದರೆ ಸರಿಹೋಗುತ್ತದೆ. ಸುಮ್ಮನೆ ಇದ್ದುಬಿಡುತ್ತಾರೆ. ಬಾಕಿಯಾದ ಮೇಲೆ, ಅವನು ಮನೆಗೆ ಹೋಗುತ್ತಾನೆ, ಆಗ ವಸೂಲಿಗೆ ನಮ್ಮನ್ನು ಕಳುಹಿಸುವುದು. ಅವರವರ ಇಲಾಖೆ ಅವರು ಮಾಡಿಕೊಳ್ಳಬೇಕು. ನೀರು ಸರಬರಾಜು ಮಾಡುವವರು, ನೀರಾವರಿ ಇಲಾಖೆಯವರು, ಬಾಕಿ ವಸೂಲ್ಮಾಡುವವರು ರೆವಿನ್ಯೂ ಇಲಾಖೆಯವರೇ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಜಾಲಪ್ಪನವರಿಗೆ ಕೋಪ ಬಂದರೆ, ಮಾತುಗಳು ಬಹಳ ಚೆನ್ನಾಗಿರುತ್ತವೆ. ಎಲ್ಲರ ಹಣ ದೊರುವುದಕ್ಕೆ ನಾನೊಬ್ಬನೇ ಎಂದರು. ನೀವು ಯಾವ ಯಾವ ಹಣ ಹೊರುತ್ತೀರಿ ಎಂಬುದನ್ನು ಹೇಳಿದರೆ, ಮಿಕ್ಕವರ ಹಣವನ್ನು ಯಾರು ಯಾರು ಹೊರಬೇಕೆಂದು ನಾವು ತೀರ್ಮಾನ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ಹಣ ಹೊರುವುದಕ್ಕೆ ಯಾರೂ ಭಯಪಡಬೇಕಾಗಿಲ್ಲ. ಮೊದಲಿನಹಾಗೆ, ಚಟ್ಟಕಟ್ಟಿ, ಹೆಗಲಮೇಲೆ ಹೊತ್ತುಕೊಂಡು ಹೋಗಬೇಕಾಗಿಲ್ಲ. ವ್ಯಾನಿಗೆ ಹಾಕಿದರೆ, ಹೊತ್ತು ಕೊಂಡು ಹೋಗುತ್ತವೆ, ಅದಕ್ಕೆ ಏಕೆ ಯೋಚನೆ ಮಾಡುತ್ತೀರಿ\

ಶ್ರೀ ಸಿದ್ಧರಾಮಯ್ಯ : ಇದು ಬಹಳ ವರ್ಷಗಳಿಂದ ಉಳಿದುಕೊಂಡು ಬಂದಿದೆ. ಎಕ್ಸೈಸ್ನಲ್ಲಿ ಬಾಕಿಯಾದರೂ ರೆವಿನ್ಯೂ ಇಲಾಖೆಯವರು ವಸೂಲ್ಮಾಡಬೇಕು, ಕಮರ್ಷಿಯಲ್ ಇಲಾಖೆಯಲ್ಲಿ ಬಾಕಿಯಾದರೂ, ರೆವಿನ್ಯೂ ಇಲಾಖೆಯವರೇ ವಸೂಲ್ಮಾಡಬೇಕು. ಈ ಬಾಕಿಗಳು ನಿನ್ನೆ ಮೊನ್ನೆಯದಲ್ಲ, ಬಹಳ ದಿನಗಳಿಂದ ಉಳಿದುಕೊಂಡು ಬಂದಿರುವಂತಹ ಬಾಕಿಗಳು. ಇವುಗಳನ್ನು ವಸೂಲ್ಮಾಡುವುದಕ್ಕಾಗುವುದಿಲ್ಲವೆಂದು ನೀವು ಹೇಳುವುದೂ ನಿಜ. ಆದರೆ, ಈ ರೀತಿ ವಸೂಲ್ಮಾಡುವುದಕ್ಕಾಗುವುದಿಲ್ಲವೆಂಬುವನ್ನೂ ಇದುವರೆಗೆ ವಜಾ ಮಾಡಿರಲಿಲ್ಲ. ಅದನ್ನು ಇಟ್ಟುಕೊಂಡು ವಸೂಲ್ಮಾಡುತ್ತೇವೆ, ವಸೂಲ್ಮಾಡುತ್ತೇವೆಂದು ಪುಸ್ತಕಗಳಲ್ಲಿ ಲೆಕ್ಕ ಬರೆದುಕೊಂಡು ಮುಂದುವರೆದುಕೊಂಡು ಹೋಗುತ್ತಾ ಇತ್ತು. ಈಗ ಅದನ್ನು ನಾವು ಮನ್ನಾ ಮಾಡಿದ್ದೇವೆ. ಇನ್ನೊಂದು ಮಾತನ್ನು ಸನ್ಮಾನ್ಯ ಖರ್ಗೆಯವರು ಏನು ಹೇಳಿದರೆಂದರೆ, ಮನೆಗಳು, ಸೈಟುಗಳು ನಾಶವಾದವು ಎಂದು ಹೇಳಿದರು. ಮಾನ್ಯಮುಖ್ಯ ಮಂತ್ರಿಗಳು ಕೂಡ ಅದನ್ನು ಹೇಳಿದ್ದಾರೆ. ಎಕನಾಮಿಕ್ ಸರ್ವೆಯಲ್ಲಿ ಇರುವ ಪ್ರಕಾರ, ನಿಮ್ಮ ವರದಿ ಪ್ರಕಾರ, ಏನು ಹೇಳಿದ್ದೀರಿ ಎಂದರೆ, ನೀವು ಬರೀ 30 ಸಾವಿರ ಮನೆ ಕಟ್ಟಿದ್ದೀರಿ, ಸೈಟ್ 9 ಸಾವಿರ ಕೊಟ್ಟಿದ್ದೀರಿ. ಈಗ ಅದು ಸ್ವಲ್ಪ ನಿಧಾನವಾಗಿದೆ. ಏಕೆಂದರೆ, ಫಲಾನುಭವಿಗಳನ್ನು ಆಯ್ಕೆ ಮಾಡಬೇಕು, ಗ್ರಾಮಸಭೆಯಿಂದ ಬರಬೇಕು, ಇವೆಲ್ಲಾ ತೊಂದರೆಯಾಗಿರುವುದರಿಂದ ತಾಲ್ಲೂಕು ಪಂಚಾಯ್ತಿಯಿಂದ ಬರಬೇಕು, ಇವೆಲ್ಲಾ ಸ್ವಲ್ಪ ಜಿಜ್ಞಾಸೆ ಇತ್ತು. ಈ ಕಾರಣಕ್ಕಾಗಿ ಸ್ವಲ್ಪ ತೊಂದರೆಯಾಯಿತು. ಈ ಸಾರಿ ನಾವೇನು 1 ಲಕ್ಷ 26 ಸಾವಿರ ಮನೆ ಕಟ್ಟುತ್ತೇವೆಂದು ಹೇಳಿದ್ದೇವೆ. ಅದರಲ್ಲಿ ಈವರೆಗೆ 36 ಸಾವಿರ ಮನೆಗಳನ್ನು ಪೂರ್ಣ ಮಾಡಿದ್ದೇವೆ. ಇನ್ನು ಉಳಿದ ಮನೆಗಳನ್ನು ಜೂನ್ ಒಳಗಡೆ ಮುಗಿಸುತ್ತೇವೆ. ನಿವೇಶನಗಳನ್ನೇನು ಕೊಡುತ್ತೇವೆಂದು ಹೇಳಿದ್ದೇವೆ, ಅವುಗಳನ್ನೂ ಕೂಡ ಜೂನ್ ಒಳಗೆ ಹಂಚುತ್ತೇವೆ. ಏಕೆಂದರೆ, ಹಿಂದೆ ಗೋಮಾಳ ಮತ್ತೊಂದು ತೆಗೆದುಕೊಂಡು ಸೈಟುಗಳನ್ನು ಹಂಚಿದರು. ಈಗ ನಾವು ದುಡ್ಡು ಕೊಟ್ಟು ತೆಗೆದುಕೊಂಡೇ ಸೈಟು ಹಂಚಬೇಕು, ಆ ಪರಿಸ್ಥಿತಿ ಇದೆ. 40-50 ಸಾವಿರ ಅಥವಾ ಒಂದು ಲಕ್ಷ ಈ ತರದ ದುಡ್ಡುಕೊಟ್ಟು, ನಿವೇಶನಗಳನ್ನು ಹಂಚಬೇಕಾಗಿದೆ. ಅದರಿಂದ ಸ್ವಲ್ಪ ನಿಧಾನವಾಗುತ್ತಾ ಇದೆ. ಈ ಸೈಟಿನ ವಿಚಾರವಾಗಿ ನಾವೇನು ಗುರಿ ಇಟ್ಟುಕೊಂಡಿದ್ದೇವೆ, ಆ ಗುರಿಯನ್ನು ತಲುಪುತ್ತೇವೆ. ಮುಂದಿನ ವರ್ಷ 1 ಲಕ್ಷ 30ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅದನ್ನೂ ಕೂಡ ಮಾಡುತ್ತೇವೆ. ಆದ್ದರಿಂದ, ಆ ದಿಕ್ಕಿನಲ್ಲಿ ಸ್ವಲ್ಪ ಕುಂಠಿತವಾಗಿದೆ ಎಂಬ ಮಾತನ್ನೂ ಹೇಳುತ್ತೇನೆ. ಇನ್ನೊಂದು ಮಾತನ್ನು, ಎಕ್ಸೈಸ್ ಬಗ್ಗೆ ಹೇಳಿದ್ದೀರಿ. ಬಜೆಟ್‌ನಲ್ಲಿ ಏನೂ ಹೇಳಲಿಲ್ಲ ಎಂದು. ಏಕೆಂದರೆ, ರಾಜ್ಯಪಾಲರ ಭಾಷಣದಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದೇವೆ. ಅದರಲ್ಲಿ ಏನು ಹೇಳಿದ್ದೇವೆಂದರೆ, ಗಂಭೀರವಾಗಿ, ಹಂತ ಹಂತವಾಗಿ ನಿಲ್ಲಿಸುವ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿದ್ದೇವೆ. ಇದಕಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಕೂಡ ರಚನೆಯಾಗಿದೆ. ಒಂದು ತಿಂಗಳಲ್ಲಿ ವರದಿ

ಕೊಡಬೇಕು. ಏಕೆಂದರೆ, 860 ಕೋಟಿ ನೀವು ತೋರಿಸಿದ್ದೀರಿ, ರೆವಿನ್ಯೂ ರಿಸೀಟ್ಸ್‌ನಲ್ಲಿ ರಿಸೋರ್ಸಸ್ ತೋರಿಸಿದೆ, ಇವನ್ನು ಹೇಗೆ ತಗಯುದಾಕುತ್ತೀರಿ ಎಂದು ಹೇಳಿದ್ದೀರಿ. ನಾವು ಸಾರಾಯಿ ನಿಲ್ಲಿಸುವುದರಿಂದ ಎಷ್ಟು ನಷ್ಟವಾಗುತ್ತದೆ ಅದನ್ನು ಹೇಗೆ ತುಂಬಿಕೊಳ್ಳಬೇಕು, ಬೇರೆ ರೂಪದಲ್ಲಿ ಎಷ್ಟು ರಿಸೋರ್ಸಸ್ ಮೊಬಿಲೈಸ್ ಮಾಡಬೇಕು. ಎಂಬುದಕ್ಕೋಸ್ಕರ ಒಂದು ಸಮಿತಿ ರಚನೆಯಾಗಿದೆ. ಆ ಸಮಿತಿ ವರದಿಕೊಟ್ಟಮೇಲೆ ಆ ವರದಿ ಆಧಾರದ ಮೇಲೆ ನಾವು ತೀರ್ಮಾನ ಮಾಡುತ್ತೇವೆ. ಅಲ್ಲಿಂದ, ನಾವು ಹೇಳಿರತಕ್ಕ ಮಾತಿಗೆ ಹಿಂದೆ ಹೋಗತಕ್ಕ ಪ್ರಶ್ನೆಯೇ ಇಲ್ಲವೆಂಬ ಮಾತನ್ನು ಹೇಳುತ್ತೇನೆ. ಇದರಿಂದ, ನಾನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅನೇಕ ಸದಸ್ಯರು, ಅನೇಕ ವಿಚಾರಗಳನ್ನು ಹೇಳಿದ್ದಾರೆ. ಎಲ್ಲಾ ಸದಸ್ಯರು ಹೇಳಿರತಕ್ಕ ವಿಚಾರಗಳಿಗೆ ಉತ್ತರ ಕೊಡಲಿಕ್ಕೆ ಸಾಧ್ಯವಾಗದಿರಬಹುದು, ಸಾಧ್ಯವಾದಷ್ಟು ಉತ್ತರ ಕೊಡುವ ಪ್ರಯತ್ನ ಮಾಡಿದ್ದೇನೆ. ಕೆಲವು ಸದಸ್ಯರು ಮೈದಾನ ಅಭಿವೃದ್ಧಿ ಮಂಡಲಿಗೆ ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಅದಕ್ಕೆ ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿ, ವಿಶೇಷವಾಗಿ ಕೆರೆಗಳ ಹೂಳು ತೆಗೆಸಬೇಕಾಗಿದೆ. ಆದಷ್ಟು ಹೆಚ್ಚು ಕೊಡುತ್ತೇವೆ.

11.30 ಎ.ಎಂ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಮುಖ್ಯ ಮಂತ್ರಿಗಳು 25 ರಿಂದ 30ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. ತಾವು ಹಣಕಾಸಿನ ಮಂತ್ರಿಗಳು ನಮಗೆ ಸದನದಲ್ಲಿ ಹೇಳಿಬಿಟ್ಟರೆ ಅನುಕೂಲ. ನಾವೆಲ್ಲ ಬಯಲು ಸೀಮೆಯವರು........

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದಂತಾದ್ದಕ್ಕೆ ಹತ್ತಿರ ಹತ್ತಿರವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕೆರೆಗಳ ಹೂಳವನ್ನು ಎತ್ತುವಂಥಾದ್ದಕ್ಕೆ ಹೆಚ್ಚು ಹಣವನ್ನು ವಿನಿಯೋಗ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಕೆರೆಗಳನ್ನು ಹೂಳೆತ್ತುವುದಕ್ಕೆ ನಾವು ಮೊನ್ನೆ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಂಡೆವು. ಅವರು ಕನಿಷ್ಠ 25 ರಿಂದ 30 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಆಶ್ವಾಸನೆ ಕೊಟ್ಟಿದ್ದಾರೆ. ಹಣಕಾಸಿನ ಮಂತ್ರಿಗಳು ಸದನದಲ್ಲಿ ಹೇಳಿದರೆ ನಮಗೆ ಗ್ಯಾರಂಟಿಯಾಗಿ ನಂಬಿಕೆ. ನಾನು ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ. ತಾವು ದಯವಿಟ್ಟು ಈ ಸದನದಲ್ಲಿ ಅವರ ಕೈಯ್ಯಲ್ಲಿ ಹೇಳಿಸಿ ಬಿಟ್ಟರೆ ಸಾಕು.

ಶ್ರೀ ಸಿದ್ಧರಾಮಯ್ಯ : ಮುಖ್ಯಮಂತ್ರಿಗಳು ಈಗಾಗಲೆ ಹೇಳಿದ್ದಾರೆ. ಮಾಡೋಣ, ಸೀಮ

ಎಣ್ಣೆಯದು 6 ರಿಂದ 8 ಮಾಡಿರುವುದರ ಬಗ್ಗೆ ಮಾನ್ಯ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಆದ್ದರಿಂದ ಅದನ್ನು ಮತ್ತೆ 6 ಪರ್ಸೆಂಟ್‌ಗೆ ಇಳಿಸಿದ್ದೇವೆ. ಪವರ್ ಟಿಲ್ಲರ್‌ಗೆ 4 ಆಗಿದ್ದು ಮತ್ತ ಅದನ್ನು 2ಕ್ಕೆ ಇಳಿಸಿದ್ದೇವ.

ಶ್ರೀ ಕೆ.ಎಸ್. ಈಶ್ವರಪ್ಪ : ಎಂಟ್ರಿ ಟ್ಯಾಕ್ಸ್ ಮಾಡಿದ್ದೀರಿ ಮ್ಯಾನುಫ್ಯಾಕ್ಚರ್ ಪಾಯಿಂಟಿಗೆ 1 ಪರ್ಸೆಂಟ್ ಆಯಿತು. ಟಿಲ್ಲರ್ ಪಾಯಿಂಟಿಗೆ ಒಂದು ಪರ್ಸೆಂಟ್ ಆಯಿತು ಎರಡು ಪರ್ಸೆಂಟ್ ತೆರಿಗೆ ಆ ಪವರ್ ಟಿಲ್ಲರ್‌ಗೆ ಬೀಳುತ್ತಿದೆ.

ಶ್ರೀ ಸಿದ್ಧರಾಮಯ್ಯ : ಬೇರೆ ರಾಜ್ಯಗಳಿಂದ ಕೊಂಡು ಕೊಂಡು ಬರತಕ್ಕಂತಹವರಿಗೆ ಎಂಟ್ರಿ ಟ್ಯಾಕ್ಸ್ ಇರಲಿ ಎಂದು ಇಟ್ಟಿದ್ದೇವೆ. ಇಲ್ಲಿ ಸೇಲ್ಸ ಟ್ಯಾಕ್ಸ ಕೊಟ್ಟವರಿಗೆ ಎಂಟ್ರಿ ಟ್ಯಾಕ್ಸ್ ಇಲ್ಲ. ಎಂಟ್ರಿ ಟ್ಯಾಕ್ಸ್ ಕೊಟ್ಟವರಿಗೆ ಸೇಲ್ಸ್ ಟ್ಯಾಕ್ಸ್ ಇಲ್ಲ. ಆದರಿಂದೇನು ತೊಂದರೆಯಾಗುವುದಿಲ್ಲ. ಹೊರಗಡೆಯಿಂದ ಬರುವವರಿಗೆ ಎಂಟ್ರಿ ಟ್ಯಾಕ್ಸ್ ಬರುತ್ತದೆ. ನಮ್ಮ ರಾಜ್ಯದವರಿಗೆ ಎಂಟ್ರಿ ಟ್ಯಾಕ್ಸ್ ಇಲ್ಲ. ಇಷ್ಟು ವಿಚಾರಗಳನ್ನು ನಾನು ಸದನದ ಮುಂದಿಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ದಿನಾಂಕ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಲೇಖಾನುದಾನ 1ರಿಂದ 60ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ದಿನಾಂಕ 31-3-1996ರಂದು ಕೊನೆಗೊಳ್ಳುವ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊದಲು ಕ್ಲಾರಿಫಿಕೇಷನ್ ಕೇಳಿ ನಂತರ ಪಾಸ್ ಮಾಡಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, 6 ತಿಂಗಳವರೆಗೆ ನಾವು ಲೇಖಾನುದಾನ ಕೇಳಿದ್ದೇವೆ. ಬಿಜಿನೆಸ್ ಅಡ್ವೈಸರ್ ಸಮಿತಿಯಲ್ಲಿ ಮಾನ್ಯ ಮಂತ್ರಿಗಳು 4 ತಿಂಗಳೆಂದು ಹೇಳಿರುವುದು ನಿಜ. ಆದರೆ ಏನಾಗಿದೆ ಎಂದರೆ ಲೇಖಾನುದಾನ, ಅಪ್ರೊಪ್ರಿಯೇಷನ್ ಬಿಲ್‌ನಲ್ಲಿ ಗೌರವಾನ್ವಿತ ಗವರ್ನರ್ ಅವರಿಗೆ ಎಲ್ಲ ತಿಳಿಸಿ ಎಲ್ಲಾ ಪುಸ್ತಕಗಳಲ್ಲಿ 6 ತಿಂಗಳೆಂದು ಪ್ರಿಂಟ್ ಆದ ಕಾರಣದಿಂದ ಅದನ್ನು ಮತ್ತೆ ಪ್ರಿಂಟ್ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಮಾನ್ಯ ಖರ್ಗೆಯವರನ್ನು, ವೈ. ರಾಮಕೃಷ್ಣ ಅವರನ್ನು ಶ್ರೀಮಾನ್ ಯಡಿಯೂರಪ್ಪನವರು ಅಂದು ಇರಲಿಲ್ಲ ಎಲ್ಲ ವಿರೋಧಿ ಪಕ್ಷದ ಮುಖಂಡರುಗಳನ್ನು ಬೇರೆ ಪಕ್ಷದ ಮುಖಂಡರುಗಳನ್ನು ಮನವಿ ಮಾಡಿಕೊಂಡಿದ್ದೆ. ಆದ್ದರಿಂದ 6 ತಿಂಗಳಿಗೆ ತಾವು ಒಪ್ಪಿಗೆ ಕೊಡಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 4 ತಿಂಗಳದ್ದು ಎಂದು ಎಲ್ಲರೂ ಒಪ್ಪಿಕೊಂಡಿದ್ದೆವು.

ಮತ್ತೆ ಇವರು ಕೈಗೆ ಸಿಗುವುದಿಲ್ಲ. 6 ತಿಂಗಳು ಅಂದರೆ ಇವರು ಸಭೆ ಕರೆಯುವುದು 6 ತಿಂಗಳ ಮೇಲೆಯೇ.

ಶ್ರೀ ಕೆ.ಎನ್. ನಾಗೇಗೌಡ : ರಾಜ್ಯಾಂಗಬದ್ಧವಾಗಿ 6 ತಿಂಗಳು ತೆಗೆದುಕೊಂಡರೆ ಮಾಡಲೇಬೇಕಲ್ಲವೇ? It may be taken for 3 months, it may be taken for six months. Now he has taken vote on account for six months.

SRI M. MALLIKARJUNA KHARGE : Alright we have agreed for four months.

SRI K.N.NAGEGOWDA : You move a resolution. Let the House take vote on account and pass it...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ೪ ತಿಂಗಳಿಗೆ ಲೇಖಾನುದಾನವೆಂದು ಒಪ್ಪಿಕೊಂಡಿದ್ದೀರಿ ಅದನ್ನು ನೀವು ಇಲ್ಲಿ ಮೂವ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ಮತ್ತೆ ನಾವು ಸೇರುವುದು ಅಸಂಭವವಾಗಬಹುದು ಬೇರೆ ಬೇರೆ ಕಾರಣಕ್ಕೋಸ್ಕರ ವಿಳಂಬವಾಗಬಹುದು ಸಮಸ್ಯೆಯಾಗಬಹುದು. ಅದಕ್ಕೋಸ್ಕರ 4 ತಿಂಗಳಿಗೆ ಮಾತ್ರ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತೇವೆಂದು ಹೇಳಿ ಅದರ ಬಗ್ಗೆ ಚರ್ಚೆಯಾಗಿ ಒಪ್ಪಿಗೆಯಾಗಿದೆ. ನಾವು ಇಲ್ಲಿ ಒಪ್ಪಿಗೆ ಕೊಡುವಂಥಾದ್ದು, ಅಲ್ಲೇನು ತೀರ್ಮಾನವಾಯಿತು ಅದರ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದು ಒಳ್ಳೆಯದು.

ಶ್ರೀ ಸಿದ್ಧರಾಮಯ್ಯ : ಅವತ್ತು ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ಚರ್ಚೆ ಆಗುವ ಹೊತ್ತಿಗೆ ಗವರ್ನರ್ ಅವರನ್ನು ಭೇಟಿ ಮಾಡಿ ಆಗಿತ್ತು. ಜೊತೆಗೆ ಲೇಖಾನುದಾನದ ಅಪ್ರೊಪ್ರಿಯೇಷನ್ ಬಿಲ್ ಕೂಡ 6 ತಿಂಗಳಿಗೆಂದು ಲೆಕ್ಕ ಹಾಕಿ ಪ್ರಿಂಟ್ ಮಾಡಿದ್ದಾರೆ. ನಮಗೆ 4 ತಿಂಗಳಿಗೆ ಲೇಖಾನುದಾನ ತೆಗೆದುಕೊಳ್ಳುವುದಕ್ಕೇನು ತೊಂದರೆ ಇರಲಿಲ್ಲ. 4 ತಿಂಗಳಿಗೆ ತೆಗೆದುಕೊಳ್ಳಬಹುದಿತ್ತು. ಆದರೆ 6 ತಿಂಗಳಿಗೆ ಎಂದು ಪುಸ್ತಕಗಳಲ್ಲಿ ಬಂದಿರುವುದರಿಂದ ಮತ್ತೆ ಅದನ್ನು ಬದಲಾಯಿಸಿ ಪ್ರಿಂಟ್ ಮಾಡುವುದಕ್ಕೆ ಉಳಿದ ಎರಡು ದಿನಗಳಲ್ಲಿ ಆಗಲಿಲ್ಲ. ಅವತ್ತು ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ಬರುವುದಕ್ಕೆ ನನಗೆ ಕೂಡ ಸಾಧ್ಯವಾಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಗೊತ್ತಿಲ್ಲದೆ ಅದನ್ನು ಹೇಳಿದ್ದಾರೆ, ಅದನ್ನು ನಾನು ಅಲ್ಲಗಳೆಯುವುದಿಲ್ಲ. ಅವರು ಒಪ್ಪಿಲ್ಲವೆಂದು ಹೇಳುವುದಿಲ್ಲ. ಇದು ಪ್ರಿಂಟ್ ಆಗಿರುವುದರಿಂದ ದಯವಿಟ್ಟು ಒಪ್ಪಿಗೆ ಕೊಡಿ ಎಂದು ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ. ಜೂನ್‌ನಲ್ಲಿ ಯಾವಾಗಲೂ ಅಧಿವೇಶನವನ್ನು ಕರೆಯುತ್ತೇವೆ. 6 ತಿಂಗಳಿಗೆ ಲೇಖಾನುದಾನ ತೆಗೆದುಕೊಂಡಿದ್ದೇವೆಂದು ಸದನ ಕರೆಯುವುದನ್ನು ಮುಂದಕ್ಕೆ ಹಾಕಬೇಕಾದ ಅಗತ್ಯ ಇಲ್ಲ. ನೀವು ಯಾವಾಗ ಅಧಿವೇಶನ ಕರೆಯಬೇಕೆಂದು

ಹೇಳುತ್ತೀರಿ ,ಆಗ ಸಭೆ ಸೇರೋಣ. 6 ತಿಂಗಳು ತೆಗೆದು ಕೊಂಡಿದ್ದೇವೆಂದು ಮುಂದಕ್ಕೆ ಹೋಗಬೇಕಾದ ಅಗತ್ಯ ಇಲ್ಲ. ಯಾವಾಗ ಕರೆಯಬೇಕೆಂದರೂ ಸಭೆ ಕರೆದು ಚರ್ಚೆ ಮಾಡೋಣ. ನಾನು ಏಕೆ 6 ತಿಂಗಳು ಎಂದು ಹಾಕಿದೆ ಅಂದರೆ ಲೋಕಸಭಾ ಚುನಾವಣೆ ಇರುವುದರಿಂದ ವಿಷಯ ಸಮಿತಿಗಳು ಪರಿಶೀಲನೆ ಮಾಡಬೇಕು, ಸಾಮಾನ್ಯವಾಗಿ ಚುನಾವಣೆಯಾದ ಮೇಲೆ ಸದಸ್ಯರು ಫ್ರೀಯಾಗುತ್ತಾರೆ, ಅದು ಕೂಡ ನಿಧಾನವಾಗಬಹುದು ಎಂಬ ಕಾರಣಕ್ಕಾಗಿ 6 ತಿಂಗಳ ಲೇಖಾನುದಾನ ಕೋರಿದ್ದು. ಕಳೆದ ವರ್ಷವೂ ಕೂಡ 6 ತಿಂಗಳ ಲೇಖಾನುದಾನ ತೆಗದುಕೊಂಡಿದ್ದೇವೆ. ಅನೇಕ ಸಾರಿ ಈ ಸದನಸಲ್ಲಿ 6 ತಿಂಗಳ ಲೇಖಾನುದಾನ ತೆಗೆದುಕೊಂಡಿರತಕ್ಕ ಬಹಳಷ್ಟು ಉದಾಹರಣೆಗಳು ಇವೆ. ಆ ಕಾರಣದಿಂದ ದಯಮಾಡಿ ಎಲ್ಲರೂ ಒಪ್ಪಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ರೈತನ ದೃಷ್ಟಿಯಿಂದ ಒಂದೆರಡು ಸಲಹೆ ಮಾತ್ರ ಹೇಳುತ್ತೇನೆ. ವಿದ್ಯುತ್ ಬರದಿಂದ ರೈತರು ಬಹಳ ತೊಂದರೆಯಲ್ಲಿದ್ದಾರೆ. ನೀವು ಡೀಸೆಲ್ ಜನರೇಟರಿಗೆ 10 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೀರಿ. ತಾವು ಅಂಕಿ ಅಂಶ ತೆಗೆದು ನೋಡಿ. ನೂರಕ್ಕೆ ಒಬ್ಬ ರೈತ ಇದರ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಓಡಾಟಕ್ಕೇ 2-3 ಸಾವಿರ ಖರ್ಚಾಗುತ್ತದೆ. ಆದುದರಿಂದ ದಯಮಾಡಿ ಕನಿಷ್ಠ ಪಕ್ಷ 50 ಪರ್ಸೆಂಟ್ ಡೀಸೆಲ್ ಜನರೇಟರ್‌ಗೆ ಸಬ್ಸಿಡಿ ಕೊಡುವ ಘೋಷಣೆಯನ್ನು ತಾವು ಈಗ ಮಾಡಬೇಕು. ಎರಡನೆಯದು ಎಂದೂ ಇಲ್ಲದ ಕಬ್ಬನ್ನು ಬೆಳೆದಂತಹ ರೈತರ ಸಮಸ್ಯೆ ಇವತ್ತು ಕಾಡುತ್ತಿದೆ ಸಾಗಾಣಿಕೆ ವೆಚ್ಚದ ಪ್ರಶ್ನೆ ಬರುತ್ತಿದೆ. ಹೊರ ರಾಜ್ಯಗಳಿಗೆ ಹೋಗುವುದು ಒಂದು ಜಿಲ್ಲೆಯಿಂದ ಬಹುದೂರ ಹೋಗುವಂಥ ಆ ಟ್ರಾನ್ಸ್‌ಪೊರ್ಟೇಷನ್ ಚಾರ್ಜು ಏನು ಇದೆ ಅದನ್ ಇದೊಂದು ಸಾರಿ ಸರಕಾರ ಭರಿಸಬೇಕು. ಇಳುವರಿಯಲ್ಲಿ ರೈತರಿಗೆ ಇವತ್ತು 50 ಪರ್ಸೆಂಟ್ ಕಡಿಮೆಯಾಗಿದೆ ಒಣಗಿ ಹೋಗಿದೆ. ಒಂದು ಲಾರಿಯಲ್ಲಿ 12 ಟನ್ ತೂಗುವ ಕಬ್ಬು ಇವತ್ 7-8 ಟನ್ ಬರುತ್ತಿಲ್ಲ. ಸರಕಾರ ಈ ಸಾಗಾಣಿಕೆ ವೆಚ್ಚವನ್ನು ಭರಿಸಿದರೆ ರೈತನಿಗೆ ಅದ ಉಪಯೋಗವಾಗುತ್ತದೆ. ದಯವಿಟ್ಟು ಆ ಅನುಕೂಲತೆಯನ್ನು ರಾಜ್ಯದ ರೈತರಿ ಮಾಡಿಕೊಡಬೇಕು. ಗ್ರಾಮೀಣ ಒಕ್ಕಲುತನಕ್ಕೆ ಬೇಕಾದ ಸಲಕರಣೆಗಳ ಮೇಲಿನ ಮಾರಾ ತೆರಿಗೆ ಏನು ಇದೆ ಅದು ಬಹುಶ ಇಡೀ ದೇಶದಲ್ಲಿ ಬೇರೆ ಯಾವುದೇ ರಾಜ್ಯದಲ್ಲಿ ಇಲ್ ಮಹಾರಾಷ್ಟ್ರದಲ್ಲಿ ಮಾರಾಟ ದರ ಶೇಕಡ 2ರಷ್ಟು ಇದೆ, ಅಲ್ಲಿ ಸರ್‌ಚಾರ್ಜು ಇ ಮಧ್ಯಪ್ರದೇಶದಲ್ಲಿ ಶೇಕಡ 2 ರಷ್ಟು ಇದೆ. ಆದರೆ ಕರ್ನಾಟಕದಲ್ಲಿ ಶೇಕಡ 10 ಮತ ಸರ್‌ಚಾರ್ಜು ಶೇಕಡ 15 ರಷ್ಟು ಇದೆ. ಟ್ರಾಕ್ಟರ್ ಆಗಲಿ ಟಿಲ್ಲರ್ ಆಗಲೀ ಅದಕ್ಕೆ ಬೇಕಾ ಉಪಕರಣಗಳು ಬೇಕು ಎಂದಾಗ 11.5 ಪರ್ಸೆಂಟ್ ಮಾರಾಟ ತೆರಿಗೆಯನ್ನು ಕೊಡುವಂತ ಪರಿಸ್ಥಿತಿ ಬಂದಿದೆ. ಇದು ರೈತನ ಮೇಲೆ ಆಗುವಂಥ ದುಷ್ಪರಿಣಾಮ. ಆದುದರಿಂದ ಇದ ರದ್ದು ಮಾಡಬೇಕು. ಬೇರೆ ಯಾವುದೇ ರಾಜ್ಯದಲ್ಲಿ ಇಲ್ಲದೇ ಇರುವಾಗ ಇಲ್ಲಿ ಹಾಕುವು ಸರಿಯಲ್ಲ. ಎಲ್ಲರಿಗೂ ಅನುಕೂಲ ಮಾಡಿಕೊಟ್ಟಾಗ ರೈತರಿಗೆ ಇದೊಂದು ಅನುಕೂಲ ಮಾ

ಕೊಡಬೇಕು. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ. ಪೂರಕ ಅಂದಾಜಿನ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕಾಗಲಿಲ್ಲ, ಚಿಂತೆ ಇಲ್ಲ. ಹೊಸ ಸಕ್ಕರೆ ಕಾರ್ಖಾನೆಗಳಿಗೆ ಹಣ ಕೊಟ್ಟಿರುವುದರಲ್ಲಿ ಪೂರಕ ಅಂದಾಜಿನಲ್ಲಿ ಚುಂಚನಕಟ್ಟೆ ಕಾರ್ಖಾನೆಗೆ 1 ಕೋಟಿ ಕೊಟ್ಟಿದ್ದೀರಿ, ಇನ್ನೊಂದು ಗಂಗಾವತಿ ಸಕ್ಕರೆ ಕಾರ್ಖಾನೆಗೆ ಕೊಟ್ಟಿದ್ದೀರಿ. ಕೇಂದ್ರ ಸರಕಾರದವರು 4 ನೂತನ ಸಕ್ಕರೆ ಕಾರ್ಖಾನೆಗಳಿಗೆ 1993ರಲ್ಲೇ ಲೆಟರ್ ಆಫ್ ಇಂಡೆಂಟ್ ಅನ್ನು ಕೊಟ್ಟಿದ್ದಾರೆ. ಅವರಿಗೆ ಏನು ಅನುಕೂಲವನ್ನೂ ನೀವು ಇದುವರೆಗೆ ಘೋಷಣೆ ಮಾಡಿಲ್ಲ. ಕಾರಂಜ ಸಕ್ಕರೆ ಕಾರ್ಖಾನೆ, ಬೀದರ್ ಇದು ಅರ್ಧಕ್ಕೆ ನಿಂತು ಹೋಗಿದೆ. ಇದಕ್ಕೂ ಸಹ ಇವತ್ತು ರಾಜ್ಯ ಸರಕಾರದ ಪಾಲೇನು ಇದೆ ಅದನ್ನು ಕೊಡುವ ಘೋಷಣೆಯನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕು. ಅದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಸಾಮಾನ್ಯ ಜನರು ಉಪಯೋಗ ಮಾಡುವಂತಹ ಮಿಕ್ಸರ್, ಗ್ರೈಂಡರ್ ಏನು ಇದೆ ಅದರ ಬಗ್ಗೆ ವಿಚಾರ ಮಾಡಬೇಕು. ತಾವು ಬುದ್ಧಿವಂತರಿದ್ದೀರಿ. ನಾನು ಪ್ರಾರಂಭದಲ್ಲಿ ಭಾಷಣ ಮಾಡುವಾಗ ಹೇಳಿದೆ. ಸೀಮೆಎಣ್ಣೆ ಬಗ್ಗೆ, ಟ್ರಾಕ್ಟರ್, ಟಿಲ್ಲರ್ ಬಗ್ಗೆ ಕೇಳುವುದಿಲ್ಲ. ಏಕೆಂದರೆ ಅದನ್ನು ನೀವು ಮಾಡಬೇಕು. ನಾವು ಹೇಳಿದ ಹಾಗಾಯಿತು ನೀವು ಕೊಟ್ಟೆವು ಎಂದು ಪತ್ರಿಕೆಯಲ್ಲಿ ಬರಬೇಕೆಂದು ನಿಮ್ಮ ಧೋರಣೆ ಆ ರೀತಿ ಇರಬಾರದು. ರೈತರ ಮಕ್ಕಳಾಗಿ ಅಲ್ಲಿ ಕುಳಿತಾಗ, ಅವಕಾಶ ಸಿಕ್ಕಾಗ ಹೇಳುವುದು ವಾಪಸ್ ತೆಗೆದುಕೊಂಡೆವೆಂದು ಪತ್ರಿಕೆಯಲ್ಲಿ ಬಂದರೆ ಅವರಿಗೂ ನಮಗೂ ಸಮಾಧಾನವೆನ್ನುವ ಪದ್ಧತಿ ಬೇಡ. ಕೊನೆ ಪಕ್ಷ ಮಿಕ್ಸರ್ ಗ್ರೈಂಡರಗೆ ಮೊದಲು ಇದ್ದುದಕ್ಕೇ ಇಳಿಸುವ ಕೆಲಸ ಮಾಡಬೇಕು. ಮಾರಾಟ ತೆರಿಗೆ ಟ್ರ್ಯಾಕ್ಟರ್, ಟಿಲ್ಲರ್ ಗೆ ಅಗತ್ಯವಿರುವ ಸಾಮಗ್ರಿಗಳನ್ನು ತೆಗೆದುಕೊಳ್ಳುವುದೇನು ಇದೆ ಅದನ್ನು ಪೂರ್ಣ ತೆಗೆದು ಹಾಕಬೇಕು.

ಶ್ರೀ ಸಿದ್ಧರಾಮಯ್ಯ:- ಮಾನ್ಯ, ಅಧ್ಯಕ್ಷರೆ, ಕೆಲವು ರಿಯಾಯಿತಿಗಳನ್ನು ಕೊಡಬೇಕೆನ್ನುವುದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮಾತನಾಡಿದ್ದಾರೆ. ಕಬ್ಬು ಬೆಳೆಗಾರರಿಗೆ ನಾವು ಈಗಾಗಲೇ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಟ್ರಾನ್ಸಪೋರ್ಟೇಷನ್‌ಗೆ ಪರ್ ಕಿಲೋಮೀಟರ್ 50 ಪೈಸೆ ಸಬ್ಸಿಡಿ ಕೊಡಬೇಕೆಂದು ಮತ್ತು ಇನ್‌ಸೆಂಟೀವನ್ನು 12 ರೂಪಾಯಿಗಳಿಂದ 15 ರೂಪಾಯಿಗೆ ಏರಿಸಿದ್ದೇವೆ. 200 ಕಿಲೋಮಿಟರ್ ದೂರದವರೆಗೆ ಕಬ್ಬನ್ನು ಸಾಗಿಸುವುದಕ್ಕೆ ಒಂದು ಕಿಲೋಮೀಟರ್‌ಗೆ 50 ಪೈಸೆ ಸಬ್ಸಿಡಿ ಕೊಡುವ ಬಗ್ಗೆ ಈಗಾಗಲೇ ಗೌರ್ನಮೆಂಟ್ ಆರ್ಡರ್ ಆಗಿದೆ. ಜೊತೆಗೆ ಪರ್ಚೇಸ್ ಟ್ಯಾಕ್ಸ ಎಕ್ಸವರಷನ್ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡೀಸೆಲ್ ಜನರೇಟರುಗಳಿಗೆ 50 ಪರ್ಸೆಂಟ್ ಸಬ್ಸಿಡಿ ಕೊಡುವ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರು ಹೇಳಿರುವುದರ ಬಗ್ಗೆ ನಾವು

ಬಹಳ ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೆ. ಆದರಿಂದ ಎಷ್ಟು ತೆರಿಗೆ ಬರುತ್ತದೆ ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಬಹಳ ದೀರ್ಘವಾಗಿ ಫೈನಾನ್ಸ್ ಮಿನಿಸ್ಟರ್ ಉತ್ತರ ಕೊಟ್ಟಿದ್ದಾರೆ. ಮಾನ್ಯ ಅರ್ಥ ಸಚಿವರೇ ತಮ್ಮ ಆನ್ಯುಯಲ್ ಫೈನಾನ್ಶಿಯಲ್ ಸ್ಟೇಟ್‌ಮೆಂಟ್, ಬಜೆಟ್ 1996-97ರಲ್ಲಿ ಪೇಜ್ 5 ಪ್ಯಾರಾ 3ರಲ್ಲಿ ಹೇಳಿದ ಹಾಗೆ ಸ್ಟೇಟ್ ಎಕ್ಸೈಸ್‌ನಲ್ಲಿ ಗುರಿ ಇರತಕ್ಕಂಥಾದ್ದು 830 ಕೋಟಿ ರೂಪಾಯಿಗಳು, ಸರ್ಕಾರ ಸಾಧನೆ ಮಾಡಿದ್ದುದು 780 ಕೋಟಿ ರೂಪಾಯಿಗಳು, ಅಂದರೆ 50 ಕೋಟಿ ರೂಪಾಯಿಗಳ ವ್ಯತ್ಯಾಸ ಇದೆ. ಅದೇ ರೀತಿ ಮಾರಾಟ ತೆರಿಗೆ, ವಾಹನ ತೆರಿಗೆಯಲ್ಲೂ ರಿಡಕ್ಷನ್ ಇಲ್ಲ. ಎಕ್ಸೈಸ್‌ನಲ್ಲಿ 50 ಕೋಟಿ ರೂಪಾಯಿ ಸೋರಿಕೆಯಾಗುವುದಕ್ಕೆ ಏನು ಕಾರಣ? ಸೆಕೆಂಡ್ಸ್ ಮಾರಾಟ ಮಾಡುತ್ತಿರುವುದರಿಂದ ಇದು ಹೋಗಿದೆಯೋ ಅಥವಾ ಡಿಸ್ಟಿಲರಿಗಳಿಗೆ ರಿಯಾಯಿತಿ ಕೊಟ್ಟಿರುವುದರಿಂದ ಈ 50 ಕೋಟಿ ರೂಪಾಯಿ ಹೋಗಿದೆಯೋ ಎಂದು ತಿಳಿಸಬೇಕು. ಇನ್ನು ಎರಡನೆಯದಾಗಿ ತಾವು ಹೇಳಿದಿರಿ, ನಾವು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಎಲ್ಲಾ ಕಡೆ ಮಾಡಿದ್ದೇವೆ, ಹಣದ ಕೊರತೆ ಇರಲಿಲ್ಲ. ಖಜಾನೆ ತುಂಬ ತುಳುಕುತ್ತಿತ್ತು, ಹಿಂದೆ ಬಿಲ್ ಕೂಡ ಪಾವತಿಯಾಗುತ್ತಿರಲಿಲ್ಲ. ಜನ ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದರು ಎಂದು ಹೇಳಿದಿರಿ. ತಾವು ಡೀಟೇಲ್ಸ್ ಅಫ್ ಪ್ರಾವಿಷನ್, ಎಕ್ಸ್‌ಪೆಂಡೀಚರ್ ಎನ್ನುವ ಇನ್ನೊಂದು ಪುಸ್ತಕವನ್ನು ನಮಗೆ ಕೊಟ್ಟಿದೀರಿ. ಈ ಪ್ಲಾನ್ ಎಕ್ಸಪೆಂಡೀಚರ್‌ನಲ್ಲಿ ಕರ್ನಾಟಕ ಪವರ್ ಕಾರ್ಪೋರೇಷನ್‌ಗೆ 255 ಕೋಟಿ ಇಟ್ಟಿದ್ದರೆ ನೂರು ಕೋಟಿ ಮಾತ್ರ ಖರ್ಚು ಮಾಡಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಗೆ 203 ಕೋಟಿ ಗುರಿ ಇದ್ದರೆ 77 ಕೋಟಿ ಮಾತ್ರ ಖರ್ಚು ಮಾಡಿದ್ದಾರೆ, ಹೌಸಿಂಗ್ ಬೋರ್ಡನಲ್ಲಿ 33 ಕೋಟಿ ರೂಪಾಯಿ ಗುರಿ ಇದ್ದರೆ 7 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಅದೇ ರೀತಿಯಾಗಿ ಕೃಷ್ಣ ಜಲ ಭಾಗ್ಯ ನಿಗಮದಲ್ಲಿ 300 ಕೋಟಿ ಇದ್ದರೆ 180 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ನಾನು ಏಕೆ ಇದನ್ನು ಹೇಳುತ್ತೇನೆಂದರೆ, ನೂರಾರು ಕೋಟಿ ರೂಪಾಯಿಗಳು ಖರ್ಚಾಗದೆ ಉಳಿದಿದೆ. ಸರ್ಕಾರ ಗುರಿಯನ್ನು ಹೆಚ್ಚಿಗೆ ತೋರಿಸಿದೆ ಖರ್ಚು ಮಾತ್ರ ಕಡಿಮೆ ಮಾಡಿದ್ದಾರೆ. ಖಜಾನೆಯಲ್ಲಿ ಹಣ ಇಲ್ಲದಿದ್ದರೆ, ಬಿಲ್ ಕೊಡಿ ಎಂದು ನಿಮ್ಮ ಹತ್ತಿರ ಬಂದು ಆ ಜನರು ಅಡ್ಡಾಡುತ್ತಾರೆಯೇ? ಎಲ್ಲಿ ತಪ್ಪು ಇದೆಯೋ ಅದನ್ನು ಒಪ್ಪಿಕೊಳ್ಳಬೇಕು, ಸೇಲ್ಸ್ ಟ್ಯಾಕ್ಸ್‌ನಲ್ಲಿ ಈಕ್ವೆಲ್ ಕಲೆಕ್ಷನ್ ಮಾಡಿದ್ದೀರಿ, ಅದನ್ನು ಬೇಕಾದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಅದೇ ಎಕ್ಸೈಸ್‌ನಲ್ಲಿ ಮಾಡಲಿಲ್ಲ, ಅದನ್ನು ನೀವು ಕೆಲವು ಕಡೆ ವೆಲ್‌ಫೇರ್ ಸ್ಕೀಮ್‌ನಲ್ಲಿ ಮಾಡಿರಬಹುದು. ಆದರೆ, ಹೌಸಿಂಗ್‌ನಲ್ಲಿ ಮಾಡಿಲ್ಲ, ಪವರ್‌ನಲ್ಲಿ ಮಾಡಿಲ್ಲ, ಎಲೆಕ್ಟ್ರಿಸಿಟಿಯಲ್ಲಿ ಇಲ್ಲ. ಇದನ್ನೆಲ್ಲಾ ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಈಗಾಗಲೇ ಅದಕ್ಕೆ 650 ಕೋಟಿ ರೂಪಾಯಿ ಕೊರತೆ ಇದೆ. ನೀವು ಬೇರೆ ಸ್ಕೀಮ್‌ಗಳ ಮೇಲೆ ಡಿಪೆಂಡೆಂಟ್ ಆಗಿದ್ದೀರಿ, ಇದರ ಬಗ್ಗೆ ತಾವು ಉತ್ತರ ಹೇಳಬೇಕಾಗುತ್ತದೆ. ಆಮೇಲೆ, ಸ್ಟೇಟ್ ರೆವಿನ್ಯೂನಿಂದ ಬರತಕ್ಕಂಥಾದ್ದು 51 ಪರ್ಸೆಂಟ್ ಉಳಿದ 49 ಪರ್ಸೆಂಟ್‌ನಲ್ಲಿ

11 ಪರ್ಸೆಂಟ್ ಲೋನ್, 11 ಪರ್ಸೆಂಟ್ ಸೆಂಟ್ರಲ್ ಅಸಿಸ್ಟೆನ್ಸ್, 2 ಪರ್ಸೆಂಟ್ ಕ್ಯಾಪಿಟಲ್ ರಿಸಿಟ್ಸ್‌ನಿಂದ ಬರತಕ್ಕಂಥಾದ್ದು, 10 ಪರ್ಸೆಂಟ್ ನಾನ್ ಟ್ಯಾಕ್ಸ್ ರೆವಿನ್ಯೂನಿಂದ ಬರತಕ್ಕಂಥಾದ್ದು, 14 ಪರ್ಸೆಂಟ್, ಸೆಂಟ್ರಲ್ ಎಕ್ಸೈಸ್‌ನಿಂದ ಷೇರ್ ಬರತಕ್ಕಂಥಾದ್ದು ಅಂದರೆ ಇರತಕ್ಕಂಥ 51 ಪರ್ಸೆಂಟ್‌ನಲ್ಲಿ ಇಂಟರನಲ್ ರಿಸೋರ್ಸಸ್ ಮೊಬಿಲೈಸೇಷನ್‌ನಲ್ಲ ಸಾಕಷ್ಟು ಗುರಿಗಳನ್ನು ಸರ್ಕಾರ ಹಾಕಿಕೊಂಡಿದ್ದರ ಅದು ಸಾಧನೆ ಮಾಡುವುದಕ್ಕೆ ಸಹಾಯವಾಗುತ್ತದೆ. ಈ 51 ಪರ್ಸೆಂಟ್ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಹೋಗುತ್ತದೆ. ಅಂದಾಗ ಉಳಿದಂಥ ಗುರಿಗಳನ್ನು ನಮಗೆ ತೋರಿಸುವುದಕ್ಕೆ ಇಟ್ಟುಕೊಂಡಿದ್ದಾರಲ್ಲಾ, ಸಾವಿರ ಕೋಟಿ, ಐನೂರು ಕೋಟಿ, 30 ಕೋಟಿ, 140 ಕೋಟಿ ಅನ್ನತಕ್ಕಂಥಾದ್ದು ಆ ಎಲ್ಲಾ ಕೋಟಿಗಳು ಬರೀ ಪುಸ್ತಕದಲ್ಲಿ ಉಳಿಯುತ್ತದೆ, ಪ್ರಾಕ್ಟಿಕಲ್‌ನಲ್ಲಿ ಬರುವುದಿಲ್ಲ. ಇದರ ಬಗ್ಗೆಯೂ ಮಾನ್ಯ ಅರ್ಥ ಸಚಿವರು ಸವಿಸ್ತಾರವಾದಂಥ ಎಕ್ಸ್‌ಪ್ಲನೇಷನ್ ಕೊಡಬೇಕು. ಆಮೇಲೆ ಮಲೆನಾಡು ಅಭಿವೃದ್ಧಿ ಮಂಡಳಿ ಮೂಲಕ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಮೂಲಕ ಹಾಗೂ ಮೈದಾನ ಅಭಿವೃದ್ಧಿ ಮಂಡಳಿಗಳ ಮೂಲಕ ಸಾಕಷ್ಟು ಡೆವಲಪ್‌ಮೆಂಟ್ ವರ್ಕ್ಸ್ ಮಾಡಿದ್ದೇವೆಂದು ತಮ್ಮ ಬೆನ್ನನ್ನು ಚಪ್ಪರಿಸಿಕೊಂಡಿದ್ದಾರೆ. ಪೇಜ್ 1ರಲ್ಲಿ ಸ್ಪೆಷಲ್ ಏರಿಯಾ ಪ್ರೋಗ್ರಾಮರ್ ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಅದರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ಸ್-ಇದರಲ್ಲಿ 100 ಕೋಟಿ ರೂಪಾಯಿ ಪ್ರಾವಿಷನ್ ಮಾಡಿಕೊಂಡು 45 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಉಳಿತಾಯ ಆಗಿದ್ದು 55 ಕೋಟಿ ರೂಪಾಯಿ, ಅಂದರೆ 55 ಕೋಟಿ ಪರ್ಸೆಂಟ್ ಕೆಲಸ ಆಗಿಲ್ಲವೆಂದು ಅದರ ಅರ್ಥ. ಗುರಿ ಯಾವಾಗಲೂ ಒಂದು ವರ್ಷಕ್ಕೆ ಇರುತ್ತದೆಯೇ ಹೊರತು ಒಂದೂವರೆ ವರ್ಷಕ್ಕೆ ಅಥವಾ ಎರಡು ವರ್ಷಗಳಿಗೆ ಗುರಿ ಇರುವುದಿಲ್ಲ. ಈ ವ್ಯತ್ಯಾಸಗಳ ಬಗ್ಗೆ ಏನು ಎಕ್ಸ್‌ಪ್ಲನೇಷನ್ ಹೇಳುತ್ತಾರೋ ಹೇಳಲಿ. ಖಜಾನೆ ತುಂಬಿ ತುಳುಕುತ್ತಿದ್ದರೆ ಇಟ್ಟಂಥ ಟಾರ್ಗೆಟ್‌ನ್ನು ಏಕೆ ಅಚೀವ್ ಮಾಡಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಎಕ್ಸೈಸ್‌ನಲ್ಲಿ 835 ಕೋಟಿ ಟಾರ್ಗೆಟ್ ತೋರಿಸಿ ಅಚೀವ್ ಮಾಡಿದ್ದುದು 780 ಕೋಟಿ ರೂಪಾಯಿ ಮಾತ್ರ ಇದು ಏಕ ಎಂದು ಕೇಳಿದ್ದಾರೆ. ಎಕ್ಸೈಸ್‌ನಲ್ಲಿ ಏಕೆ ಕಡಿಮೆಯಾಯಿತೆಂದರೆ, ಸಾರಾಯಿ ಹರಾಜಿನಲ್ಲಿ ಬಿಡ್ ಕಡಿಮೆಯಾದ್ದರಿಂದ ಇದು ಕಡಮೆಯಾಗಿದೆ. 830 ಕೋಟಿ ರೂಪಾಯಿ ಬರಬಹುದು ಅಂದಾಜಿನ ಮೇಲೆ ನಾವು ಇಟ್ಟಿದ್ದೇವೆ. ಸಾರಾಯಿಯಿಂದ ಕಡಿಮೆ ಬಂದಿದ್ದರಿಂದ ಇದು ಕಡಿಮೆ ಆಯಿತು. ಆ ಮೇಲೆ ಸೆಕೆಂಡ್ಸ್ ಮಾರಾಟ ನಿಂತುಹೋಗಿದೆಯೆಂದು ನಾನು ಎಂದೂ ಹೇಳಿಲ್ಲ. ಅದು ನಿಮ್ಮ ಕಾಲದಲ್ಲೂ ನಡೆಯುತ್ತಿತ್ತು, ಈಗಲೂ ನಡೆಯುತ್ತಿದೆ. ಅದರೆ ಅದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ನಾವು ಯಾರದೇ ಮುಲಾಜಿಗೆ ಒಳಗಾಗುವುದಿಲ್ಲ. ಹೋದ ವರ್ಷ ಎಕ್ಸೈಸ್‌ನಲ್ಲಿ 710 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೆವು. ಈ ವರ್ಷ 780 ಕೋಟಿ ವಸೂಲಾಗಬಹುದು, ಮಾರ್ಚ್ ಹೊತ್ತಿಗೆ ಅದು 800 ಕೋಟಿ ರೂಪಾಯಿಗಳವರೆಗ ಕೂಡ

ತಲುಪಬಹುದು. ಎಕ್ಸೈಸ್‌ನಲ್ಲಿ ಸ್ವಲ್ಪ ಕಡಮೆಯಾಗಿದೆಯೆಂದು ಬಜೆಟ್ ಸ್ಪೀಟ್‌ನಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಇಂಟರ್‌ನಲ್ ಮತ್ತು ಎಕ್ಸ್ಟ್ರಾ ಬಡ್ಜೆಟರಿ ರಿಸೋರ್ಸಸ್‌ನಲ್ಲಿ ಕೆ.ಪಿ.ಸಿ. ಮತ್ತು ಕೆ.ಇ.ಬಿ. ಇವು ಹಚ್ಚು ಲೋನ್ ಎತ್ತುವುದಕ್ಕೆ ಆಗದೇ ಇರುವುದರಿಂದ ಕಡಮೆಯಾಯಿತೇ ಹೊರತು ಟ್ಯಾಕ್ಸ್ ರೆವಿನ್ಯೂನಿಂದ ಅಲ್ಲ. ಟ್ಯಾಕ್ಸ್ ರೆವಿನ್ಯೂ ಜಾಸ್ತಿಯಾಗಿರುವುದರಿಂದಲೇ 3100 ಕೋಟಿ ರೂಪಾಯಿಗಳಿಂದ 3750 ಕೋಟಿ ರೂಪಾಯಿಗಳಿಗೆ ಬಂದದ್ದು. 185 ಕೋಟಿಗಳು ವರ್ಲ್ಡ್ ಬ್ಯಾಂಕ್‌ನಲ್ಲಿ ರಿ-ಇಂಬರ್ಸ್‌ಮೆಂಟ್ ಇತ್ತು. ಬರೀ 65 ಕೋಟಿ ಬಂತು ಎಂದು ಅವರು ಸ್ಥಗಿತ ಮಾಡಿಬಿಟ್ಟರು. ಈಗ ಏನೋ ಕೆಲಸಗಳು ವೇಗವಾಗಿ ನಡೆಯುತ್ತಾ ಇರುವುದರಿಂದ ಮತ್ತೆ ಕೊಡುತ್ತೇವೆ ಎಂದು ಒಪ್ಪಂದ ಮಾಡಿಕೊಂಡಿದ್ದಾರೆ. ಹೌಸಿಂಗ್‌ನಲ್ಲಿಯೂ ಕೂಡ ನಾವು 33 ಕೋಟಿ ಸಾಲವನ್ನು ತೆಗೆದುಕೊಂಡಿಲ್ಲ. ಆದರೆ ನಾವು ಈಗಾಗಲೇ 36ಸಾವಿರ ಮನೆಗಳನ್ನು ಕಂಪ್ಲೀಟ್ ಮಾಡಿದ್ದೇವೆ. ಜಮೀನನ್ನು ತೆಗೆದುಕೊಂಡು ಸೈಟ್‌ಗಳನ್ನು ಹಂಚಬೇಕಾಗುತ್ತದೆ. ಜೂನ್ ಒಳಗೆ ನಾವೇನೂ ಟಾರ್ಗೆಟ್ ಕೊಟ್ಟಿದ್ದೇವೆ, ಅದನ್ನು ಪೂರೈಸುತ್ತೇವೆ ಎಂಬ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ತಿಳಿಸಬಯಸುತ್ತೇನೆ. ಹಾಗೆಯೇ ಹೆಚ್ ಕೆಡಿಬಿ, ಎಂಎಡಿಬಿ ಯಲ್ಲಿ 60 ಕೋಟಿ ಸೇರತಕ್ಕಂಥಾದ್ದು ನಿಜ. ಇದರಲ್ಲಿ ನಾವು ಎರಡು ಕಂತುಗಳನ್ನು ಬಿಡುಗಡೆ ಮಾಡಿದ್ದೇವೆ. 1991-92-93ರಿಂದಲೂ ಕೂಡ ಈ ವರ್ಷ ರೀಲಿಸ್ ಮಾಡಿದ್ದನ್ನು ಹಾಗೆಯೇ ಇಟ್ಟುಕೊಂಡಿದ್ದು ಖರ್ಚು ಮಾಡಿರುವುದಿಲ್ಲ. ಉದಾಹರಣೆಗೆ 1992-93ರಲ್ಲಿ ಅಲೋಕೇಶನ್ 64 ಕೋಟಿ ಇದ್ದರೆ ಅದರಲ್ಲಿ 12 ಕೋಟಿಗಳನ್ನು ಸ್ಪೆಂಡ್ ಮಾಡಿದ್ದಾರೆ. ಹಾಗೆಯೇ 1993-94ರಲ್ಲಿ 63 ಕೋಟಿಗಳನ್ನು ರಿಲೀಸ್ ಮಾಡಿದರೆ ಖರ್ಚು ಮಾಡಿರುವುದು 16 ಕೋಟಿಗಳು ಮಾತ್ರ. 1994-95ರಲ್ಲಿ 66 ಕೋಟಿ ಇಟ್ಟು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳುವುದನ್ನು ಹೇಳಿಕೊಳ್ಳಿ. 100 ಕೋಟಿ ಅಲೋಕೇಶನ್ ಇದ್ದಾಗ 45 ಕೋಟಿ ಖರ್ಚಾದಾಗ ನಿಮ್ಮ ಫರ್‌ಫಾರ್ಮೆನ್ಸ್ 55 ಪರ್ಸೆಂಟ್ ಮಾತ್ರ ಆಗುತ್ತದೆ. ಅಭಿವೃದ್ಧಿ ಕಾರ್ಯಗಳಿಗೆ ನೀವು ಉಳಿದ ಹಣವನ್ನು ಖರ್ಚುಮಾಡಿರುವುದಿಲ್ಲ. ಅನೇಕ ಬಾಬತ್ತಿನಲ್ಲಿ ಹೀಗೆ ಆಗಿದೆ.

ಶ್ರೀ ಸಿದ್ಧರಾಮಯ್ಯ : ಇದು ಏಕೆ ಆಯಿತು ಅಂದರೆ ನಮ್ಮ ಮಾನ್ಯ ಶಾಸಕರುಗಳು ಅದನ್ನು ಆಕ್ಷನ್ ಪ್ಲಾನ್ ಮಾಡುವುದರಲ್ಲಿ ಸ್ವಲ್ಪ ವಿಳಂಬವಾಯಿತು. ತದನಂತರ ಅದನ್ನು ಅಪ್ರೂವ್ ಮಾಡಿದ ಮೇಲೆ ನಾವು ಎರಡು ಕಂತುಗಳಲ್ಲಿ ಎಲ್ಲಾ ಹಣವನ್ನು ಬಿಡುಗಡೆ ಮಾಡಿದ್ದೇವೆ. ಟೆಂಡರ್‌ಗಳೆಲ್ಲಾ ಸ್ವಲ್ಪ ಲೇಟ್ ಆದವು. ಆ ಕಾರಣಗಳಿಂದಾಗಿ ಸ್ವಲ್ಪ ನಿಧಾನವಾಗಿದೆಯೇ ಹೊರತು ಕೊರತೆಯಿಂದಲ್ಲ, ಹಣದ ಕೊರತೆಯಿಂದಲ್ಲ, ಹಣಕ್ಕೆ ಯಾವ ತೊಂದರೆಯೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕೂಡ ಮಲೆನಾಡು ಪ್ರದೇಶದಿಂದ

ಬಂದವನು. ಮಾನ್ಯ ಕಾಗೋಡು ತಿಮ್ಮಪ್ಪನವರೂ ಕೂಡ ಮಲೆನಾಡು ಪ್ರದೇಶದಿಂದ ಬಂದವರು. ಅದಕ್ಕೆ ಸಂಬಂಧಪಟ್ಟ ಸಚಿವರುಗಳು ಇದ್ದಾರೆ. ಈ ಸಾರಿ 26 ಕೋಟಿ ತೆಗೆದಿಟ್ಟು 7 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ನಾವು ಈ ವರ್ಷದ ಅಂತ್ಯದಲ್ಲಿ ಹಣ ಖರ್ಚು ಮಾಡುತ್ತೇವೆ, ನೀವು ಹಣವನ್ನು ಬಿಡುಗಡೆ ಮಾಡಿ.

ಶ್ರೀ ಸಿದ್ಧರಾಮಯ್ಯ : ಏಳೂವರೆ ಕೋಟಿಗಳನ್ನು ಎರಡು ಮೂರು ದಿನಗಳ ಹಿಂದೆ ಬಿಡುಗಡೆ ಮಾಡಿದ್ದೇವೆ. ಬಜೆಟ್ ಮಂಡನೆಗಿಂತ ಮುಂಚೆ ಏಳುವರೆ ಕೋಟಿ ಬಿಡುಗಡೆ ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಶಾಸಕರುಗಳ ಕಡೆಯಿಂದ ಯಾವ ಕೊರತೆಯೂ ಇಲ್ಲ. ನಾವು ಯಾವಾಗ ಕೇಳಿದರೂ ಮಾಡಿಸಿಕೊಟ್ಟಿದ್ದೇವೆ.

SRI SIDDRAMAIAH : Bills are still pending with the Bond. Money is still unspent.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪ್ರಾರಂಭದಲ್ಲಿ ಒಂದು ಪ್ರಶ್ನೆಯನ್ನು ಕೇಳಿದೆ. ತಾವುಗಳು ಟ್ಯಾಕ್ಸ್ ಬಗ್ಗೆ ಸ್ಲ್ಯಾಬ್ ಸಿಸ್ಟಂನ್ನು ತಂದಿದ್ದೀರಿ. ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಬಹಳ ವರ್ಷಗಳಿಂದ ಆ ಬೇಡಿಕೆ ಇತ್ತು. ನಾವು ಕೂಡ ಒತ್ತಾಯ ಮಾಡಿಕೊಂಡು ಬಂದಿದ್ದೆವು. ಆದರೆ ರೈತರು ಏನು ಪಾಪ ಮಾಡಿದ್ದಾರ? ಟ್ರಾಕ್ಟರ್ಸ್ ಅಥವಾ ಟಿಲ್ಲರ್ಸ್‌ಗೆ ಬೇಕಾದಂಥ ಉಪಕರಣಗಳು ರಾಜ್ಯದಲ್ಲಿ ಬೇಕಂದರೆ ರೈತರು ಹೊರರಾಜ್ಯಗಳಿಗೆ ಹೋಗಿ ತರುತ್ತಿದ್ದಾರೆ. ಏಕೆಂದರೆ ಅಲ್ಲಿ ಮಾರಾಟ ತೆರಿಗೆ ಇಲ್ಲ, ಸರ್‌ಚಾರ್ಜು ಇಲ್ಲ. ಅದು ಯಾವುದೇ ರಾಜ್ಯದಲ್ಲಿ ಇಲ್ಲ. ನಮ್ಮಲ್ಲಿ ಕೃಷಿ ಉಪಕರಣಗಳಿಗೆ ಶೇಕಡಾ 8 ಮಾರಾಟ ತೆರಿಗೆ ಮತ್ತು ಶೇಕಡಾ 15 ಸರ್‌ಚಾರ್ಜ್ ಆಗುತ್ತದೆ. ಈ ತರಹದ ತೆರಿಗೆ ದೇಶದ ಯಾವ ರಾಜ್ಯದಲ್ಲಿಯೂ ಇಲ್ಲ. ಟ್ರಾಕ್ಟರ್, ಟಿಲ್ಲರ್, ತೆಗೆದುಕೊಂಡವನು ಉಪಕರಣಗಳನ್ನು ಬೇರೆ ಕಡೆಯಿಂದ ತರಿಸಿಕೊಳ್ಳುತ್ತಿದ್ದಾನೆ. ಇದು ನಮಗೆ ಬರುವ ತೆರಿಗೆಯ ಮೇಲೆ ಎಫೆಕ್ಟ್ ಆಗುತ್ತದೆ. ಟ್ರಾಕ್ಟರ್ ತೆಗೆದುಕೊಂಡವನು ಕಡಿಮೆ ಬೆಲೆಗೆ ಉಪಕರಣಗಳನ್ನು ತೆಗೆದುಕೊಳ್ಳುವ ಅಗತ್ಯವಿದೆಯೋ ಇಲ್ಲವೇ? ಬೇರೆ ರಾಜ್ಯಗಳಲ್ಲಿ ಈ ತರವಾದ ತೆರಿಗೆ ಇಲ್ಲದಿರುವಾಗ ರೈತರು ತೆಗೆದುಕೊಳ್ಳುವ ಉಪಕರಣಗಳ ಮೇಲೆ ಟ್ಯಾಕ್ಸನ್ನು ಏಕೆ ಹಾಕುತ್ತಾ ಇದ್ದೀರಿ? ಅದನ್ನು ಕಡಿಮೆ ಮಾಡಿ ಅಥವಾ ತೆಗೆದು ಹಾಕಿ. ಇವತ್ತು ಟ್ರ್ಯಾಕ್ಟರ್ ಮತ್ತು ಟಿಲ್ಲರ್ ಕೊಂಡುಕೊಳ್ಳಬೇಕಾದರೆ ಸುಮಾರು ಹನ್ನೊಂದೂವರೆ ಪರ್ಸೆಂಟ್‌ನಷ್ಟು ನಾವು ಕೊಡಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಈಗ ಡೀಸಲ್ ಇಂಜಿನ್ಸ್ Parts and accesssories thereof. 6ರಿಂದ 8 ಪರ್ಸೆಂಟ್ ಮಾಡಿದ್ದೇವೆ. ಇದನ್ನು ಫೈನಾನ್ಸ್ ಮಿನಿಸ್ಟರ್ ಕಾನ್‌ಫರೆನ್ಸ್‌ನಲ್ಲಿ 8 ಪರ್ಸೆಂಟ್ ಎಂದು ರೆಕಮೆಂಡ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ 12 ಪರ್ಸೆಂಟ್ ಇದೆ.

ಆಂಧ್ರಪ್ರದೇಶದಲ್ಲಿ 12 ಪರ್ಸೆಂಟ್, ತಮಿಳುನಾಡಿನಲ್ಲಿ 9.20 ಇದೆ. ಪವರ್ ಟಿಲ್ಲರ್ಸ್‌ಗೆ ನಾವು 2 ರಿಂದ 4 ಪರ್ಸೆಂಟ್‌ಗೆ ಹೆಚ್ಚಿಸಿದ್ದೆವು. ಅದನ್ನು ಕಾನ್‌ಫರೆನ್ಸ್‌ನಲ್ಲಿ 8 ಪರ್ಸೆಂಟ್ ಎಂದು ರೆಕಮೆಂಡ್ ಮಾಡಿದ್ದರು. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಬೇರೆ ರಾಜ್ಯಗಳಲ್ಲಿ ಉಪಕರಣಗಳಿಗೆ ಟ್ಯಾಕ್ಸ್ ಇಲ್ಲದಿದ್ದರೆ, ಇದ್ದಲ್ಲಿ ಅದು ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ನೋಡಿ ನಮ್ಮಲ್ಲಿ ಎಷ್ಟು ಮಾಡಬೇಕೆಂಬ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಬೇರೆ ರಾಜ್ಯದಲ್ಲಿ ಈ ಉಪಕರಣಗಳಿಗೆ ಟ್ಯಾಕ್ಸ್ ಇಲ್ಲ ಎಂಬ ವಿಚಾರ ನನಗೆ ಗೊತ್ತಿಲ್ಲ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿವರಗಳನ್ನು ದಯಮಾಡಿ ಬೇಗನೆ ತರಿಸಿಕೊಳ್ಳಿ.

ಶ್ರೀ ಸಿದ್ಧರಾಮಯ್ಯ : ವಾಹನಗಳು, ಟ್ರಾಕ್ಟರ್‌ಗಳು ಇತ್ಯಾದಿಯಾಗಿ ಸ್ಪೇರ್ ಪಾರ್ಟ್ಸ್‌ನ್ನು ಒಂದು ಗ್ರೂಪ್ ಮಾಡುತ್ತಾರೆ. Parts of tractors and trailersಗೆ 10ರಿಂದ 4 ಪರ್ಸೆಂಟ್‌ಗೆ ಇಳಿಸಿದ್ದೇವೆ ಅಂದರೆ, ನೀವು ಬೇರೆ ರಾಜ್ಯಗಳಲ್ಲಿ ಇಲ್ಲ ಎಂದು ಹೇಳುತ್ತೀರಿ. ನಾನು ಅದರ ವಿವರಗಳನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ಮಾನ್ಯ ಹಣಕಾಸು ಸಚಿವರಲ್ಲಿ ಒಂದು ವಿಚಾರವನ್ನು ನಾನು ಕೇಳಿಕೊಳ್ಳುವುದೇನೆಂದರೆ, ತಾವು ರಸ್ತೆಗಳ ಬಗ್ಗೆ ಬಹಳ ಉದಾಸೀನವನ್ನು ಮಾಡುತ್ತಾ ಇದ್ದೀರಿ. ಅದರಲ್ಲಿಯೂ ಮುಖ್ಯವಾಗಿ ಪಿಡಬ್ಲ್ಯೂಡಿ ರಸ್ತೆಗಳ ಬಗ್ಗೆ. ನೀವು ರಸ್ತೆಗಳನ್ನು ಎರಡು ವಿಭಾಗಗಳಾಗಿ ಮಾಡಿದ್ದೀರಿ. ಜಿಲ್ಲಾಪರಿಷತ್ ರಸ್ತೆಗಳು ಮತ್ತು ಪಿಡಬ್ಲ್ಯುಡಿ ರಸ್ತೆಗಳು ಎಂದು ಮಾಡಿದ್ದೀರಿ. ಜಿಲ್ಲಾಪರಿಷತ್‌ನವರಿಗೂ ಹಣ ಇಲ್ಲ. ಪಿಡಬ್ಲ್ಯುಡಿಯವರಿಗೆ ಕೇಳಿದರೆ ನಮಗೆ ಯಾವುದೇ ಹಣವನ್ನು ಕೊಡುತ್ತಾ ಇಲ್ಲ, ಇರುವ ಹಣದಲ್ಲಿ ಏನಾದರೂ ಜಾರಿ ಮಾಡಬೇಕೆಂದರೆ ಅವರ ಹತ್ತಿರ ಟಿಪ್ಪರ್ಸ್ ಇಲ್ಲ ರೋಲರ್ಸ್ ಇಲ್ಲ, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನೀಯರ್ಸ್‌ಗೆ ಕೆಲಸ ಮಾಡುವುದಕ್ಕೆ ಜೀಪುಗಳಿಲ್ಲ. ಮುಂತಾದ ಸಮಸ್ಯೆಗಳು ಇವೆ. ನನ್ನ ಕ್ಷೇತ್ರದಲ್ಲಿ ಪಿಡಬ್ಲ್ಯೂಡಿ ರಸ್ತೆಗಳೇ ಸುಮಾರು 60-70 ಕಿ.ಮೀ.ಗಳಷ್ಟು ರಸ್ತೆ ಇದೆ. 25-30 ವರ್ಷಗಳಿಂದ ಆ ರಸ್ತೆಗಳು ಯಾವ ಜೆಲ್ಲಿಯನ್ನೂ ಕಾಣಲಿಲ್ಲ, ಟಾರ್‌ನ್ನು ಕಾಣಲಿಲ್ಲ. ಆ ರಸ್ತೆಗಳಲ್ಲಿ ಓಡಾಡಲು ಸಾಧ್ಯವಿಲ್ಲದೇ ಇರುವ ಪರಿಸ್ಥಿತಿಯು ಬಂದಿದೆ. ಕಳೆದ ವರ್ಷ ಶಾಸಕರುಗಳಿಗೆ ಒಂದು ಆಕ್ಷನ್ ಪ್ಲಾನ್ ಮಾಡಿಕೊಡಿ ಎಂದು ಮೂವತ್ತು ಲಕ್ಷಗಳನ್ನು ಕೊಟ್ಟಿದ್ದರು. ಆ ಮೂವತ್ತು ಲಕ್ಷಗಳು ಅಂದರೆ ಒಂದು ಕಿ.ಮಿ.ಗೆ ಟಾರ್ ಹಾಕಬೇಕಾದರೆ 1·60 ಸಾವಿರಗಳಿಂದ 1 ಲಕ್ಷ 7 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಒಂದು ಕಿ.ಮಿ. ರಸ್ತೆಗೆ ಮೆಟ್ಲಿಂಗ್ ಮಾಡುವುದಕ್ಕೆ 70 ರಿಂದ 80 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ನೀವು 30 ಲಕ್ಷ ಕೊಟ್ಟರೆ ಟಾರ್ ಹಾಕಿಸಬೇಕಾದರ 15 ಕಿ.ಮೀ.ವರೆಗೆ ಆಗುತ್ತದೆ. ಮೆಟ್ಲಿಂಗ್ ಮಾಡುವುದಕ್ಕೆ 18 ಕಿ.ಮಿ. ಬರುತ್ತದೆ. ನನ್ನ ಕ್ಷೇತ್ರದಲ್ಲಿ ಸುಮಾರು 60 ಕಿ.ಮಿ.ಗಳಷ್ಟು ರಸ್ತೆ ಕಳೆದ 25 ವರ್ಷಗಳಿಂದ ಟಾರ್ ಮುಖ ನೋಡದೆ, ಜಲ್ಲಿ ಮುಖ ನೋಡದ ಅದರಲ್ಲಿ

ಓಡಾಡುವುದಕ್ಕೆ ಆಗುತ್ತಾ ಇಲ್ಲ. ರಸ್ತೆಗಳ ವಿಚಾರದಲ್ಲಿ ಇಡೀ ರಾಜ್ಯದಲ್ಲಿಯೇ ಈ ಪರಿಸ್ಥಿತಿಯು ಇದೆ. ನಮ್ಮ ದುರಾದೃಷ್ಟಕ್ಕೆ ಕೋಲಾರದಿಂದ ಆಂಧ್ರಪ್ರದೇಶಕ್ಕೆ ಸ್ಟೇಟ್‌ಹೈವೇ ಇದೆ. ಈ ಕಡೆ ಕೆಜಿಎಫ್‌ನಿಂದ ಒಂದು ರಸ್ತೆ ಇದೆ. ಆ ರೋಡ್‌ಗಳಲ್ಲಿ ಓಡಾಡಲು ಕೂಡ ಸಾಧ್ಯವಿಲ್ಲದ ಪರಿಸ್ಥಿತಿಯು ಇದೆ. ನೀವು ಹೀಗೆ ಒಂದೊಂದು ಕ್ಷೇತ್ರಕ್ಕೆ 30 ಲಕ್ಷ ಕೊಟ್ಟರೆ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಈ ವರ್ಷ ಅದನ್ನು 20 ಲಕ್ಷ ಮಾಡಿದ್ದಾರೆ. ಇದಲ್ಲಿ ಸಾಕಾಗುತ್ತದ?

ಅಧ್ಯಕ್ಷರು : ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಸ್ತೆ ಸೇತುವೆಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟ್‌ಗೆ ಕಾಯಕಲ್ಪ ಮಾಡಬೇಕು. ಅವರಿಗೆ ಬೇಕಾಗುವಂಥ ಸೌಲಭ್ಯ ಮತ್ತು ಸಲಕರಣೆಗಳನ್ನು ಖರೀದಿ ಮಾಡುವುದಕ್ಕೆ ಹಣ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ದಯಮಾಡಿ ಸ್ಪಷ್ಟೀಕರಣ ಬಯಸುವವರು ಒಂದೊಂದು ವಾಕ್ಯದಲ್ಲಿ ಕೇಳಿ..

ಶ್ರೀ ಸಿದ್ದರಾಮಯ್ಯ : ಮಾನ್ಯ ಸದಸ್ಯರು ರಸ್ತೆಗಳಿಗೆ ಹಣವನ್ನು ಒದಗಿಸಲು ಕೇಳಿದ್ದಾರೆ. ಎಪಿಎಂಸಿ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳಿಗೂ ಕೂಡ ಆ ಹಣವನ್ನು ಖರ್ಚು ಮಾಡಬೇಕೆಂದು ಇದೆ. ಹಾಗೆಯೇ ಆ ಎಲ್ಲಾ ರಸ್ತೆಗಳನ್ನು ಆಲ್‌ವೆದರ್ ರಸ್ತೆಗಳಾಗಿ ಮಾಡಬೇಕೆಂದು ಇದ್ದೇವೆ. ಅದಕ್ಕಾಗಿ 10 ಲಕ್ಷ ರೂ.ಗಳ ಕೆಲಸ ಅಲ್ಲಿ ಮಾಡಬೇಕೆಂದಿದ್ದೇವೆ.

12.00 ಪಿ.ಎಂ.

ಮಾರುಕಟ್ಟೆಯಲ್ಲಿ ಬರುವ ಎಪಿಎಂಸಿ ಮತ್ತು ಪಿಡಬ್ಲ್ಯೂಡಿ ರಸ್ತೆಗಳು ಆಗಬೇಕು. ಆದರೆ ಸಮಸ್ಯೆಗಳಿರುವುದರಿಂದ ಎಲ್ಲವನ್ನೂ ಒಟ್ಟಿಗೆ ಸರಿದೂಗಿಸಿಕೊಂಡು ಹೋಗುವುದು ಸಹ ಬಹಳ ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ ಮುಂದೆ ನಮ್ಮ ಹಣಕಾಸಿನ ರಿಸೋರ್ಸಸ್ ಹೆಚ್ಚು ಮಾಡಿಕೊಂಡಾಗ ರಸ್ತೆಗಳಿಗೆ, ಕಟ್ಟಡಗಳಿಗೆ ಅನುಕೂಲವಾಗುತ್ತದೆ. ಕಳೆದ ವರ್ಷ ಏನಾಯಿತ್ತು ಕಾಗೋಡು ತಿಮ್ಮಪ್ಪನವರೇ ಬಿಲ್‌ಗಳು ಬಾಕಿ ಇದ್ದವು, ಹಾಗಾಗಿ ಹೊಸ ಕೆಲಸಗಳಿಗೆ ದುಡ್ಡುಕೊಡುವುದಕ್ಕೆ ಆಗಲಿಲ್ಲ. ಈ ಸಲ ಅವಲ್ಲ ಇರುವುದಿಲ್ಲ, ಹಾಗಾಗಿ ಹೆಚ್ಚು ಕೆಲಸ ಆಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ರೈತರು ಬೆಳೆದ ಪದಾರ್ಥಗಳಿಗೆ ಮಾರ್ಕೆಟ್ ಸಿಗದೇ ಇದ್ದಾಗ ಸರ್ಕಾರ ಮಧ್ಯ ಪ್ರವೇಶಿಸಲು ಸ್ವಲ್ಪ ಹಣ ಒದಗಿಸಿಕೊಡಬೇಕು. ಇಲ್ಲದೇ ಇದ್ದರೆ ದಲ್ಲಾಳಿಗಳ ಮಧ್ಯೆ ಸಿಕ್ಕಿಹಾಕಿಕೊಂಡು ನಾವು ಬಹಳ ಅನಾನುಕೂಲಪಡಬೇಕು. ಇನ್ನೊಂದು, ಪವರ್ ಟಿಲ್ಲರ್, ಟ್ರಾಕ್ಟರ್ ಬಿಡಿಭಾಗಗಳ ಮೇಲೆ ತೆರಿಗೆಯನ್ನು ನೀವು ಎಷ್ಟು ಸಾಧ್ಯವೋ ಅಷ್ಟನ್ನು ಹಾಕಬಾರದು. ಏಕೆಂದರೆ ಬರಗಾಲ ಬಂದರೆ ನಾವು ಹಣ ಕೊಡುತ್ತೇವೆ. ಒಂದು ಟ್ರಾಕ್ಟರ್ ಉಪಯೋಗ ಮಾಡುವುದರಿಂದ ಸುಮಾರು 20 ಜೊತೆ ಎತ್ತುಗಳ ಕೆಲಸವಾಗುತ್ತದೆ.

ಬರಗಾಲಕ್ಕೆಂದು ಹಣ ಕೊಡುವ ಬದಲು ಟ್ರಾಕ್ಟರ್‌ಗೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಇನ್ನೊಂದು ಪರ್ಚೇಸ್ ಟ್ಯಾಕ್ಸ್ ಬಗ್ಗೆ ಹೇಳುತ್ತೇನೆ. ಪರ್ಚೇಸ್ ಟ್ಯಾಕ್ಸ್ ಮನ್ನಾ ಮಾಡಿದ್ದೇನೆ ಎಂದು ಹೇಳುತ್ತೀರಿ, ಎನ್‌ಟಿಸಿ ಕಬ್ಬಿನ ಮೇಲೆ ಹಾಕಿರುವ ತೆರಿಗೆ ಅದು ನಿಮಗೆ ಬರದೇ ಇರುವ ಪರ್ಚೇಸ್ ಟ್ಯಾಕ್ಸ್ ಮಹಾರಾಷ್ಟ್ರದಲ್ಲೆಲ್ಲ ಫ್ಲಾಟ್ ರೇಟ್ ಫಿಕ್ಸ್ ಮಾಡಿದ್ದಾರೆ. ಒಪ್ಪಿಗೆ ಕಬ್ಬಿನ ಮೇಲೆ ಹಾಕಿರುವ ತರಿಗೆ ಬರುತ್ತದೆ, ನಾನು ಇಲ್ಲ ಅನ್ನುವುದಿಲ್ಲ. ಮಹಾರಾಷ್ಟ್ರದಲ್ಲಿ ಒಂದು ಟನ್‌ಗಿಷ್ಟು ಎಂದು ಫ್ಲಾಟ್‌ರೇಟ್ ಫಿಕ್ಸ್ ಮಾಡಿದ್ದಾರೆ. ಇಲ್ಲೂ ಫ್ಲಾಟ್‌ರೇಟ್ ಫಿಕ್ಸ್ ಮಾಡಿದ್ದರೆ ಸ್ವಾಗತ ಮಾಡುತ್ತೇನೆ. ಇನ್ನೊಂದು, ನಾನು ನಿನ್ನೆ ಭಾಷಣ ಮಾಡಿದ ಬೆಲ್ಲಕ್ಕೆ ಒಂದು ಕನಿಷ್ಟ ಬೆಲೆ ನಿಗದಿಮಾಡುವ ವ್ಯವಸ್ಥೆ ಮಾಡಬೇಕು. ಆ ಮೇಲೆ, ಸಹಕಾರ ಸಂಘಸಂಸ್ಥೆಯಲ್ಲಿ 8 ಸಾವಿರ ಸಾಲ ಪಡೆಯಲು 25 ಫಾರಂಗಳಿಗೆ ಸೈನ್ ಮಾಡಿಸುತ್ತಾರೆ. ಇವತ್ತು ಪ್ರಕೃತಿಯನ್ನು ಎಷ್ಟು ನಾಶ ಮಾಡಿ ಆ ಪೇಪರ್ ಮಾಡುತ್ತೇವೆ. ಆ ಸಹಕಾರ ಸಂಘಗಳಲ್ಲಿ ಕೊಡುವ 8 ಸಾವಿರ ಸಾಲಕ್ಕೆ ಇಷ್ಟೊಂದು ಸೈನ್‌ಗಳನ್ನು ಹಾಕಿಸುವುದು ನಿಲ್ಲಿಸಿ ಒಂದು ಫಾರಂಗೆ ಸೈನ್ ಹಾಕಿಸಿಕೊಳ್ಳಿ. ಅದರಿಂದ ಸರ್ಕಾರಕ್ಕೆ ಬಹಳ ಉಳಿತಾಯವಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಟ್ರಾಕ್ಟರ್ ಟ್ರೈಲರ್ ಬಿಡಿಭಾಗಗಳಿಗೆ ನಮ್ಮಲ್ಲಿ 10 ಪರ್ಸೆಂಟಿದ್ದುದನ್ನು 4 ಪರ್ಸೆಂಟ್ ಮಾಡಿದ್ದೇವೆ. ಆದರೆ ಮಹಾರಾಷ್ಟ್ರದಲ್ಲಿ ಇಲ್ಲ ಅಂದರು, ಅಲ್ಲಿ 4 ಪರ್ಸೆಂಟಿದೆ, ತಮಿಳುನಾಡಿನಲ್ಲಿ 3.45 ಪರ್ಸೆಂಟಿದೆ ಆಂಧ್ರದಲ್ಲಿ 4 ಪರ್ಸೆಂಟದೆ ಅದಕ್ಕಾಗಿಯೇ ಎಲ್ಲ ಪ್ಯಾರಿಟಿ ಇರಲಿ ಎಂದು 4 ಪರ್ಸೆಂಟುಗೆ ಮಾಡಿರುವುದು. ಇನ್ನು ಕಬ್ಬಿನ ಫ್ಲಾಟ್ ರೇಟು 10.5 ಇದ್ದುದನ್ನು ತೆಗೆದು ಅಡ್ವೆಲರಂ ತೆಗೆದುಹಾಕಿ ಕಂಪೋಜಿಶನ್ ರೇಟನ್ನು ನಾವು ಮಾಡಿದ್ದೇವೆ. ಮಹಾರಾಷ್ಟ್ರದಲ್ಲಿ ಈಗ ಮತ್ತೆ ಅಡ್ವೆಲರಂಗೆ ಹೋಗಿದ್ದಾರೆ. ಮತ್ತೆ 12 ರಿಂದ 15 ರೂಪಾಯಿ ಇನ್ಸೆಂಟೀವ್ ಕೊಟ್ಟಿದ್ದೇವೆ. ಅದರಿಂದ ಸುಮಾರು 15 ಕೋಟಿ ರೂಪಾಯಿ ರೈತರಿಗೆ ಅನುಕೂಲವಾಗುವುದು. ಅದರ ಜೊತೆಗೆ ಬೆಲ್ಲದ ಟ್ಯಾಕ್ಸ್ ಈ ಸಲ ಕಡಿಮೆ ಮಾಡಿದ್ದೇವೆ. ಒಂದೂವರೆ ಪರ್ಸೆಂಟಿನಿಂದ ಒಂದು ಪರ್ಸೆಂಟ್‌ಗೆ ಇಳಿಸಿದೆ. ಸರ್ಕಾರದ ಇತಿಮಿತಿಯಲ್ಲಿ ಕಬ್ಬು ಬೆಳೆಗಾರರಿಗೆ ಎಷ್ಟು ಸಹಾಯ ಮಾಡಬಹುದೋ ಅಷ್ಟೂ ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ನಮ್ಮ ಕೃಷಿ ಸಚಿವರು ರೈತರ ಸಲುವಾಗಿ ಒಂದು ಕೃಷಿ ನೀತಿಯನ್ನು ರೂಪಿಸಿದ್ದಾರೆ. ಅದರೊಳಗೆ ಕೃಷಿಯನ್ನು ಉದ್ಯಮವನ್ನಾಗಿ ಪರಿಗಣಿಸಬೇಕೆಂದು ಹೇಳಿದ್ದಾರೆ. ಹಾಗಾಗಿ ಕೃಷಿ ಉಪಕರಣಗಳು, ಟ್ರಾಕ್ಟರ್ ಇರಲಿ, ಡೀಸೆಲ್ ಇಂಜಿನ್ ಇರಲಿ, ರಂಟೆ ಕುಂಟೇನೆ ಇರಲಿ, ಇವುಗಳಲ್ಲಿ ಉದ್ಯಮದಾರರು ತಮ್ಮ ಮೆಶಿನ್ ಎಕ್ವಿಪ್‌ಮೆಂಟ್ಸ್‌ಗೆ ಹೇಗೆ ಸಬ್ಸಿಡಿ ಕೊಡುತ್ತಾರೋ ಹಾಗೆ ನಮಗೂ ಸಬ್ಸಿಡಿ ಕೊಡುತ್ತಾರೆಯೇ?

ಶ್ರೀ ಸಿದ್ಧರಾಮಯ್ಯ : ನಮ್ಮ ಇತಿಮಿತಿಯಲ್ಲಿ ಎಷ್ಟು ಸಬ್ಸಿಡಿ ಕೊಟ್ಟು ಎಷ್ಟು ಸಹಾಯ ಮಾಡಲು ಸಾಧ್ಯವಾಗುತ್ತದೆ. ಅಷ್ಟು ಮಾಡುತ್ತಿದ್ದೇವೆ. ನಾವು ರೈತರ ಪರವಾಗಿರುವವರು.

ರೈತರ ಕಷ್ಟಗಳು ಗೊತ್ತಿದೆ. ಆದರ ಸರ್ಕಾರದ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಸಾಧ್ಯವೋ ಅಷ್ಟು ಸಹಾಯ ಈಗ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೇ, ನಿನ್ನೆ ಭಾಷಣ ಮಾಡಿದಾಗ ಆಟೋರಿಕ್ಷಾ ಅಥವಾ ಲಾರಿ ಡ್ರೈವರ್‌ಗೆ ಅಪಘಾತವಾದಾಗ ಅವರಿಗೆ 50 ಸಾವಿರ ಕೊಡುತ್ತೇವೆಂದು ಸರ್ಕಾರ ಹೇಳಿದೆ. ಆದರೆ ರೈತನು ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಮರ ಬಿದ್ದೋ ಹಾವು ಕಡಿದೋ ಅಪಘಾತವಾದಾಗ 50 ಸಾವಿರ ಅವರಿಗೂ ಕೊಡಬೇಕೆಂದು ತಮ್ಮ ಮೂಲಕ ಸಚಿವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ರೈತರು ಸಾಗಣೆ ಮಾಡುವಾಗ ಕೃಷಿ ಕೆಲಸಕ್ಕೆ ಹೋಗುವಾಗ ಬರುವಾಗ ಸತ್ತರೆ ಅವರಿಗೂ ಕೊಡುವಹಾಗೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಈಗ ತಾನೇ ಶ್ರೀರಾಮರೆಡ್ಡಿಯವರು ಸೇತುವೆ ರಸ್ತೆ ಬಗ್ಗೆ ಹೇಳಿದ್ದನ್ನು ನಾನು ಪುಷ್ಟೀಕರಿಸುತ್ತಾ, ಹಣಕಾಸಿನ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ರಸ್ತೆ ಸೇತುವೆಗಳು ಬಹಳ ಹದಗೆಟ್ಟುಹೋಗಿವೆ. ಹಿಂದಿನ ವರ್ಷಕ್ಕೆ ಹೋಲಿಸಿದಾಗ ರಸ್ತೆ ಸೇತುವೆ ನಿರ್ಮಾಣ ಮಾಡಲಿಕ್ಕೆ ಈ ಸಾಲಿನಲ್ಲಿ ಕೊಟ್ಟಿರುವ ಹಣ ಬಹಳ ಕಡಿಮೆ ಆದ್ದರಿಂದ ಯಾವುದೇ ರಾಜ್ಯದ ರಾಷ್ಟ್ರದ ಪ್ರಗತಿ ನಾವು ನೋಡುವುದು ಅಲ್ಲಿನ ಸಾರಿಗೆ ವ್ಯವಸ್ಥೆ ಎಷ್ಟು ಚೆನ್ನಾಗಿದೆ ಎಂಬುದರ ಆಧಾರದ ಮೇಲೆ. ಈಗ ಇವು ಹದಗೆಟ್ಟಿರುವುದರಿಂದ ತಾವು ದಯವಿಟ್ಟು ಸೇತುವೆ ನಿರ್ಮಾಣಕ್ಕೆ ಮತ್ತು ರಸ್ತೆ ದುರಸ್ತಿಗೆ ಹೆಚ್ಚು ಹಣ ಕೊಡುವುದರ ಜೊತೆಗೆ ಸಹಕಾರ ಇಲಾಖೆಯನ್ನು ಕಡಿಮೆ ದೃಷ್ಟಿ.ದ ನೋಡಿದ್ದಾರೆ. ಸರಕಾರ ಇಲಾಖೆಯನ್ನು ಕಡಿಮೆ ದೃಷ್ಟಿಯಿಂದ ನೋಡಿದ್ದಾರೆ. ಸಹಕಾರ ವಲಯದಲ್ಲಿ ಸಕ್ಕರೆ ಕಾರ್ಖಾನೆಗಳು ಬರುವಾಗ ಅವಕ್ಕೆ ಶೇರ್ ಕ್ಯಾಪಿಟಲ್ ಕೊಡಬೇಕಾಗುತ್ತದೆ. 10 ಶೇರ್ ಕ್ಯಾಪಿಟಲ್ ರೈತರಿಂದ 15 ಸರ್ಕಾರದ ವತಿಯಿಂದ ಒಟ್ಟು 25 ಪರ್ಸೆಂಟ್ ಕೊಡಬೇಕಾದರೆ ಈಗ ನೀವಿಟ್ಟಿರುವ ಹಣ ಬಹಳ ಕಡಿಮೆ ಯಾವ ರೈತರು ಸರ್ಕಾರಕ್ಕೆ ಕಾಲಕ್ಕೆ ಸರಿಯಾಗಿ ಮರುಪಾವತಿ ಮಾಡುತ್ತಿದ್ದರೋ ಅವರಿಗೆ 5 ಪರ್ಸೆಂಟ್ ಸರ್ಕಾರ ಕೊಡಬೇಕೆಂದು ಹೇಳಿದ್ದನ್ನು ಇಲ್ಲಿ ತಾವು ಹೇಳಲಿಲ್ಲ. ದಯವಿಟ್ಟು ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ರಸ್ತೆಗಳಿಗೆ ಹೆಚ್ಚು ಹಣಕೊಡಬೇಕೆಂಬ ಬಗ್ಗೆ ನನಗೇನೂ ಬೇರೆ ಅಭಿಪ್ರಾಯವಿಲ್ಲ. ಆದರೆ ಬೇರೆ ಆದ್ಯತೆಗಳಿಗೂ ನಾವು ಹೆಚ್ಚಿನ ಹಣ ಒದಗಿಸಬೇಕಾಗಿರುವುದರಿಂದ ಮುಂದೆ ಹಣಕಾಸು ಪರಿಸ್ಥಿತಿ ನೋಡಿಕೊಂಡು ಅದಕ್ಕೆ ಹೆಚ್ಚು ಹಣ ಖರ್ಚು ಮಾಡತಕ್ಕಂಥ ಪ್ರಯತ್ನ ಮಾಡೋಣ.

ಶ್ರೀ ಹೆಚ್. ನಾಗಪ್ಪ : ರಸ್ತೆಗಳಿಗೆ ಹಣ ಕೊಡುವಾಗ ತಾವು ಕ್ಷೇತ್ರವಾರು ಅಥವಾ ತಾಲೂಕು ವಾರು ಕೊಡುತ್ತಿದ್ದೀರೋ ಹೇಗೆ? ಕೆಲವು ಕಡೆ ರಸ್ತೆಗಳು ಜಾಸ್ತಿ ಇವೆ.

ಉದಾಹರಣೆಗೆ ಹನೂರು ಕ್ಷೇತ್ರದಲ್ಲಿ ಪಿಡಬ್ಲ್ಯುಡಿ ರಸ್ತೆ 200 ಕಿ.ಮೀ. ಇದೆ. ಜಿಲ್ಲಾಪರಿಷತ್ ರಸ್ತೆ ಒಂದು ಸಾವಿರ ಚಿಲ್ಲರೆ ಕಿ.ಮಿ. ಇದೆ. ಆ ತರಹ ಮೈಲೇಜ್ ಮೇಲೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಇವರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಅರ್ಥಸಚಿವರಲ್ಲಿ ನಾನು ಕೇಳುವುದೇನೆಂದರೆ ರೈತರು ಸಾಲ ಮರುಪಾವತಿ ಮಾಡಬೇಕಾದಾಗ ಇದ್ದಂಥ ಬೆಳೆ ಹಾನಿಯಾಗುವುದರಿಂದ ಮತ್ತು ಬೆಲೆ ಕುಸಿದಿರುವುದರಿಂದ, ಬಹಳ ಆರ್ಥಿಕ ಮುಗ್ಗಟ್ಟಿನಲ್ಲಿರುವುದರಿಂದ ಶೇಕಡ 5ರಷ್ಟು ಸಹಾಯ ಧನವನ್ನು ಬಡ್ಡಿಯನ್ನು ಅವರಿಗೆ ಕೊಡುತ್ತೇವೆಂದು ಹೇಳಿದರು ಸಾಲ ಮರುಪಾವತಿ ಸಮಯಕ್ಕೆ ಮಾಡಿದರೆ ಅನುಕೂಲವಾಗುತ್ತದೆ. ಇದನ್ನು ಕೊಡುವುದರ ಬಗ್ಗೆ ಬಹುತೇಕ ಎಲ್ಲ ಸಂದರ್ಭದಲ್ಲೂ ಸರ್ಕಾರ ಒಪ್ಪಿಕೊಂಡಿದ್ದ ಈ ಮಾತು ಬಜೆಟ್ ನಲ್ಲಿ ಏಕೆ ನಮೂದಾಗಲಿಲ್ಲವೆಂದು ಗೊತ್ತಾಗುತ್ತಿಲ್ಲ. ಜೂನ್ 30 ರೊಳಗೆ ಮರು ಪಾವತಿ ಮಾಡಿದಂತಹ ರೈತರಿಗೆ ಶೇಕಡ 5ರಷ್ಟು ಸಹಾಯಧನ ಕೊಡಬೇಕು. ಜೊತೆಗೆ ರಸ್ತೆಗಳ ಸುಧಾರಣೆ ಬಗ್ಗೆ ಅವಶ್ಯವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಕನಿಷ್ಟ 50 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗೆ ಇಡದಿದ್ದರೆ ಬಹಳ ತೊಂದರೆಯಾಗುತ್ತದೆ. ಹಿಂದಿನ ವರ್ಷ ಮತ್ತು ಮಲೆನಾಡು ಅಭಿವೃದ್ಧಿ ಮಂಡಲಿಗೆ ಕೇವಲ 19 ಲಕ್ಷ ರೂಪಾಯಿಗಳು ಮಾತ್ರ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಗಳಿಗೆ ಸಿಕ್ಕಿವೆ, ಅದಕ್ಕೂ ಸಹ ಹೆಚ್ಚಿನ ಹಣವನ್ನು ದಯವಿಟ್ಟು ಇಡಬೇಕು.

ಶ್ರೀ ಸಿದ್ಧರಾಮಯ್ಯ : ಇವರ ಸಲಹೆಯನ್ನು ನಾನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ 1994-95ರಲ್ಲಿ ಗಡಿನಾಡು ಪ್ರದೇಶಗಳಿಗೆ 15 ಕೋಟಿ ರೂಪಾಯಿಗಳನ್ನು ಅಲೋಕೇಷನ್ ಮಾಡಿದ್ದರು. 1995-96ರಲ್ಲಿ 10 ಕೋಟಿ ಮಾಡಿದ್ದಾರೆ. ಈ ವರ್ಷ ಹೆಚ್ಚು ಕೊಡುತ್ತಾರೆಂದು ತಿಳಿದುಕೊಂಡಿದ್ದೆವು. ಅಲೊಕೇಷನ್ ಮಾಡುವ ಕಾಲಕ್ಕೆ ಸರಾಸರಿಯಲ್ಲಿ ತಾಲ್ಲೂಕುಗಳಲ್ಲಿ ಡಿವೈಡ್ ಮಾಡುತ್ತೀರಿ. ಆದರೆ ತಾವು ರಿಯಾಲಿಟೀಸ್ ನೋಡಬೇಕು. ರಸ್ತೆ ಎಷ್ಟು ಇವೆ, ತಾಲ್ಲೂಕುಗಳು ಎಷ್ಟು ಇವೆ ಎಂದು ಅದರ ರಿಯಾಲಿಟೀಸ್ ನೋಡಬೇಕು. ಎಲ್ಲಾದಕ್ಕೂ ಮಾಡಬೇಕು. ಆದರೆ ಎಲ್ಲಿ ಹೆಚ್ಚು ನೆಸೆಸಿಟಿ ಇದೆ, ಎಲ್ಲಿ ಹೆಚ್ಚು ಬೇಕಾಗುತ್ತದ ಅಲ್ಲಿ ಹೆಚ್ಚು ಮಾಡಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಬಹಳ ಉತ್ತಮವಾದ ಸಲಹೆ ಇದೆ, ಇದನ್ನು ನಾನು ಪರಿಶೀಲನೆ ಮಾಡಿ ಮುಂದೆ ಕ್ರಮ ತೆಗದುಕೊಳ್ಳುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ರಸ್ತೆಗಳ ಬಗ್ಗೆ ಸಾಕಷ್ಟು

ಚರ್ಚೆಯಾಗುತ್ತಿದೆ. ನನ್ನದೊಂದು ಸಲಹೆ ಇದೆ. ಟೇಕನ್ ಓವರ್ ರಸ್ತೆ ಎಂದು ಇದೆ. ಅದು ಜಿಲ್ಲಾ ಪಂಚಾಯತಿಗೆ ಸೇರಿಲ್ಲ, ಲೋಕೋಪಯೋಗಿ ಇಲಾಖೆಗೂ ಸೇರಿಲ್ಲ, ತಾಲ್ಲೂಕು ಪಂಚಾಯತಿಗೂ ಸೇರಿಲ್ಲ. ಹೀಗಾಗಿ ಅದು ಹಾಳಾಗಿವೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ನನ್ನ ಒಂದೇ ತಾಲ್ಲೂಕಿನಲ್ಲಿ ಸುಮಾರು 600-700 ಕಿಲೋ ಮೀಟರ್ ಟೇಕನ್ ಓವರ್ ರಸ್ತೆಗಳು ಇದೆ. 1992ರ ನಂತರ ಅದಕ್ಕೆ ಬಡ್ಜೆಟ್ಟಿನಲ್ಲಿ 1 ರೂಪಾಯಿಯನ್ನೂ ಯಾರೂ ಇಟ್ಟಿಲ್ಲ. ಗ್ರಾಮಾಂತರ ರಸ್ತೆಗಳಲ್ಲಿ ಓಡಾಡಲು ಆಗುತ್ತಿಲ್ಲ. ಟೇಕನ್ ಓವರ್ ರಸ್ತೆಗಳ ಸಲುವಾಗಿ ಸ್ಪೆಸಿಫಿಕ್ ಆಗಿ ಯಾವುದಾದರೂ ಏರ್ಯ್ಸಾನಲ್ಲಿ, ಅದನ್ನು ಜಿಲ್ಲಾ ಪಂಚಾಯತಿಗೆ ಕೊಡುತ್ತೀರೋ ಗೊತ್ತಿಲ್ಲ. ಟೇಕನ್ ಓವರ್ ರಸ್ತೆಗಳಿಗೆಂದೇ ಸ್ಪೆಸಿಫಿಕ್ ಆಗಿ ಮೆನ್‌ಷನ್ ಮಾಡಿ ಒಂದಷ್ಟು ಹಣ ಕೊಡುತ್ತೀರಾ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಜಿಲ್ಲಾ ಪಂಚಾಯತಿ ಡಿಸ್ಟ್ರಿಕ್ಟ್ ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು. ಅವು ಪಿ.ಡಬ್ಲ್ಯು.ಡಿ ರಸ್ತೆಗಳಿಗೆ ಬರುವುದಿಲ್ಲ. ಜಿಲ್ಲಾ ಪ್ಲಾನ್‌ನಲ್ಲಿ ಅದನ್ನು ಸೇರಿಸಲಿಕ್ಕೆ ತಾವು ಪ್ರಯತ್ನ ಮಾಡಬೇಕು. ನಾನೂ ಕೂಡ ನಿಮ್ಮ ಜಿಲ್ಲಾ ಪಂಚಾಯತಿಯವರ ಜೊತೆ ಮಾತನಾಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಕೆಲವು ವಿಷಯಗಳನ್ನು ನಾನು ನಿನ್ನೆ ಪ್ರಸ್ತಾಪ ಮಾಡಿದೆ, ಅದಕ್ಕೆ ಸರಕಾರದ ಪತಿಯಿಂದ ಸಮರ್ಪಕವಾದ ಉತ್ತರ ಬರಲಿಲ್ಲ. ನುಡಿದಂತೆ ನಡೆಯುತ್ತಿಲ್ಲ, ನಿಮ್ಮ ಭರವಸೆಯಂತೆ ನೀವು ಸೋಗುತ್ತಿಲ್ಲವೆಂದು ಹೇಳಿದರೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ನಾವು ಗೆದ್ದಿದ್ದೇವೆಂದು ಹೇಳಿದಿರಿ. ಅಧಿಕಾರದಲ್ಲಿದ್ದಾಗ ನಮ್ಮವರೂ ಹಾಗೆಯೇ ಹೇಳುತ್ತಿದ್ದರು. ಗ್ರಾಮ ಪಂಚಾಯತಿಯಲ್ಲಿ ನಮಗೆ ಹೆಚ್ಚಿಗೆ ಬಂದಿದೆ. ನಮಗೆ ಜನರ ವಿಶ್ವಾಸ ಹೆಚ್ಚು ಇದೆ ಎಂಬ ಭ್ರಮೆ ನಮ್ಮವರಿಗೂ ಇತ್ತು. ನೀವೂ ಆ ಭ್ರಮೆಯಲ್ಲಿ ತೇಲಾಡಬೇಡಿ. ಕೇಂದ್ರ ಸರಕಾರದ ಹೊಸ ಆರ್ಥಿಕ ಉದಾರೀಕರಣ ನೀತಿ ಏನು ಇದೆ ಆ ನೀತಿ ಈ ದೇಶವನ್ನು ಗುಲಾಮಗಿರಿಗೆ ತಳ್ಳುತ್ತದೆ. ಕೃಷಿ ಪ್ರಗತಿ ಕುಂಠಿತವಾಗುತ್ತದೆ, ನಿರುದ್ಯೋಗ ಸಮಸ್ಯೆ ಉದ್ಭವವಾಗುತ್ತದೆ. ಬಡತನ ಸಮಸ್ಯೆ ಜಾಸ್ತಿಯಾಗುತ್ತದೆ ಇವೆಲ್ಲವನ್ನು ತಾವು ಹೇಳಿದ್ದಿರಿ. ಪಟ್ಟಭದ್ರ ಹಿತಾಶಕ್ತಿಗಳ ಅಧಿಕೃತ ವಕ್ತಾರರಂತೆ ಆ ಸರಕಾರ ಕೆಲಸ ಮಾಡುತ್ತಿತ್ತೆಂದು ಹೇಳಿದಿರಿ. ಇವತ್ತು ತಾವು ಹೋಳುತ್ತೀರಿ, ಕರ್ನಾಟಕ ಸರಕಾರದಲ್ಲಿ ಬಹಳ ಮುಕ್ತವಾದ ವಾತಾವರಣ ಇದೆ ನಾವು ಸ್ವಾಗತ ಮಾಡುತ್ತೇವೆಂದು ಹೇಳುತ್ತೀರಿ ಅದಕ್ಕೆ ತಮ್ಮ ಉತ್ತರವೇನು ಎಂದು ಕೇಳಿದ್ದಕ್ಕೆ ತಾವು ಉತ್ತರ ಕೊಡಲಿಲ್ಲ. ಮತ್ತೊಂದು ಅಂಕಿ ಕೊಡುವಾಗ ತಾವು ಕಳೆದ ಸಾರಿ ಬಡ್ಜೆಟ್ಟಿನಲ್ಲಿ ಹೇಳಿದ್ದಿರಿ. ವಾಸ್ತವಿಕವಾಗಿ ಕಾರ್ಯರೂಪಕ್ಕೆ ತರಬಹುದಾದಂಥ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆಂದು ತಾವು ಹೇಳಿದ್ದಿರಿ. ಸುಮಾರು 1,26000 ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಿರಿ. ಈಗ ನೀವು ಕಟ್ಟಿರುವುದು 36 ಸಾವಿರ. ಸುಮಾರು ಎರಡೂವರೆ ಲಕ್ಷ ನಿವೇಶನ ಕೊಡುತ್ತೇವೆಂದು

ಹೇಳಿದ್ದಿರಿ, ಈಗ ನೀವು ಕೊಟ್ಟಿರತಕ್ಕಂಥಾದ್ದು ಕಾಲು ಭಾಗವೂ ಇಲ್ಲವೆಂದು ಅನ್ನಿಸುತ್ತದೆ. ಪ್ರಮುಖವಾಗಿ ಪ್ರಸ್ತಾಪ ಮಾಡುವುದು ಏನೆಂದರೆ, ವರ್ಗಾವಣೆ ನೀತಿ. ನಾನು ನಿನ್ನೆ ಹೇಳಿದೆ. 1ನೇ ದರ್ಜೆ, ಎರಡನೇ ದರ್ಜೆ ವರ್ಗಾವಣೆಯನ್ನು ಇಲ್ಲಿ ಮಾತ್ರ ಅಂದರೆ ವಿಧಾನ ಸೌಧದಲ್ಲಿ ಇಟ್ಟುಕೊಂಡಿದ್ದೀರಿ, ಬಾಕಿ ಎಲ್ಲವನ್ನೂ ಕೂಡ ಇಲಾಖಾ ಮುಖ್ಯಸ್ಥರಿಗೆ, ಜಿಲ್ಲೆಗೆ ಕೊಡುತ್ತೇವೆಂದು ಹೇಳಿದ್ದಿರಿ. ಇವತ್ತು ಅದನ್ನು ಕೊಟ್ಟೂ ಇಲ್ಲ ಇದು ವರ್ಷಂ ಪೂರ್ತಿ ನಡೆಯುತ್ತಿದೆ. ಅದಕ್ಕೆ ತಾವೇನು ಉತ್ತರ ಹೇಳುತ್ತೀರಿ ಎಂದು ತಮ್ಮಿಂದ ನಿರೀಕ್ಷೆ ಮಾಡುತ್ತೇನೆ. ಕೊನೆಯದಾಗಿ ಈ ಸದನದಲ್ಲಿ ಕಾವೇರಿ ನ್ಯಾಯ ಮಂಡಲಿಯ ತೀರ್ಪಿನ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡಿದ್ದೆವು. ಆ ನಿರ್ಣಯವನ್ನು ಅನುಷ್ಠಾನ ಮಾಡಲಿಕ್ಕೆ ಸಾಧ್ಯವಾಗದೇ ಇರುವುದರಿಂದ ಅವನ್ನು ತಿರಸ್ಕರಿಸಬೇಕೆಂದು ಈ ಸದನ ಸರ್ವಾನುಮತದಿಂದ ನಿರ್ಣಯ ಕೈಗೊಂಡಿತ್ತು. ನಿರ್ಣಯ ಕೈಗೊಂಡ ಮೇಲೆ ನೀವು ಹೇಗೆ ಹೊರಗಡೆ.....

ಶ್ರೀ ಸಿ. ಬೈರೇಗೌಡ : ಈ ಸದನದ ತೀರ್ಮಾನವನ್ನು ಉಲ್ಲಂಘಿಸಿ ಸರಕಾರ ನಡೆದಿದ್ದರೆ. ಇಲ್ಲಿ ನೀವು ಹಕ್ಕುಚ್ಯುತಿ ನಿರ್ಣಯವನ್ನು ತರಬಹುದು. ಈ ಸದನವನ್ನು ಕಡೆಗಾಣಿಸಿದೆ ಎಂಬ ನಿರ್ಣಯವನ್ನು ಸಹ ತರಬಹುದು. ದಯವಿಟ್ಟು ಆ ರೀತಿ ಮಾಡಿ.

ಶ್ರೀ ಎ.ಟಿ. ರಾಮಸ್ವಾಮಿ : ಈ ಸದನ ನಿರ್ಣಯ ಕೈಗೊಂಡಿದ್ದು ಈಗ ಈ ಸದನದ ನಿರ್ಣಯ ಪರಮೋಚ್ಛವೋ ಹೊರಗಡೆ ಪಕ್ಷದ ನಾಯಕರುಗಳನ್ನು ಕರೆದು ನಿರ್ಣಯ ಕೈಗೊಂಡರಲ್ಲ ಅದು ಪರಮೋಚ್ಛವೋ ಎಂಬುದನ್ನು ತಾವು ತಿಳಿಸಬೇಕೆಂದು ಸದನದಲ್ಲಿ ತಮ್ಮ ಮೂಲಕ ಸರಕಾರವನ್ನು ವಿನಂತಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸದಸ್ಯರು ನಿನ್ನೇ ಕೇಳಿದ ವಿಚಾರಗಳನ್ನೇ ಇಂದು ಪ್ರಸ್ತಾಪ ಮಾಡಿದ್ದಾರೆ. ನೀವು ಭ್ರಮೆಯಲ್ಲಿರಬೇಡಿ ನಾವು ಹೀಗೆ ಹೇಳುತ್ತಿದ್ದವು ನಾವು ಸೋತು ಬಿಟ್ಟೆವು ಎಂದು ಹೇಳಿದ್ದಾರೆ. ನಾವು ಯಾವಾಗಲೂ ಭ್ರಮೆಯಲ್ಲಿ ಇರುವುದಿಲ್ಲ. ನಾವು ಯಾವಾಗಲೂ ವಾಸ್ತವಿಕ ಲೋಕದಲ್ಲೇ ಇರುವುದು. ರಾಜಕಾರಣದಲ್ಲಿ ಭ್ರಮೆಯನ್ನು ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ. ಜನರು ಅಂತಿಮವಾಗಿ ತೀರ್ಮಾನ ಮಾಡುವವರು. ನಾವೇ ಅದನ್ನು ತಿದ್ದುಕೊಳ್ಳುವುದಕ್ಕಾಗುವುದಿಲ್ಲ. ಜನರು ತೀರ್ಮಾನ ಮಾಡುವುದರಿಂದ ಯಾರೂ ಭ್ರಮೆಯಲ್ಲಿ ಇರಬೇಕಾದ ಅಗತ್ಯ ಇಲ್ಲ. ವಾಸ್ತವಿಕವಾದ ಅಂಶ ಹೇಳಿದ್ದೇನೆ. ಮನೆ ಕಟ್ಟುವುದರ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಫಲಾನುಭವಿಗಳನ್ನು ಗುರುತು ಮಾಡುವುದರಲ್ಲಿ ಗ್ರಾಮ ಸಭೆ, ತಾಲ್ಲೂಕು ಪಂಚಾಯತಿ ಈ ಗೊಂದಲದಲ್ಲಿ ಸ್ವಲ್ಪ ವಿಳಂಬವಾಯಿತು. ಈಗ ನಾವು ಜಮೀನುಗಳನ್ನು ಕೊಂಡು ಕೊಳ್ಳಬೇಕಾಗಿದೆ. ಹಿಂದೆ ಗೋಮಾಳವಿದ್ದುದನ್ನು ಹಂಚಿದ್ದೇವೆ. ಈಗ ಯಾವುದೂ ಇಲ್ಲ. ಹಾಗಾಗಿ ಈಗ ಸುಮಾರು 36 ಸಾವಿರ ಮನೆಗಳನ್ನು ಕಟ್ಟಿದ್ದೇವೆ. ಜೂನ್ ಒಳಗಡೆ 1,26,000 ಮನೆಗಳು ಎಂದು ನಾವು ಏನು ಹೇಳಿದ್ದೇವೆ, ಅಷ್ಟು ಮನೆಗಳನ್ನು ಕಟ್ಟುತ್ತೇವೆ. ಅವು ಬೇರೆ ಬೇರೆ ಹಂತದಲ್ಲಿ ಇವೆ. ಈಗಾಗಲೇ ಸುಮಾರು 1

ಲಕ್ಷ ನಿವೇಶಗಳನ್ನು ಹಂಚಲಿಕ್ಕೆ ಸಿದ್ಧತೆಯಾಗಿದೆ. ಉಳಿದ ನಿವೇಶನಗಳನ್ನು ನಾವು ಹಂಚುತ್ತೇವೆ. ಕಾವೇರಿ ಬಗ್ಗೆ ಚರ್ಚೆಯಾಗಿದೆ. ಈ ಸದನಕ್ಕೆ ಪರಮೋಚ್ಚ ಅಧಿಕಾರ ಇದೆ ಎನ್ನುವುದರಲ್ಲಿ ನನ್ನದೇನೂ ತಕರಾರು ಇಲ್ಲ. ಅದಕ್ಕೆ ವಿರುದ್ಧವೂ ಇಲ್ಲ. ಇಲ್ಲಿ ಏನು ತೀರ್ಮಾನವಾಗುತ್ತದೆ, ಅದನ್ನು ನಾವು ಪಾಲನೆ ಮಾಡಬೇಕು. ಅವರ ವಿರೋಧ ಪಕ್ಷದ ಸದಸ್ಯರು, ಮಾನ್ಯ ಖರ್ಗೆಯವರು, ಮಾನ್ಯ ಮೊಯಿಲಿಯವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಬಂಗಾರಪ್ಪನವರೂ, ಮಾನ್ಯ ವಾಟಾಳ್ ನಾಗರಾಜ್‌ರವರೂ, ರಾಜೇಂದ್ರನ್ ಅವರೂ ಇದ್ದರು. ಇವರೆಲ್ಲ ಇದ್ದರು. ಎಲ್ಲ ತೀರ್ಮಾನ ಮಾಡಿ, ರಾಜ್ಯದ ಹಿತದೃಷ್ಟಿಯಿಂದ, ನಮ್ಮ ಹಕ್ಕನ್ನು ರಕ್ಷಣೆ ಮಾಡಿಕೊಳ್ಳುವ ದೃಷ್ಟಿಯಿಂದ ತೆಗೆದುಕೊಂಡಿರತಕ್ಕಂತಹ ನಿರ್ಣಯವೆಂದು ತಿಳಿಸಲಿಕ್ಕೆ ಬಯಸುತ್ತೇನೆ. ಆದ್ದುದರಿಂದ ಇದರ ಉಲ್ಲಂಘನೆಯಾಗಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಪುಟ 93ರಲ್ಲಿ ವಹಿವಾಟು ತೆರಿಗೆಯನ್ನು ಹೊಸದಾಗಿ ಹಾಕಿರುವುದರಲ್ಲಿ ಪವರ್ ಟಿಲ್ಲರ್‌ಗೆ ತೆರಿಗೆ ತೆಗೆದು ಹಾಕಿದ್ದೇವೆಂದು ಹೇಳಿದಿರಿ. ಹೊಸದಾಗಿ ವಹಿವಾಟು ತೆರಿಗೆ 1 ಪರ್ಸೆಂಟ್ ಹಾಕಿದ್ದೀರಿ. ಆದ್ದುದ್ದರಿಂದ ತಾವು ದಯಮಾಡಿ ಅವಲೋಕನೆ ಮಾಡಬೇಕು.

ಶ್ರೀ ಸಿದ್ಧರಾಮಯ್ಯ : ವಹಿವಾಟು ತೆರಿಗೆ ಕೊಡುವವರು ಪವರ್ ಟಿಲ್ಲರ್ ತೆಗೆದು ಕೊಳ್ಳುವವರು ಅಲ್ಲ. ಯಾರು ಡೀಲರ್ ಇರುತ್ತಾರೆ ಅವರು. ವಹಿವಾಟು ತೆರಿಗೆ ಅಂದರೆ Nothing but an Income Tax. ರೈತರಿಗೆ ಅನುಕೂಲವಾಗಬೇಕೆಂದು ಒಂದು ಕಡೆ ಹೇಳುತ್ತೀರಿ, ಡೀಲರ್‌ಗೆ ಅನುಕೂಲವಾಗಬೇಕೆಂದು ಮತ್ತೊಂದು ಕಡೆ ಹೇಳುತ್ತಿರಿ. ಟಿ.ಒ.ಟಿ. ಎನ್ನುವುದು ಟ್ಯಾಕ್ಸ ಅಂಡ್ ಟರ್ನ್ ಒವರ್, ಅದನ್ನು ಹಾಕತಕ್ಕಂಥದ್ದು ಯಾರು ಡೀಲರ್ ಇರುತ್ತಾರೆ ಅವರ ಇನ್‌ಕಂ ಮೇಲೆ ಬೀಳ ತಕ್ಕಂತಹ ತೆರಿಗೆ. ಮಾನ್ಯ ಸದಸ್ಯರು ಒತ್ತಾಯ ಮಾಡಿದ ಮೇಲೆ ಪವರ್ ಟಿಲ್ಲರ್ ಮೇಲೆ 4 ಇದ್ದುದನ್ನು 2ಕ್ಕೆ ಇಳಿಸಿದ್ದೇವೆ. ಮತ್ತೆ ಎಲ್ಲಾ ಕಡೆಯೂ ತೆರಿಗೆ ಇದೆ. ಆದ್ದರಿಂದ TOT ರೈತರ ಮೇಲೆ ಹೊರೆಯಾಗತ್ಕಂತಹ ತೆರಿಗೆ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ : ವಹಿವಾಟು ತೆರಿಗೆ ರೈತರ ಮೇಲೆ ಬೀಳುತ್ತದೆ. ತಾವು ಅರ್ಥ ಮಾಡಿಕೊಳ್ಳಬೇಕು. ಹಾಲು ಉತ್ಪಾದನೆ ಇಡೀ ರಾಜ್ಯದಲ್ಲಿ ಕೆಳಮಟ್ಟಕ್ಕೆ ಬರುತ್ತಿವೆ. ತಾವು ಫಿಗರ್ಸ್ ತರಿಸಿ ನೋಡಿ. ಹಾಲು ಉತ್ಪಾದನೆ ಏಪ್ರಿಲ್ ಮೇ ತಿಂಗಳಲ್ಲಿ 20 ಪರ್ಸೆಂಟ್ ಹಾಲು ಕಡಿತವಾಗಿದೆ. ಎಲ್ಲಾ ಡೈರಿಗಳಲ್ಲೂ ಕೂಡ ಈಗಾಗಲೇ ಸೂಚನೆಯಲ್ಲಿ ಎಲ್ಲಾ ಸೊಸೈಟಿಗಳಿಗೆ ಕಳಿಸಿದ್ದಾವೆ. ಪಶು ಆಧಾರದ ಮೇಲೆ, ಪಶು ಆಹಾರಕ್ಕೆ ಪೂರಕವಾಗಿರತ್ಕಂತಹ ಸಾಮಗ್ರಿ ಮೇಲೆ 1 ಪರ್ಸೆಂಟ್ ವಹಿವಾಟು ತೆರಿಗೆಯನ್ನು ತಾವು ಹೇಳಿದ್ದೀರಿ. ಇದರಿಂದಾಗಿ 1 ಮೂಟೆ ಪಶು ಆಹಾರಕ್ಕೆ 4ರಿಂದ 5ರೂಪಾಯಿ ಬೆಲೆ ಜಾಸ್ತಿಯಾಗುತ್ತಿದೆ. ಇದು ರೈತರಿಗೆ ಒಳ್ಳೆಯದು ಮಾಡುವುದಲ್ಲ, ಹೈನುಗಾರಿಕೆಗೆ ಒಳ್ಳೆಯದು ಮಾಡುವುದಲ್ಲ ಕೆಟ್ಟದ್ದಾಗುತ್ತದೆ. ಒಂದು ಪ್ರಸ್ತಾಪವನ್ನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಅರಿಕೆ ಮಾಡಿಕೊಂಡಿದ್ದೆ. ಗೃಹ

ಇಲಾಖೆಯಲ್ಲಿ ನಮ್ಮ ಹೋಮ್ ಗಾರ್ಡ್ಸ್‌ಗೆ ವರ್ಷಕ್ಕೊಂದು ಜೊತೆ ಯೂನಿಫಾರಂ ಅನ್ನು ಕಡ್ಡಾಯವಾಗಿ ಕೊಡುವ ವ್ಯವಸ್ಥೆ ಮಾಡಿ. ದುರ್ಬಲ ವರ್ಗದ ಜನ ಸೇವಾ ಮನೋಭಾವದಿಂದ ದುಡಿಯುತ್ತಿದ್ದಾರೆ. ಅವರಿಗೆ ನೀವು ಯೂನಿಫಾರಂ ಅನ್ನು 2-3 ವರ್ಷಕ್ಕೊಂದು ಸಲ ಕೊಡುತ್ತಿದ್ದೀರಿ. ದಯಮಾಡಿ ವರ್ಷಕ್ಕೊಂದು ಟೆರಿಕಾಟ್ ಸಮವಸ್ತ್ರವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ಸಹಾಯಕರನ್ನು ಒದಗಿಸಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇವೆ. ಇದು ಕೊನೆಯ ದಿನವಾಗಿರುವುದರಿಂದ ತಾವೇನಾದರೂ ಇದಕ್ಕೆ ಉತ್ತರವನ್ನು ಹೇಳುತ್ತೀರೋ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಪಶು ಆಹಾರಕ್ಕೆ ತೆರಿಗೆ ಮೊದಲು ಎರಡು ಪರ್ಸೆಂಟ್ ಇತ್ತು ಅದನ್ನು ಈಗ ಒಂದು ಪರ್ಸೆಂಟ್ ಇಳಿಸಿದ್ದೇನೆ. ಹಾಲಿನ ಉತ್ಪಾದನೆಯು ಜಾಸ್ತಿಯಾಗುತ್ತದೆ. ಒಂದೊಂದು ಕಾಲದಲ್ಲಿ, ಲೀನ್ ಪೀರಿಯೇಡ್‌ನಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಫ್ಲಷ್ ಪೀರಿಯೇಡ್‌ನಲ್ಲಿ ಹಾಲಿನ ಉತ್ಪಾದನೆ ಜಾಸ್ತಿಯಾಗುತ್ತದೆ. ಆ ಸಂದರ್ಭದಲ್ಲಿ ನಾವು ನಮ್ಮ ರಾಜ್ಯದಲ್ಲಿ ಹಾಲನ್ನು ಮಾರಾಟ ಮಾಡಲು ಸಾಧ್ಯವಾಗದೆಯೇ ಹೊರ ರಾಜ್ಯಗಳಾದ ಕಲ್ಕತ್ತಾ ಮುಂತಾದ ರಾಜ್ಯಗಳಿಗೆ ಕಳುಹಿಸಬೇಕಾದ ಪರಿಸ್ಥಿತಿಯಾಗಿ, ಒಂದೊಂದು ಸಲ ಹಾಲನ್ನು ಚೆಲ್ಲಬೇಕಾದ ಪರಿಸ್ಥಿತಿ ಆಗಿರತಕ್ಕ ಅನೇಕ ನಿದರ್ಶನಗಳಿವೆ. ಹಾಲಿನ ಪ್ರಮಾಣ ಕರ್ನಾಟಕದಲ್ಲಿ ಜಾಸ್ತಿಯಾಗಿದೆ. ಇವತ್ತು ಒಂದು ದಿವಸಕ್ಕೆ ಸುಮಾರು 13-14 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆದ್ದದ್ದರಿಂದ ಹಾಲಿನ ಮಾರಾಟ ಮಾಡುವುದೂ ಸಹ ಬಹಳ ಕಷ್ಟದ ಕೆಲಸವಾಗಿದೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಕಳೆದ ಸಲದ ಬಜೆಟ್‌ನಲ್ಲಿ ಹಣಕಾಸು ಸಚಿವರು ಕಾಫಿಯ ಮೇಲೆ ಭಾರಿ ತೆರಿಗೆಯನ್ನು ಹಾಕಿದ್ದರು. ಅದನ್ನು ಸ್ವಲ್ಪ ಇಳಿಸಬೇಕೆಂದು ನಾವು ಅವರನ್ನು ಹೇಳಿಕೊಂಡಿದ್ದೆವು. ಭಾರಿ ಅಲ್ಲದಿದ್ದರು ಸ್ವಲ್ಪ ಪ್ರಮಾಣದಲ್ಲಿ ತೆರಿಗೆಯನ್ನು ಇಳಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಕಾಫಿಯಂತೆ ಏಲಕ್ಕಿ ಮತ್ತು ಮೆಣಸಿನ ಬೇಸಾಯವೂ ಅವನತಿಯ ಅಂಚನ್ನು ತಲುಪುತ್ತಿದೆ. ಏಲಕ್ಕಿ ಬೆಳೆಗಾರರ ಸ್ಥಿತಿ ಸಂಪೂರ್ಣವಾಗಿ ಶೋಚನೀಯವಾಗಿದೆ. ಏಲಕ್ಕಿಯ ಗಿಡವೂ ಹೋಗತಕ್ಕ ಪರಿಸ್ಥಿತಿ ಬಂದಿದೆ. ಕೆ.ಜಿ. ಯೊಂದಕ್ಕೆ 600-700 ನೂರು ರೂಪಾಯಿ ಇದ್ದಂಥ ದರವು ಈಗ ನೂರು ರೂಪಾಯಿಗೆ ಇಳಿದಿದೆ. ಈ ಏಲಕ್ಕಿ ವ್ಯವಸಾಯವನ್ನು ಬಿಟ್ಟು ಬೇರೆ ವ್ಯವಸಾಯವನ್ನು ಮಾಡಬೇಕಾದರೆ ಅಲ್ಲಿರತಕ್ಕ ಮರಗಳನ್ನು ತೆಗೆಯಬೇಕು. ಅದಕ್ಕೆ ಸರ್ಕಾರ ಅಡ್ಡ ಬರುತ್ತಿದೆ. ಕಾಫಿ ಹಾಕಿರತಕ್ಕ ಭಾಗದಲ್ಲಿ ಒಂದೂವರೆ ಮೀಟರ್‌ವರೆಗೆ ಮರವನ್ನು ತೆಗೆಯಲು ಅವಕಾಶವಿದೆ. ಆದರೆ ಏಲಕ್ಕಿ ಹಾಕತಕ್ಕ ಜಾಗದಲ್ಲಿ ಒಂದು ಮೀಟರ್‌ಗಿಂತ ಕೆಳಗೆ ಇರತಕ್ಕ ಮರಗಳನ್ನು ತೆಗೆಯಬೇಕೆಂದು ಕಾನೂನು ಮಾಡಿದ್ದಾರೆ. ಈ ರೀತಿ ಕಾಫಿಗೇ ಬೇರೆ ಏಲಕ್ಕಿಗೇ ಬೇರೆ ಕಾನೂನನ್ನು ಮಾಡಿದ್ದೀರಿ. ಆದ್ದರಿಂದ ಕಾಫಿಗೆ ಏನು ಒಂದೂವರೆ ಮೀಟರ್‌ವರೆಗೆ ಮರಗಳನ್ನು ತೆಗೆಯಲು ಅವಕಾಶ

ಮಾಡಿಕೊಟ್ಟಿದ್ದೀರಿ. ಅದೇ ರೀತಿ ಏಲಕ್ಕಿಗೂ ಅವಕಾಶ ಮಾಡಿಕೊಡಬೇಕು. ಇದರಿಂದ ಏಲಕ್ಕಿ ಇರುವ ಕಡೆಗಳಲ್ಲಿ ಕಾಫಿಯನ್ನು ಬೆಳೆಯುವ ಅವಕಾಶವಾಗುತ್ತದೆ. ಎರಡನೆಯದು ತಾವು ಈ ಸಾರಿ ಲೋಕೋಪಯೋಗಿ ಇಲಾಖೆಗೆ ಹಣವನ್ನು ಕಡಿಮೆ ಮಾಡಿದ್ದೀರಿ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲಾಪರಿಷತ್ ರಸ್ತೆಗಳು ಇರತಕ್ಕ ಜಾಗದ ನಮ್ಮ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳಿ ಎನ್ನತಕ್ಕ ಒತ್ತಡಗಳು ಬರುತ್ತಿದೆ. ಏಕೆಂದರೆ ಲೋಕೋಪಯೋಗಿ ಇಲಾಖೆಗೆ ನಮ್ಮ ರಸ್ತೆಗಳು ಸೇರಿದರೆ ಸ್ವಲ್ಪ ಚೆನ್ನಾಗಿರಬಹುದು ಎನ್ನುವುದು ನಮ್ಮ ಭಾವನೆಯಾಗಿದೆ. ಲೋಕೋಪಯೋಗಿ ಇಲಾಖೆಗೆ ಕೊಡತಕ್ಕ ಹಣವನ್ನು ತಾವು ಇವತ್ತು ಕಡಿಮೆ ಮಾಡಿದರೆ, ಲೋಕೋಪಯೋಗಿ ಇಲಾಖೆಯ ರಸ್ತೆಗಳು ಜಿಲ್ಲಾ ಪರಿಷತ್‌ನ ಮಾದರಿಗೆ ಬರುವುದಾಗಿದ್ದರೆ ಬಹುಶ ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಇರತಕ್ಕಂಥ ಹೆಸರೂ ಹೊರಟು ಹೋಗುತ್ತದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಗೆ ಯಾವುದೇ ಕಾರಣದಿಂದ ಹಣವನ್ನು ಕಡಿಮೆ ಮಾಡಬಾರದು, ಸಾಧ್ಯವಾದರೆ ಇನ್ನೂ ಜಾಸ್ತಿ ಹಣವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಪ್ಪನವರು.... ಕಾಫಿಗೆ ಏನು ಮರವನ್ನು ತೆಗೆಯುವ ಬಗ್ಗೆ ರಿಯಾಯಿತಿ ಇದೆ ಅದೇ ರೀತಿ ಏಲಕ್ಕಿಗೂ ಕೊಡಬೇಕೆಂದು ಹೇಳಿದ್ದಾರೆ. ಅದರ ಸಾಧಕ ಬಾಧಕಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇನ್ನು ರಸ್ತೆಗಳ ಬಗ್ಗೆ ನಾನು ಈಗಾಗಲೇ ಎರಡುಮೂರು ಬಾರಿ ಹೇಳಿದ್ದೇನೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದಕ್ಕೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರಹಳ್ಳಿ) : ಮಾನ್ಯ ಅಧ್ಯಕ್ಷರೆ, ಸರ್ಕಾರವು ನೀರಾವರಿಗೆ ಸಂಬಂಧಪಟ್ಟಂತೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೃಷ್ಣ ಮತ್ತು ಕಾವೇರಿ ನದಿ ಪಾತ್ರಗಳಲ್ಲಿ ದೀರ್ಘ ಕಾಲದಿಂದ ಬಾಕಿ ಉಳಿದಿರತಕ್ಕಂಥ ಯೋಜನೆಯನ್ನು ಪೂರ್ಣಗೊಳಿಸಲು ಪ್ರಾಮುಖ್ಯತೆಯನ್ನು ಕೊಟ್ಟಿದೆ. ಆದರೆ ಕಬಿನಿ ಎರಡನೆಯ ಹಂತಕ್ಕೆ ಸಂಬಂಧಪಟ್ಟಂತೆ ಈ ಆಯವ್ಯಯದಲ್ಲಿ ಯಾವುದೇ ರೀತಿಯಾದ ಅವಕಾಶವನ್ನು ಕಲ್ಪಿಸಿ ಕೊಟ್ಟಿಲ್ಲ. ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಾಲಿ ಮುಖ್ಯಮಂತ್ರಿಗಳಾಗಿರುವ ದೇವೇಗೌಡರು ನೀರಾವರಿ ಸಚಿವರಾಗಿದ್ದರು. ದಿವಂಗತ ನಜೀರ್ ಸಾಬ್‌ರವರು, ಬಿ. ರಾಚಯ್ಯನವರು, ಸಿದ್ಧರಾಮಯ್ಯನವರು ಅಂದು ಸಚಿವರಾಗಿದ್ದರು. 1986ರಲ್ಲಿ ಕಬಿನಿ ಯೋಜನೆಯ ಎರಡನೆಯ ಹಂತಕ್ಕೆ ಅಡಿಗಲ್ಲನ್ನೂ ಕೂಡ ಹಾಕಿದ್ದರು. ಅದು ಸುಮಾರು 390 ಕೋಟಿ ರೂಪಾಯಿಗಳ ಯೋಜನೆ. ಈ ವಿಚಾರದಲ್ಲಿ ಸರ್ಕಾರ ಅಂದಿನಿಂದ ಇಲ್ಲಿಯವರೆಗೆ ಗಮನವನ್ನು ಹರಿಸಿಲ್ಲ. ಮುಂದಾದರೂ ಸಹ, ಮಾನ್ಯ ಹಣಕಾಸು ಸಚಿವರು ಮೈಸೂರು ಜಿಲ್ಲೆಯವರಾಗಿರುವುದರಿಂದ ಹೆಚ್ಚಿನ ಆದ್ಯತೆಯನ್ನು ಕಬಿನಿ ಎರಡನೆಯ ಹಂತಕ್ಕೆ ಕೊಡಬೇಕು. ಆ ರೀತಿ ಈ ಯೋಜನೆಯನ್ನು ಮಾಡಲು ಅವಕಾಶ ಮಾಡಿಕೊಟ್ಟರೆ

ನಂಜನಗೂಡು, ಗುಂಡ್ಲುಪೇಟೆ, ಸಂತೆಮರಳ್ಳಿ, ಯಳಂದೂರು, ಚಾಮರಾಜನಗರ, ಹನೂರು ಕ್ಷೇತ್ರಗಳ ಭಾಗದ ರೈತರಿಗೆ ಇದೊಂದು ವರದಾನವಾಗಿ ಬಹಳ ಉಪಯೋಗವಾದಂತಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಸಚಿವರ ಗಮನವನ್ನು ಇದರ ಬಗ್ಗೆ ಸೆಳೆಯ ಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಕಬಿನಿ ಎರಡನೆಯ ಹಂತದ ಬಗ್ಗೆ ಅವರು ಮಾತನಾಡಿದ್ದಾರೆ. ಅದಕ್ಕೆ ಬಹಳಷ್ಟು ಅಡೆತಡೆ ಇದೆ, ಹಣಕಾಸನ್ನು ಒದಗಿಸಬೇಕಾಗುತ್ತದೆ. ಅರಣ್ಯ, ಪರಿಸರ ಮುಂತಾದ ಅನೇಕ ಕಡೆಗಳಿಂದ ಅದಕ್ಕೆ ಅಡೆತಡೆಗಳು ಇದೆ. ಇದರ ಬಗ್ಗೆ ಸರ್ಕಾರ ಕೂಲಂಕುಷವಾಗಿ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಜೆ.ಬಿ. ಶಿವಕುಮಾರ್ (ಕೆರಗೋಡು) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಹಣಕಾಸು ಸಚಿವರ ಗಮನಕ್ಕೆ ನೇರವಾಗಿ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ಕೈಗಾರಿಕೆಗಳು ತೊಂದರೆಗೆ ಈಡಾಗಿರುವುದು ಎಲ್ಲರಿಗೂ ವೇದ್ಯವಾಗಿರತಕ್ಕ ವಿಚಾರ. ತಾವು ಹಣಕಾಸು ಸಚಿವರಾಗಿರುವುದರಿಂದ, ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಕೈಗಾರಿಕೆಗಳಿಗೇನು ಸಾಲವನ್ನು ಕೊಟ್ಟು ಸರ್ಕಾರದಿಂದ ಸಹಾಯ ಮಾಡಿ ಕೈಗಾರಿಕೆಗಳು ನಡೆಯುವಂತೆ ಮಾಡಿದ್ದರೂ ಅದು ಪೂರ್ಣ ಪ್ರಮಾಣದಲ್ಲಿ ನಡೆಯದಿರುವುದರಿಂದ ಆ ಕೈಗಾರಿಕೆಯವರ ಮೇಲೆ ಹಾಕುತ್ತಿರುವ ಬಡ್ಡಿಯ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಪಡೆದುಕೊಂಡು ಕೈಗಾರಿಕೆಗಳು ದುಸ್ಥಿತಿಯಲ್ಲಿರಬೇಕಾದರೆ ಅದಕ್ಕೆ ಕಾರಣಕರ್ತರುಗಳಾರು ಎಂಬುದರ ಬಗ್ಗೆ ಅಧ್ಯಯನ ಮಾಡಿ ಕೈಗಾರಿಕೆಗಳವರಿಗೆ ಏನು ಪೀನಲ್ ಬಡಿನೋ, ರೀಶೆಡ್ಯೂಲ್ಡ್ ಮಾಡಿಕೊಳ್ಳತಕ್ಕದ್ದೋ, ಇನ್ನು ಯಾವುದಾದರೂ ರೀತಿಯಲ್ಲಿ ರಿಯಾಯಿತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಜಿಲ್ಲಾಪರಿಷತ್‌ಗಳು ನಾಲಾ ರಸ್ತೆಗಳು ಅತಂತ್ರ ಸ್ಥಿತಿಯಲ್ಲಿವೆ. ಅದನ್ನು ನೀರಾವರಿ ಇಲಾಖೆಗೆ ವಾಪಸ್ ಕೊಡಬೇಕೆಂದು ಶಾಸಕಾಂಗ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೇವೆ. ನೀರಾವರಿ ಇಲಾಖೆಯವರು ಕೊನೆಯ ಪಕ್ಷ ಅವರು ಸಿಲ್ಟ ತೆಗೆದು ಮಣ್ಣನ್ನು ಹಾಕಿಕೊಂಡು ನಾಲಾರಸ್ತೆಗಳನ್ನು ಓಡಾಡಲು ಅನುಕೂಲವಾಗುವಂತಾದರೂ ಮಾಡುತ್ತಾರೆ. ಜಿಲ್ಲಾಪರಿಷತ್ ಲ್ಲಿ ಹಣವಿಲ್ಲವೆಂದು ಅದನ್ನು ಯಾರೂ ನೋಡಿಕೊಳ್ಳಲೂ ಆಗದೇ ಇರತಕ್ಕ ದುಸ್ತಿತಿಯಲ್ಲಿದೆ. ಆದ್ದರಿಂದ ನಾಲಾ ಪ್ರದೇಶದ ರಸ್ತೆಗಳನ್ನು ವಾಪಸ್ ನೀರಾವರಿ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ತಾವು ತೀರ್ಮಾನ ಕೊಡಬೇಕು. ಇನ್ನು ಸಿನಿಮಾ ಪ್ರದರ್ಶನ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು - ನಾನು ಈ ಹಿಂದೆ ಮಾತನಾಡುತ್ತಾ ಹೇಳಿದ್ದೆ. ಇದರಿಂದ ನಮಗೆ ಆದಾಯ ಬರುವುದಿದ್ದರೂ ಪರಿಣಾಮ ಜಾಸ್ತಿ ಇದೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಒಂಭತ್ತು ಗಂಟೆಗೆ ಬಸ್ಸು ಹತ್ತಿಕೊಂಡು ಬರತಕ್ಕ ಜನರಲ್ಲಿ ನೂರಕ್ಕೆ ತೊಂಬತ್ತು ಭಾಗ ಜನರು ಸಿನಿಮಾ ನೋಡಲು ಬರುತ್ತಾರೆ. ಶಾಲಾಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಮಾಡಿಕೊಟ್ಟಿರುವ ಸಾರಿಗೆ ವ್ಯವಸ್ಥೆಯು ಇವತ್ತು ಸಿನಿಮಾ ನೋಡಲು ಬರುವವರಿಗೆ

ಉಪಯೋಗ ವಾಗುತ್ತಿದೆ. ಆದಾಯ ಒಂದು ಕಡೆ ಇರಲಿ, ಸಾರಿಗೆ ಸೌಲಭ್ಯ ಗ್ರಾಮಾಂತರ ಪ್ರದೇಶಕ್ಕೆ ಅನುಕೂಲ ವಾಗಬೇಕಾದರೆ ತಾವು ಸಿನಿಮಾ ಪ್ರದರ್ಶನದ ಸಂಖ್ಯೆಯನ್ನು ಕೇವಲ ಮೂರು ಇಲ್ಲವೆ ಎರಡು ಪ್ರದರ್ಶನಕ್ಕೆ ಸೀಮಿತಗೊಳಿಸಬೇಕು. ನಮ್ಮ ಕಾಲದಲ್ಲಿ ಶನಿವಾರ ಮತ್ತು ಭಾನುವಾರ ಮಾತ್ರ ಬೆಳಗಿನ ಮತ್ತು ಮಧ್ಯಾಯಷ್ನದ ಸಿನಿಮಾ ಇತ್ತು. ಆದರೆ ಇಂದು ಸಿನಿಮಾ ಪ್ರದರ್ಶನ ಒಂಭತ್ತು ಗಂಟೆಗೆ ಪ್ರಾರಂಭವಾಗುತ್ತದೆ. ಹಳ್ಳಿಯ ಜನರೆಲ್ಲರು ಬೆಳಿಗ್ಗೆ ಒಂಭತ್ತು ಗಂಟೆಗೆ ಸಿನಿಮಾ ನೋಡಲು ನಗರಕ್ಕೆ ಬರುತ್ತಾರೆ, ಇದರಿಂದ ಸಾಕಷ್ಟು ಸಂಸ್ಕೃತಿ ಹಾಳಾಗುತ್ತಿದೆ, ಸಾರಿಗೆ ವ್ಯವಸ್ಥೆಯು ದುರುಪಯೋಗವಾಗುತ್ತಿದೆ. ಜೊತೆಗೆ ನಮ್ಮ ಸಾರಿಗೆ ವ್ಯವಸ್ಥೆಯೂ ಸಮರ್ಪಕವಾಗಿಲ್ಲ, ಶಾಲಾ ಮಕ್ಕಳಿಗೆ ಮತ್ತು ಕಾಲೇಜಿಗೆ ಬರತಕ್ಕ ವಿಧ್ಯಾರ್ಥಿಗಳ ದೃಷ್ಟಿಯಿಂದ ನೋಡಿದರೆ ನಮ್ಮ ಸಾರಿಗೆ ವ್ಯವಸ್ಥೆ ಅಷ್ಟೊಂದು ಸಮರ್ಪಕವಾಗಿಲ್ಲ. ಮತ್ತೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ಮಾಂಸ, ಕೋಳಿ, ಮೀನು, ಇವೆಲ್ಲಕ್ಕೂ ಸರ್ಕಾರ ಒಂದು ಬೆಲೆಯನ್ನು ನಿಗದಿಮಾಡಬೇಕು. ಇವತ್ತು ಒಂದು ಕೆ.ಜಿ. ಮಾಂಸದ ಬೆಲೆ ನೂರು ರೂಪಾಯಿಗಳಾಗಿದೆ. ಕೋಳಿ 60 ರೂಪಾಯಿ. ಹಂದಿ ಮಾಂಸ 50 ರೂಪಾಯಿ ಮಾಂಸವನ್ನು ನೇರವಾಗಿ ತಿನ್ನುವವರು ಇದ್ದಾರೆ. ಕಾಣದೇ ತಿನ್ನುವವರೂ ಇದ್ದಾರೆ. ಹಳ್ಳಿಯಲ್ಲಿ ಪಾಲ್ಟ್ರಿಯವರು ಜೀವಸಹಿತ ಕೋಳಿಯನ್ನು ಮಾರಾಟ ಮಾಡಿದರೆ 22 ರೂಪಾಯಿಗೆ ಮಾರುತ್ತಾರೆ. ಆದರೆ ಇಲ್ಲಿ ಡ್ರೆಸ್ಡ್ ಕೋಳಿ 60 ರೂಪಾಯಿ. ಇದರಿಂದ ಯಾರಿಗೆ ಲಾಭ? ಮಧ್ಯವರ್ತಿಗಳಿಗೆ ಲಾಭವಾಗುತ್ತದೆ. ಇದರಿಂದ ಗ್ರಾಹಕರಿಗೂ ಲಾಭವಾಗುವುದಿಲ್ಲ, ಕೋಳಿಯನ್ನು ಸಾಕಿ ಬೆಳೆಸಿದಂಥವರಿಗೂ ಲಾಭವಾಗುತ್ತಿಲ್ಲ. ತಾವು ಹಣ್ಣು ತರಕಾರಿಗಳಿಗೆ ನಿಗದಿಯಾದ ಬೆಲೆಯನ್ನು ಮಾಡಿರುವಂತೆ ಕಟ್ಟುನಿಟ್ಟಾಗಿ ಮಾಂಸಕ್ಕೂ ಬೆಲೆಯನ್ನು ನಿಗಧಿ ಮಾಡಲೇಬೇಕು. 1960ನೇ ಇಸವಿ ಮಾಡಲ್‌ನ ಜೀಪು ಇಂದು ನೀರಾವರಿ ಶಾಖೆಯಲ್ಲಿ ಇದೆ. ಒಂದು ಲೀಟರ್ ಪೆಟ್ರೋಲ್‌ಗೆ ನಾಲ್ಕು ಕಿಲೋಮೀಟರ್ ಓಡುತ್ತದೆ. ಇಂಥ ಜೀಪನ್ನು ಅಲ್ಲಿ ಕೊಟ್ಟಿದ್ದೀರಿ. ಇಪ್ಪತ್ತು ರೂಪಾಯಿ ಪೆಟ್ರೋಲ್ ಹಾಕಿ ನಾಲ್ಕು ಕಿಲೋ ಮೀಟರ್ ಓಡಿಸಬೇಕು. ಆದ್ದರಿಂದ ಅದನ್ನು ಬದಲಾಯಿಸಬೇಕು. ನೀರಿನ ಮೆನೇಜ್‌ಮೆಂಟ್ ಬಹಳ ಕಷ್ಟಕರವಾದುದು. ಆದ್ದರಿಂದ ಸರ್ಕಾರದವರು ಅಲ್ಲಿಗೆ ಬೇರೆ ಜೀಪುಗಳನ್ನು ಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುವೆ.

ಶ್ರೀ ಸಿದ್ಧರಾಮಯ್ಯ : ಅವರು ಈ ಸಾರಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವರ ಸಲಹೆಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಬಿ. ಶಿವಕುಮಾರ್ : ದೇವಸ್ಥಾನದಲ್ಲಿ ಭಕ್ತರ ಮೇಲೆ ಒದ್ದು ತೀರ್ಥವೆಂದು ಪೂಜಾರಿ ಎಸೆಯುತ್ತಾರೆ. ಆ ರೀತಿಯಾಯಿತು.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಹಣಕಾಸು ಸಚಿವರು ಲೋಕೋಪಯೋಗಿ ಇಲಾಖೆಗೆ ಸೇರಿರುವ ರಸ್ತೆಗಳ ಬಗ್ಗೆ ಹೇಳಿದ್ದಾರೆ. ಬಹುಪಾಲು ತಾಲ್ಲೂಕುಗಳಲ್ಲಿ 300 ರಿಂದ

400 ಕಿಲೋಮೀಟರ್ ರಸ್ತೆಗಳಿವೆ. ಆದ್ದರಿಂದ ಸರ್ಕಾರ ಕೊಟ್ಟಿರುವ 30 ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ. ಆದ್ದರಿಂದ ಜಾಸ್ತಿ ಹಣವನ್ನು ಕೊಡಬೇಕಾಗುತ್ತದೆ. ಸಣ್ಣ ನೀರಾವರಿಗೆ ಹೆಚ್ಚು ಒತ್ತನ್ನು ಕೊಡುವ ಕೆಲಸವಾಗಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರ ಸಲಹೆಯ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

12.30 ಪಿ.ಎಂ.

ಶ್ರೀ ಎಸ್. ರಾಜೇಂದ್ರನ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯೇ ಸಾಕಷ್ಟು ಮಾತನಾಡಿದ್ದೆವು. The Hon'ble Minister has said, To arrest the drop out rate among girl students belonging to the Scheduled Castes & STs especially at the primary state it is proposed to provide a School bag & Note books to all SC/girls. ಅದೇನು ಎಸ್.ಸಿ:ಎಸ್.ಟಿ ಹೆಣ್ಣು ಮಕ್ಕಳಿಗೆ ಮಾತ್ರ ಏಕೆ? ಎಸ್.ಸಿ.: ಎಸ್.ಟಿ ಜೆಂಟ್ಸಿಗೂ ಸಹ ಕೊಡಬೇಕು. ಅವರೇನು ತಪ್ಪು ಮಾಡಿದ್ದಾರೆ? ಬರೀ ಗರ್ಲ್ಸ್‌ಗೆ ಕೊಟ್ಟು ಬಿಟ್ಟರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಹೆಣ್ಣು ಮಕ್ಕಳು ಬಹಳ ಡ್ರಾಪ್ ಔಟ್ ಆಗುತ್ತಾರೆಂದು ಹೇಳಿ ಶೆಡ್ಯೂಲ್ಡ್ ಕಾಸ್ಟ್ ಶೆಡ್ಯೂಲ್ಡ್ ಟ್ರೈಬ್ ಹೆಣ್ಣುಮಕ್ಕಳಿಗೆ ಇದನ್ನು ಇಟ್ಟಿರತಕ್ಕದ್ದು. ಈ ವರ್ಷ ಇದನ್ನು ಮಾಡೋಣ. ಮುಂದೆ ಆ ವಿಚಾರ ನೋಡೋಣ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮೀನುಗಾರಿಕಾ ರಸ್ತೆಗಳು ಮತ್ತು ಮೇಂಟೆನನ್ಸ ಬಹಳಷ್ಟು ಕಡೆಗಣಿಸಲ್ಪಟ್ಟಿದೆ. ಆ ರಸ್ತೆಗಳ ಮೇಂಟೆನನ್ಸ ಬಗ್ಗೆ ತಾವೇನಾದರೂ ಗಮನಹರಿಸಿದ್ದೀರಾ? ಇದು ಒಂದು ಎರಡನೆಯದು 1993-94, 1994-95ರ ಆಶ್ರಯ ಮನೆಗಳು ವಿಶೇಷವಾಗಿ ಕೆಲವು ಜಿಲ್ಲೆಗಳಿಗೆ ಬಂದಿವೆ, ನಮ್ಮ ಜಿಲ್ಲೆಗೆ ಬಂದಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕ್ರಮ ತೆಗೆದುಕೊಳ್ಳುತ್ತೇನೆ. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮೀನುಗಾರಿಕೆ ರಸ್ತೆ ಬಗ್ಗೆ ತಾವು ಏನೂ ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೆ, ಹಣ ಬಿಡುಗಡೆ ಮಾಡುತ್ತಿದ್ದೇವೆ. ಮೀನುಗಾರಿಕಾ ರಸ್ತೆ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆಗೆ ಮತ್ತು ಕರಾವಳಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ವಿನಂತಿ ಮಾಡುತ್ತಾ, ಚೆಕ್ ಪೋಸ್ಟ್‌ಗಳ ಸುಧಾರಣೆ ಹಾಗೂ ವಿಶೇಷವಾಗಿ ಆಡಳಿತಾತ್ಮಕ ಸುಧಾರಣೆ ಬಗ್ಗೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. 1993-94ನೆಯ ಆಡಿಟ್ ವರದಿಯಲ್ಲಿ ನಾನು 35 ರಿಂದ ಸೆಕ್ಷನ್ ಪ್ರಕಾರ ಕೇಳಿದ್ದೆ. ಮಾಣ್ಣೂರು

ತಾಲ್ಲೂಕು ಪಂಚಾಯತಿಗೆ ಕೊಟ್ಟ ಅನುದಾನದಲ್ಲಿ 79 ಲಕ್ಷ ರೂಪಾಯಿ ಅವ್ಯವಹಾರ ಆಗಿದೆಯೇ? ಹಾಗೂ ಎರಡು ಕೋಟಿ 20 ಲಕ್ಷದ ವಹಿವಾಟಿನ ಮೇಲೆ ಆಕ್ಷೇಪ ಬಂದಿರುವುದು ನಿಜವೇ ಎಂಬ ಒಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಈ ರೀತಿ ಆಶ್ಚರ್ಯಕರವಾದ ಉತ್ತರ ಬಂದಿದೆ. ಲೆಕ್ಕಪರಿಶೋಧನಾ ಕಾಲದಲ್ಲಿ ಹಲವಾರು ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ಸರಿಯಾಗಿ ಒದಗಿಸಿಲ್ಲವಾದ್ದರಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯಿಂದ ಮಾಹಿತಿ ಬಂದಿದೆ. ಅಂತಿಮವಾಗಿ ಲೆಕ್ಕ ಪರಿಶೀಲನಾ ವರದಿಯನ್ನು ನೀಡಿದ ನಂತರ ಏನಾದರೂ ಅಕ್ರಮಗಳು ಕಂಡು ಬಂದಲ್ಲಿ ತನಿಖೆ ನಡೆಸಲು ಸರ್ಕಾರ ಸೂಕ್ತ ಕ್ರಮವನ್ನು ಕೈಗೊಳ್ಳುವುದು. ನಾವು ಇಷ್ಟು ತೆರಿಗೆ ಸಂಗ್ರಹ ಮಾಡಿಕೊಂಡು ಈ ರೀತಿ ಸುಧಾರಣೆ ಏನೂ ಮಾಡಲಿಕ್ಕೆ ಸಾಧ್ಯ ಇಲ್ಲದೇ ಇದ್ದರೆ ಈ ರೀತಿ ಪೋಲು ಹೋಗುವಂತಹ ವ್ಯವಸ್ಥೆ ಇದ್ದರೆ ಖಂಡಿತ ನಮ್ಮಿಂದ ಜನತೆಗೆ ನಿಜವಾಗಿ ಸೇವೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಕೂಡ ಆಡಳಿತಾತ್ಮಕ ಸುಧಾರಣೆ ಮಾಡುವ ದಿಕ್ಕಿನಲ್ಲಿ. ಯಾವುದೇ ರೀತಿ ಪೋಲಾಗದ ರೀತಿಯಲ್ಲಿ ಕಟ್ಟೆಚ್ಚರಿಗೆಯನ್ನು ವಹಿಸಿಕೊಳ್ಳಬೇಕು. ಅಕ್ರಮ ಆದರಲ್ಲಿ ಸರಿಯಾಗಿ ತನಿಖೆ ನಡೆಸಿ ಅಧಿಕಾರಿಗಳನ್ನು ಶಿಕ್ಷಿಸಬೇಕು ಎಂದು ಕೂಡ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅದನ್ನು ಭದ್ರಪಡಿಸಿ, ಅದರ ಬಗ್ಗೆ ಗಮನ ತೆಗೆದುಕೊಂಡಿದ್ದೇವೆ. ಪೋಲು ಕಡಿಮೆ ಮಾಡಿ ಅದನ್ನು ಸ್ಟ್ರಿಂಗ್ಟನ್ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅಲ್ಲಿ ಏನು ತೆರಿಗೆ ಪೋಲು ಹೋಗುತ್ತಿದೆ ಎಂದು ಹೇಳಿದ್ದಾರೆ, ಅದನ್ನು ಪತ್ತೆ ಹಚ್ಚುತಕ್ಕ ಕೆಲಸವನ್ನು ಕೂಡ ಮಾಡುತ್ತೇವೆ. ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆಯನ್ನು ಕೂಡ ಮಾಡುತ್ತೇವೆ.

ಶ್ರೀ ಎಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಜನರು ಉಪಯೋಗಿಸುವಂತಹ ಚಪ್ಪಲಿ, ಪೆನ್ನು -ಇದರ ಮೇಲೆ ತೆರಿಗೆ ಇಳಿಸುವಂತಹದನ್ನು ಮಾನ್ಯ ಸಚಿವರು ಪ್ರಸ್ತಾವನೆ ಮಾಡಲಿಲ್ಲ. ಈ ಸಂದರ್ಭದಲ್ಲಿ ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇದು ಜನಸಾಮಾನ್ಯರು ಉಪಯೋಗ ಮಾಡುವಂತಹದು, ಅದರ ತೆರಗೆಯನ್ನು ಇಳಿಸಿ. ಎರಡನೆಯದಾಗಿ ತಾವು ಕನ್ನಡ ಚಲನಚಿತ್ರಗಳಿಗೆ ಎಲ್ಲದಕ್ಕೂ 100 ಪ್ರತಿಶತ ತೆರಿಗೆ ವಿನಾಯಿತಿ ಮಾಡಿದ್ದೀರಿ, ಆದರೆ ನಾನು ಕೇಳಿಕೊಳ್ಳುವುದು ಏನು ಎಂದರೆ, ನೀವು ಗುಣಮಟ್ಟ ನಿಯಂತ್ರಣ ಮಾಡಿ. ಅದಕ್ಕೆ ನಿಜವಾಗಿಯೂ ಪ್ರೋತ್ಸಾಹ ಮಾಡಬೇಕು ಎಂದರೆ ರೀಮೇಕ್ ಮಾಡುವಂತಹ ಯಾವುದೇ ಚಿತ್ರಕ್ಕೂ ನೀವು ಪ್ರತಿಶತ ತೆರಿಗೆ ವಿನಾಯಿತಿಯನ್ನು ದಯವಿಟ್ಟು ಕೊಡಬೇಡಿ. ಇದರಿಂದ ಏನಾಗುತ್ತದೆ ಎಂದರೆ, 3-3 ತಿಂಗಳಿಗೆ ಒಂದೊಂದು ಚಲನಚಿತ್ರವನ್ನು ತೆಗೆದು ತೆರಿಗೆ ವಿನಾಯಿತಿ ಸಿಗುತ್ತದೆ ಎಂದು ನಿಮ್ಮ ಚಿತ್ರಗಳ ಸಂಖ್ಯೆ ಜಾಸ್ತಿ ಆಗುತ್ತದೆ, ಗುಣಮಟ್ಟ ಸಂಪೂರ್ಣವಾಗಿ ಕುಸಿಯುತ್ತದೆ. ಆದ್ದರಿಂದ ದಯವಿಟ್ಟು

ಇದರ ಬಗ್ಗೆ ಪರಿಶೀಲನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ರೀಮೇಕ್ ಸಿನೆಮಾಗಳಿಗೆ ಕೊಡಬೇಡಿ. ಮತ್ತು ಸಿನೆಮಾಗಳ ಗುಣ ಮಟ್ಟ ಕಾಪಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : ರೀಮೇಕ್ ಸಿನೆಮಾಗಳಿಗೆ ವಿನಾಯಿತಿ ಕೊಡುವುದಿಲ್ಲ ಎಂದು ಹೇಳಿದ್ದೇನೆ.

ಅಧ್ಯಕ್ಷರು : ಚರ್ಚೆ ಮತ್ತು ಉತ್ತರ ಮುಗಿದಿದೆ. ಈಗ ಪ್ರಕಟಣೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ......

SRI K.N. NAGE GOWDA : Sir, we are not the Government. We are the Members of the House.

ಅಧ್ಯಕ್ಷರು : ನಾನು ಏನು ಮಾಡಬೇಕು ಹೇಳಿ?

SRI K.N.NAGE GOWDA : Sir, at least give an opportunity.

MR. SPEAKER : What do you want me to do? How many Members I have to give the opportunity?

SRI K.N.NAGEGOWDA : Sir, I may belong to the treasury bench, I may not belong to opposition party. But I am a member of this House.

MR.SPEAKER : Then, Please tell me how many members I have to allow?

SRI K.N. NAGE GOWDA : Sir, I am very unhappy about this.

MR. SPEAKER : How many member should get the opportunity? Is there any specific number?

SRI K.N.NAGE GOWDA : You must give an opportunity to me also.

MR.SPEAKER : I am sorry.

(INTERRUPTIONS)

SRI K.N.NAGE GOWDA : I am sorry. This is not the correct procedure. I have got every right to ask clarification.

MR. SPEAKER : I am sorry. Let the better man come and take charge. I am adjourning the House.

(The house adjourned at 12.35p.m.)

(ಸಭೆಯು 12.50ಕ್ಕೆ ಪುನ : ಸಮಾವೇಶಗೊಂಡಿತು.)

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸಭಾಧ್ಯಕ್ಷರೇ, ತಾವು ಅನುಮತಿಯನ್ನು ಕೊಟ್ಟರೆ, ತಮ್ಮ ಅನುಮತಿಯನ್ನು ತಗೆದುಕೊಂಡು ನನ್ನ ಅನಿಸಿಕೆಗಳನ್ನು ಹೇಳಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ನಡೆದಂಥ ಘಟನೆ ನನ್ನ ಮನಸ್ಸಿಗೂ ಸಹ ಬಹಳ ನೋವನ್ನು ತಂದುಕೊಟ್ಟಿದೆ. ನನ್ನ ಆತುರ ಏನಿತ್ತು ಎಂದು ಹೇಳಿದರೆ ಇವತ್ತು ಸದನ ಕೊನೆ ದಿವಸ. ರಾಜ್ಯಸರ್ಕಾರದಿಂದ ಬೆಲ್ಲಕ್ಕೆ ಬೆಂಬಲಿತ ಬೆಲೆಯನ್ನು ಕೇಳಬೇಕು ಎನ್ನುವ ಆತುರದಿಂದ ತಮ್ಮ ಮನಸ್ಸಿಗೆ ನಾನು ನೋವು ಮಾಡಿದೆ. ತಾವು ದಯವಿಟ್ಟು ಕ್ಷಮಿಸಬೇಕು. ತಾವು ನಾನೂ 20-26 ವರ್ಷಗಳ ಸ್ನೇಹಿತರು. ನಿಮ್ಮನ್ನು ನಾನು ಬಹಳ ಚೆನ್ನಾಗಿ ಬಲ್ಲೆ ಮತ್ತು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಆದರೆ ಈ ರೀತಿ ಘಟನೆ ಆಗಬಾರದಾಗಿತ್ತು. ಅದಕ್ಕೆ ನಾನು ಕಾರಣ ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ತಾವು ಮನಬಲಿಸಿಕೊಂಡು ತಾವು ಇಲ್ಲೇ ಕೆಲಸ ಮಾಡಬೇಕು. ತಾವು ಅತ್ಯುತ್ತಮವಾದಂಥ ಅಧ್ಯಕ್ಷರು. ಅತ್ಯಂತ ತಿಳಿವಳಿಕೆಯುಳ್ಳವರು ಸಂಸದೀಯ ಪಟುಗಳು. ಅತ್ಯಂತ ಸಂಸದೀಯ ಪಟು ಎಂದು ಹೆಸರನ್ನು ಪಡೆದುಕೊಂಡಿರುವವರು. ತಮ್ಮ ಸೇವೆ ನಮ್ಮೆಲ್ಲರಿಗೂ ಅಗತ್ಯ ಇದೆ. ಅದರಲ್ಲೂ ವಿಶೇಷವಾಗಿ ನೀವು ನನ್ನ ಅತ್ಯಂತ ಆತ್ಮೀಯ ಸ್ನೇಹಿತರು. ಆದ್ದರಿಂದ ತಾವು ಆ ಸ್ಥಾನದಲ್ಲಿ ಮುಂದುವರೆದು ನಮ್ಮೆಲ್ಲರಿಗೂ ಸಹ ತಮ್ಮ ಸೇವೆ ಅಗತ್ಯವಾಗಿ ಆಗಬೇಕು. ಇಲ್ಲಿ ನಡೆದ ಘಟನೆಗೆ ನಾನೊಬ್ಬನೇ ಕಾರಣ ಎನ್ನುವ ಹೊಣೆಯನ್ನು ಹೊತ್ತು ಕ್ಷಮಾಪಣೆ ಕೇಳುತ್ತೇನೆ.

ಅಧ್ಯಕ್ಷರು : ಅತ್ಯಂತ ಆತ್ಮೀಯರಾದದ್ದರಿಂದಲೇ ನನಗೆ ಬೇಸರ ಆದದ್ದು. ಮತ್ತೆ ಇನ್ನೇನು ಕಾರಣವಿಲ್ಲ. ಬೇರೆ ಯಾರಾದರೂ ಮಾಡಿದ್ದರೆ ಹಾಗೆಯೇ ತಡೆದುಕೊಳ್ಳುತ್ತಿದ್ದೆ. ದಯಮಾಡಿ ಏನೂ ತಪ್ಪು ತಿಳಿದುಕೊಳ್ಳಬೇಡಿ.

ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ